# ಕೊಡಗು ಸಂಗಾತಿ

ಜುಲೈ 16 ರಿಂದ 31, 2000 ಪಾಕ್ಷಿಕ ಪತ್ರಿಕೆ (ಕಾರ್ತೆಲ್ 32 ಆಟಿ1-15 )

ನಂ. ೩೫, ಸವಿತಾ ನಿಲಯ, ೧ನೇ ಕ್ರಾಸ್, ೪ನೇ ಬ್ಲಾಕ್, ಜಯಲಕ್ಷ್ಮಿಪುರಂ, ಮೈಸೂರು - ೫೭೦ ೦೧೨

ಸಂಪಾದಕಿ : ಪಟ್ಟಡ ಶೀಲಾಮಣಿ

ಕನ್ನಡ ಮತ್ತು ಅರೆಭಾಷೆಯ ಏಕೈಕ ಪಾಕ್ಷಿಕ ಪತ್ರಿಕೆ

KA/SK/MYS-88 ಸಂಪುಟ : 4 ಸಂಚಿಕೆ : 14 ಪುಟಗಳು : 24 ಬೆಲೆ ರೂ. : 6-00



ಲೇಖನ : ಒಳಪುಟಗಳಲ್ಲಿ

**ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ 1999ನೇ ಸಾಲಿನ ಪ್ರಶಸ್ತಿ ವಿಜೇತರು ಹೊರನಾಡ ಕನ್ನಡಿಗರು ಅರೆಭಾಷಿಕರು ಆದ ಶ್ರೀ ಕೇದಗಡಿ ಗುಡ್ಡಪ್ಪ ಗೌಡರು.**

ಜೈನೀರ ಶುಶ್ಮಿತ ವೇಣು, ಹಾಸನ,
ಜನನ 2-7-1999



## ಒಂದನೇ ವರ್ಷದ ಹುಟ್ಟುಹಬ್ಬದ ಶುಭಾಶಯಗಳು

*ಇಂಥ ಹುಟ್ಟು ಹಬ್ಬ ನೂರುವರ್ಷ ಬರಲಿತೇಳಿ ಶುಭ ಹಾರೈಸುವವರು.*

ಕೂಸುನ :

ಅವ್ವ : ಜೈನೀರ ಪಾರ್ವತಿ ಚಂದ್ರಪ್ಪ ಹಾಸನ
ಅಪ್ಪ ಅಮ್ಮ : ಜೈನೀರ ವೇಣು, ಸುಮ ಹಾಸನ
ಬೋಜಪ್ಪ : ಜೈನೀರ ಲೋಕೇಶ್ ಕೂರ್ಗ್ ಚಿಕ್ಕನ್ ಸೆಂಟರ್, ಹಾಸನ
ಮಾವ ಅತ್ತೆ : ಕ್ಯಾಚಪ್ಪನ ನಂದ, ಮೈನಾ,
ಅತ್ತಿಗೆ : ಕುಸ್ಮಿತ, ಭಾವ : ಬಿನುಪು, ಹಾಸನ,
ಅವ್ವ ತಾತ : ತೊತ್ತಿಯನ ಲಕ್ಷ್ಮಣ, ಜಾನಕ್ಕಿ,
ಮತ್ತೆ ಅತ್ತೆಕ, ಮಾವಂದರ್, ಬಾಡಗ

**ಪ್ರಕಟಣೆ :** ಜೈನೀರ ಪಾರ್ವತಿ, ಉದಯಗಿರಿ ನಗರ, ಹಾಸನ,

---

## ವಿಶೇಷ ಪ್ರಕಟಣೆ : *ಕೊಡಗು ಗೌಡ ವಿದ್ಯಾರ್ಥಿ ವಸತಿ ನಿಲಯಕ್ಕೆ ಪ್ರವೇಶಾವಕಾಶ*

ಕೊಡಗು ಗೌಡ ವಿದ್ಯಾಸಂಘ ಶಾಖೆ, ಜಯಲಕ್ಷ್ಮಿಪುರಂ, ಮೈಸೂರು ಈ ಮೇಲ್ಕಂಡ ವಸತಿ ನಿಲಯಕ್ಕೆ 2000-2001 ರ ಸಾಲಿಗೆ ಪ್ರವೇಶ ಬಯಸುವ ಅರೆಭಾಷೆ ಗೌಡ ಜನಾಂಗದ ಪುರುಷ ವಿದ್ಯಾರ್ಥಿಗಳಿಂದ ಅರ್ಜಿಯನ್ನು ಆಹ್ವಾನಿಸಲಾಗಿದೆ. ಸೇರ ಬಯಸುವ ವಿದ್ಯಾರ್ಥಿಗಳು ಇದೇ ಜುಲೈ ತಿಂಗಳ 25ರ ಒಳಗಾಗಿ ಅರ್ಜಿ ಸಲ್ಲಿಸುವಂತೆ ಕೋರಲಾಗಿದೆ.

*ಶ್ರೀ ಕುಯ್ಯುಮುಡಿ ಕೆ. ಪೂರ್ಣಯ್ಯ*
*ಅಧ್ಯಕ್ಷರು, ಕೊ. ಗೌ. ವಿ. ಸಂಘ,*
*ಮಡಿಕೇರಿ ಇವರ ಅಪ್ಪಣೆ ಮೇರೆಗೆ*

*ಶ್ರೀ ಪೋರೆಯನ ಆನಂದ*
*ವ್ಯವಸ್ಥಾಪಕರು,*
*ಕೊ.ಗೌ.ವಿ. ನಿಲಯ, ಮೈಸೂರು.*

---

# WANTED

To work in reputed Multinational Company at Bangalore.
for marketing of Chemicals and Laboratary Instruments.

*Only Male candidates eligible.*

**Qualification :** M.Sc., Chemistry/Bio-Chemistry/Microbiology/Bio-Technology

**Contact :** T.S. Rajesh. (080-6616770)
# 256, 13th Main, II block, Banasankari I stage,
Bangalore - 570 050

---

## ಜ್ಯೋತಿಷ್ಯ ಶಾಸ್ತ್ರ ಕಲಿಯುವವರಿಗೊಂದು ಸುವರ್ಣಾವಕಾಶ

ನಮ್ಮಲ್ಲಿ ಜ್ಯೋತಿಷ್ಯ ಶಾಸ್ತ್ರ ಕಲಿಯಲು ಉತ್ಸಾಹ ಇರುವ ಹುಡುಗ-ಹುಡುಗಿಯರಿಗೆ ಒಂದು ವರ್ಷದ ಅವಧಿಯಲ್ಲಿ ಜ್ಯೋತಿಷ್ಯ ಶಾಸ್ತ್ರದ ವಿಷಯಗಳನ್ನು ಕಲಿಸಿಕೊಡಲಾಗುವುದು,

**ವಿಷಯ :** (ಜಾತಕ ನೋಡಲು, ವಧುವರರ ಸಾಲಾವಳಿ, ಮೂಹೂರ್ತ, ಹೊಸಮನೆಗಳಿಗೆ ಪಂಚಾಂಗ, ಜಲ ನೋಡಲು, ಮತ್ತು ಇನ್ನಿತರ ಹಲವಾರು ಪೂಜೆ ಪುರಸ್ಕಾರ ಮಾಡಲು ಕಲಿಸಿಕೊಡಲಾಗುವುದು.)

ಆಸಕ್ತರು ಹೆಚ್ಚಿನ ವಿವರಗಳಿಗೆ ಈ ಕೆಳಗಿನ ವಿಳಾಸಕ್ಕೆ ಜುಲೈ 30 ರ ಒಳಗೆ ಭೇಟಿ ಮತ್ತು ಸಂಪರ್ಕಿಸುವುದು

ವಿಳಾಸ : **ಗುತ್ತಿಮುಂಡನ ಗಿರೀಶ್ ಕುಮಾರ್, ಜ್ಯೋತಿಷ್ಯ ಮತ್ತು ವೈದ್ಯರು**
**ಮಹಾಗಣಪತಿ ದೇವಸ್ಥಾನದ ಹತ್ತಿರ, ಕೊಯನಾಡು ಅಂಚೆ,**
**ಸಂಪಾಜೆ ಗ್ರಾಮ, ಮಡಿಕೇರಿ ತಾಲ್ಲೂಕು, ಕೊಡಗು**
**ಫೋನ್ ನಂ. 08272/34468 (ಮನೆ)**

2000, ಜುಲೈ 16 ರಿಂದ 31 ರ ತನಕ

## ಒಳನೋಟ


| ಕನ್ನಡ ವಿಭಾಗ | ಲೇಖಕರು | ಪುಟಗಳು |
|---|---|---|
| ವ್ಯರ್ಥವಾಗಿ ಹಾಳಾಗುತ್ತಿರುವ ಕಾಡುಹಲಸಿನ ಹಣ್ಣುಗಳು | - ಸಂಪಾದಕೀಯ | 02 |
| ಕೊಡಗಿನ ಮಳೆಗಾಲದ ಮಡಗಲಕಾಯಿ | - ಸಂಗಾತಿ ವರದಿ | 02 |
| ಪ್ರಾಚೀನ ಭಾರತದ ಇತಿಹಾಸ ಮತ್ತು ಭಾಷಿಕ ಘಟಕಗಳು | - ಬೈತಡ್ಕ ಎ. ಬೆಳ್ಯಪ್ಪ | 03 |
| ಮೂಲಗುಣ ಉಳಿಸಿಕೊಂಡಿರುವ ಕಲೆ-ಯಕ್ಷಗಾನ | | |
| ಸುಳ್ಯದಲ್ಲಿ ಡಾ. ಪುರಷೋತ್ತಮ ಬಿಳಿಮಲೆ | - ಎಂ. ಆರ್. ಗೋಪಾಲ್ | 04 |
| ಸಂಗಾತಿ ಭವಿಷ್ಯ | - ಗಿರೀಶ್‌ಕುಮಾರ್ | 07 |
| ಹಂದಿ ಸಾಕಾಣೆ ಲಾಭದಾಯಕ ವೈಜ್ಞಾನಿಕ ಮಾಹಿತಿಗಳು | - ಡಾ. ಹೆಚ್. ಡಿ. ರಮೇಶ್‌ರಾಜು | 11 |
| ವ್ಯಕ್ತಿ ಪರಿಚಯ : ಕೇದಗಡಿ ಗುಡ್ಡಪ್ಪ ಗೌಡ | - ಗೋವಿಂದಮ್ಮನ ಪ್ರವೀಣ್‌ಕುಮಾರ್ | 13 |
| ಶ್ರೀ ಲಕ್ಷ್ಮೀ ವೆಂಕಟೇಶ್ವರ ಮಹಾತ್ಮೆ | - ಮಳ್ಳಂದಿರ ಲಲಿತಾ ಶೇಷಗಿರಿ | 14 |
| ವನಿತಾಲೋಕ : ಗೃಹಸಂಗಾತಿ | - ಸಂಗಾತಿ ವರದಿ | 16 |
| ಸರ್ಪಗಂಧ - ಧಾರವಾಹಿ - 34 | - ಕೌಂಡಿನ್ಯ | 17 |
| ವಿದ್ಯಾವಂತ ನಿರದ್ಯೋಗಿಗಳಿಗೆ ಮಾರ್ಗದರ್ಶನ ಕೈಪಿಡಿ | - ತಡಿಯಪ್ಪನ ಕುಮಾರ ಜಯ | 18 |
| ಪತ್ರ ವಿಭಾಗ | - ಸಂಗಾತಿ ವರದಿ | 19 |
| **ಅರೆಭಾಷಿಕ ವಿಭಾಗ** | | |
| ಜಿಪುಣ | - ಬೋಳಿಯನ ಆಶಾಭೀಮಯ್ಯ | 05 |
| ವಾಂಟೆಡ್ ಮಿಸ್ಟರ್ ರಾಜು - ಧಾರಾವಾಹಿ - 14 | - ಶಂಕರನ ಬಸಪ್ಪ | 08 |



| | |
|---|---|
| ಚಂದಾ ಕಳುಹಿಸುವ ಮತ್ತು ಜಾಹೀರಾತು ಪ್ರಸಾರ ಕಛೇರಿ | **ಕೊಡಗು ಸಂಗಾತಿ,** 35,"ಸವಿತಾ ನಿಲಯ", 1ನೇ ಕ್ರಾಸ್, 4ನೇ ಬ್ಲಾಕ್, ಜಯಲಕ್ಷ್ಮಿಪುರಂ, ಮೈಸೂರು - 12. **ಫೋನ್ : 0821/516771** |
| ಮಡಿಕೇರಿಯಲ್ಲಿ ಸಂಗಾತಿ ಕಛೇರಿ | ಬೈತಡ್ಕ ಜಾನಕಿ ಬೆಳ್ಯಪ್ಪ,,ನಂ. 21-16 ಎಲ್. ಐ. ಸಿ. ಹತ್ತಿರ, ರೇಸ್ ಕೋರ್ಸ್ ರಸ್ತೆ, ಮಡಿಕೇರಿ, **ಫೋನ್ : 08272/28047** |
| ಸಂಗಾತಿ ಚಿಹ್ನೆ, ಹಸೆಮಣೆ ಪುಸ್ತಕ ಅರೆಭಾಷೆ ಕ್ಯಾಸೆಟ್/ಶುಭಾಶಯ ಕಾರ್ಡ್ಸ್ ಲಭ್ಯ | ಪಾಂಡ್ಯನ್ ಕ್ಯಾಸೆಟ್ ಅಂಗಡಿ, ಖಾಸಗಿ ಬಸ್ ನಿಲ್ದಾಣ, ಮಡಿಕೇರಿ **ಫೋನ್ :** 08272/29620 |
| ಕುಶಾಲ ನಗರ | ಕುಂಭಗೌಡನ ಸೋಮಣ್ಣ, ಮಯೂರ ಕೋಲ್ಡ್ ಸ್ಟೋರೇಜ್, ಮುಖ್ಯ ರಸ್ತೆ, ಕುಶಾಲನಗರ - 571 234 **ಫೋನ್ :** 08276/73370 |
| ಬೆಂಗಳೂರು ಮಹಾನಗರ | ಅಮ್ಮಾಜೀರ ಪೊನ್ನಪ್ಪ, 20, 1ನೇ ಮೈನ್, 4ನೇ ಕ್ರಾಸ್, ಸಾಕಮ್ಮ ಗಾರ್ಡನ್, ಬಸವನಗುಡಿ, ಬೆಂಗಳೂರು - 04, **ಫೋನ್ :**080/6342822 |
| ಬೆಂಗಳೂರು ಮಹಾನಗರ | ಕಲ್ಲುಮುಟ್ಲು ಬಸಪ್ಪ, ನಂ. 37, 3ನೇ ಮೇನ್, ನಂಜಪ್ಪ ಬ್ಲಾಕ್, ಕೆಂಪೇಗೌಡ ನಗರ, ಬೆಂಗಳೂರು -19,**ಫೋನ್ :** 080/6500946 |



**ಚಂದಾ ವಿವರ : ಜೀವಾವಧಿ ಸದಸ್ಯತನ - 2000 ರೂ., ಬಿಡಿ ಪ್ರತಿ - 6 ರೂ., ಅರ್ಧ ವಾರ್ಷಿಕ -75 ರೂ., ವಾರ್ಷಿಕ ಚಂದಾ - 150 ರೂ.** (ಅಂಚೆ ವೆಚ್ಚ ಸೇರಿ), ಒಲೆಗೊಂದರಂತೆ ಸದಸ್ಯರಾಗಿ ಕೊಂಡು ಓದಿ.

# ಸಂಪಾದಕೀಯ : ವ್ಯರ್ಥವಾಗಿ ಹಾಳಾಗುತ್ತಿರುವ ಕಾಡುಹಲಸಿನ ಹಣ್ಣುಗಳು

ಕೊಡಗಿನ ಕಾಡುಗಳಲ್ಲಿ ಯಥೇಚ್ಛವಾಗಿ ಬೇಸಿಗೆ ಕಾಲದ ಕೊನೆಯಲ್ಲಿ ಸಿಗುವ ಹಲಸಿನ ಹಣ್ಣು ಯಾರೂ ಕೀಳುವವರಿಲ್ಲದೆ ಕೊಳೆತು ಹಾಳಾಗುತ್ತಿದೆ.

ಹಿಂದಿನ ಕಾಲದಲ್ಲಿ, ಹಲಸಿನ ಹಣ್ಣನ್ನು ತಿನ್ನುವುದು, ಅದರಿಂದ ಕಜ್ಜಾಯ, ಹಪ್ಪಳ, ಹಿಟ್ಟು, ದೋಸೆ ಮುಂತಾದ ತಿನಿಸುಗಳನ್ನು, ಹಲಸಿನ ಹಣ್ಣಿನ ಬೀಜವನ್ನುತೊಳೆದು ಮಣ್ಣನ್ನು ಬಳಿದು ತಿಂಗಳುಗಟ್ಟಲೆ ಶೇಖರಿಸಿಡುವುದು ಇತ್ತು. ಯುವತಿಯರಿಗೆ ಈ ಹಲಸಿನ ಬೀಜದ ಚಟ್ನಿ, ಸಾರು ಬೇಯಿಸಿದ ಅಥವಾ ಹೊರೆದ ಬೀಜವನ್ನು ಜಜ್ಜಿ ಪುಡಿ ಮಾಡಿ ಕೊಬ್ಬರಿ ಬೆಲ್ಲ ಸೇರಿಸಿ ಉಪಹಾರಕ್ಕೂ, ಸಾರು ಮಾಡುವುದಕ್ಕೂ, ಹಲಸಿನ ಕಾಯಿಯ ತೊಳೆಯನ್ನು ಬೇಯಿಸಿ ತೆಂಗಿನಕಾಯಿ, ಮೆಣಸು, ಉಪ್ಪು ಸೇರಿಸಿ ಎಣ್ಣೆಯಿಂದ ಒಗ್ಗರಣೆ ಮಾಡಿ ಉಪಹಾರವಾಗಿಯೂ, ಪಲ್ಯವಾಗಿಯೂ ಉಪಯೋಗಿಸುತ್ತಿದ್ದರು. ಈಗ ಈ ರೀತಿಯ ತಿಂಡಿ ತಿನಿಸುಗಳು ಬಹಳ ಅಪರೂಪವಾಗಿದೆ. ರೆಡಿಮೇಡ್ ತಿಂಡಿ ತಿನಿಸುಗಳ ಹಾವಳಿಗಳಿಂದಾಗಿ ಇಂತಹ ತಿನಿಸುಗಳನ್ನು ಮಾಡುವುದನ್ನೆ ಬಿಟ್ಟಿದ್ದಾರೆ. ಕೇರಳ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಜನರು ಇಂತಹ ತಿನಿಸುಗಳನ್ನು ಯಥೇಚ್ಛವಾಗಿ ತಯಾರಿಸಿ ಹೊರದೇಶಗಳಿಗೂ ರಫ್ತು ಮಾಡುತ್ತಿದ್ದಾರೆ. ಆದರೆ ಕೊಡಗಿನ ಈಗಿನ ಯುವಕ ಯುವತಿಯರು ಇದೊಂದು ಕಡಿಮೆ ತರಹದ ತಿನಿಸುಗಳೆಂದು ಜಿಜ್ಞಾಸೆಪಟ್ಟು ಈ ಹಲಸಿನ ಕಾಯಿ ಹಪ್ಪಳ ಮಾಡುವ ಕಲೆಯನ್ನೆ ಮರೆತಿದ್ದಾರೆ. ಇನ್ನಿತರ ಹಲವಾರು ತಿನಿಸುಗಳನ್ನು ತಯಾರಿಸುವ ಕಲೆಯೇ ನಾಶವಾಗಿ ಹೋಗಿದೆ. ಇದಕ್ಕೆಲ್ಲಾ ನಮ್ಮ ಯುವಕ ಯುವತಿಯರು ಪಾಶ್ಚಾತ್ಯ ನಾಗರೀಕತೆಯ ಅನುಕರಣೆ ಕಾಫಿ ತೋಟಕ್ಕೆ ನೆರಳಾಗುತ್ತದೆಂದು ಇರುವ ಮರಗಳನ್ನು ಕಡಿದೋ ಅದರ ರೆಂಬೆಗಳನ್ನು ಕಡಿದೊ ಬೋಳು ಮಾಡಿ ಕಾಡು ಹಲಸಿನ ಮರದ ಈ ಜಾತಿಯ ಮರಗಳೇ ಮಾಯವಾಗುತ್ತಿವೆ. ಪ್ರಯತ್ನಪಟ್ಟರೆ ಕೊಡಗಿನ ಕಾಡುಗಳಲ್ಲಿ ಸಿಗುವ ಹಲಸಿನಕಾಯಿ ಹಣ್ಣುಗಳನ್ನು ಶೇಖರಿಸಿ ಅದರಿಂದಲೇ ಒಂದು ಉದ್ಯಮವನ್ನು ವಿದ್ಯಾವಂತ ನಿರುದ್ಯೋಗಿಗಳು ಮಾಡಿಕೊಳ್ಳಬಹುದೆಂದು ಸಂಗಾತಿಯು ಅಭಿಪ್ರಾಯ ಪಡುತ್ತದೆ.

## ಕೊಡಗಿನ ಮಳೆಗಾಲದ ಮಡಗಲ ಕಾಯಿ


ಮಳೆಗಾಲದ ಮುಂಚೆ ಒಂದೆರೆಡು ಮಳೆ ಬಿದ್ದದ್ದೇ ತಡ. ಮಲೆನಾಡ ಕೃಷಿಕರು ಗುದ್ದಲಿ ಹಿಡಿದು ಬೆಟ್ಟಕ್ಕೆ ಹೋಗುತ್ತಾರೆ. ಅವರ ಸೂಕ್ಷ್ಮ ಕಣ್ಣುಗಳಿಗೆ ಅಲ್ಲೊ ಇಲ್ಲೊ ಮರದ ಸಂದಿನಲ್ಲಿ ಮೆಲ್ಲಗೆ ಚಿಗುರುತ್ತಿರುವ 'ಮೂಡ್ಹಾಗಲ' ಎಂಬ ಕಾಡು ತರಕಾರಿಯ ಬಳ್ಳಿಯ ಅಂಕುರ ಕಾಣುತ್ತದೆ. ಅದರ ಸುತ್ತ ಕೊಂಚ ಗುದ್ದಲಿ ಆಡಿಸಿ, ಕಳೆಗಿಡಗಳು ಬೆಳೆದಿದ್ದರೆ ಕಿತ್ತು ಹಾಕಿ. ಅಲ್ಲೇ ಅಕ್ಕ ಪಕ್ಕ ಬಿದ್ದಿದ್ದ ಸುಡುಮಣ್ಣು ತಂದು ಹಾಕುತ್ತಾರೆ. ದನ ಕರು ತುಳಿಯದಂತೆ ಅಂಕುರದ ಸುತ್ತ ಒಂದೆರಡು ಕಲ್ಲು ಇಟ್ಟು. ಬಳ್ಳಿಗೆ ಆಸರೆ ಕೊಟ್ಟು ಮನೆಗೆ ಹಿಂದಿರುಗುತ್ತಾರೆ.

ನಂತರ ಜುಲೈ ಆಗಸ್ಟ್ ತಿಂಗಳಲ್ಲಿ ಅತ್ತ ವಾಕಿಂಗ್ ಹೋದಾಗ, ನಾಲ್ಕಾರು ಕಾಯಿ ಬಿಟ್ಟಿದ್ದರೆ ಕಿತ್ತು ತರುತ್ತಾರೆ. ವಾರಕ್ಕೆ ನಾಲ್ಕೇ ಕಾಯಿ ಸಿಕ್ಕರೂ ಸಾಕು, ಯಜಮಾನ್ತಿಗೆ ಆ ದಿನ ಸಂಭ್ರಮ.

ವಿಶೇಷವಾಗಿ ಕೊಡಗಿನಲ್ಲಿ ಮಡಗಲಕಾಯಿ ಸಿಕ್ಕರೆ ಅಂದು ಖಂಡಿತವಾಗಿ ಯಜಮಾನ್ತಿಯು ಸಾರು ಮಾಡಿ ಅಕ್ಕಿಯ ರೊಟ್ಟಿಯನ್ನು ಮಾಡಿ ಮನೆಯವರಿಗೆ ಊಟ ಬಡಿಸುತ್ತಾಳೆ.

ಮುಷ್ಟಿಗಾತ್ರದ ಮೂಡ್‌ಹಾಗಲಕ್ಕೆ ಶಿವಮೊಗ್ಗ, ಶೃಂಗೇರಿ, ಕೊಡಗಿನ ಕಡೆಗೆ 'ಮಡ್ಹಾಗಲ' ಎಂದೂ ಕರೆಯುತ್ತಾರೆ. ಕರ್ಲಿಕಾಯಿ ಎಂದೂ ಹೇಳುತ್ತಾರೆ. ಹಾಗಲ ಕಾಯಿಯಂತೇ ಬೀಜ, ತಿರುಳು. ಕಹಿ ಅಂಶ ಇಲ್ಲ. ಎಂಥ ಪದಾರ್ಥದಲ್ಲೂ ರುಚಿಕರ.

ಆದರೇನು. ಬೇಕಾದಷ್ಟು ಬೆಳೆಯಲು ಸಾಧ್ಯವಿಲ್ಲ. ಕಳೆದ ವರ್ಷ ಬಳ್ಳಿ ಹಬ್ಬಿದ್ದಲ್ಲೇ ಗಡ್ಡೆ ಇರುವುದರಿಂದ ಈ ವರ್ಷವೂ ಬಳ್ಳಿ ಹಬ್ಬುತ್ತದೆ. ಕೆಲವು ಮಡಗಲ ಕಾಯಿ 1ಕೆ.ಜಿ ಗೆ ರೂ.50/- ಕ್ಕೂ ಹೆಚ್ಚು. ಭೂಹೀನ ಕೃಷಿಕರು. ಅಥವಾ ಅಲೆಮಾರಿಗಳು ಬೆಟ್ಟ



ಗುಡ್ಡಗಳಿಗೆ ಹೋಗಿ ಕೇಜಿಗಟ್ಟಲೆ ಕೊಯ್ದು ಪೇಟೆಗೆ ತಂದು ಕಿಲೊಕ್ಕೆ 20ಕ್ಕೊ 30ಕ್ಕೊ ಮಾರುತ್ತಾರೆ. ಮಾರ್ಕೆಟ್ಟಿನಲ್ಲಿ ಅದರ ಬೆಲೆ 60ಕ್ಕೂ ಏರಿರುತ್ತದೆ.

ಇದನ್ನು ಬೆಳೆಯಿರೆಂದು ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತಿನ ಹಾಸನದ ಜಿಲ್ಲಾ ಘಟಕದವರು ಕೃಷಿಕರಿಗೆ ಹಣ್ಣಿನ ಬೀಜಗಳನ್ನು ಕಳೆದ ವರ್ಷ ಹಂಚಿದ್ದರು. 'ಎಲ್ಲೂ ಮೊಳೆಯಲಿಲ್ಲ' ಎನ್ನುತ್ತಾರೆ, ಡಾ. ವಿಜಯ ಅಂಗಡಿ. ಮೂಡಿಗೆರೆಯ ಕೃಷಿ ಸಂಶೋಧನಾ ಸಂಸ್ಥೆಯ ವಿಜ್ಞಾನಿ ಎಮ್. ವೆಂಕಟೇಶ್‌ರ ಪ್ರಕಾರ ಕುಕುರ್ಬೇಸಿಯೇ ಕುಟುಂಬದ ಈ ಬಳ್ಳಿ 'ಮೆಮೊರ್ಡಿಕಾ ಡೈಹಿಕಾ' (dioica) ಎಂದು ಕರೆಯುತ್ತಾರೆ. ಗಂಡು ಬಳ್ಳಿಯಲ್ಲಿ ಕಾಯಿ ಬರುವುದಿಲ್ಲ, ಹೆಣ್ಣು ಬಳ್ಳಿಯಲ್ಲಿ ಮಾತ್ರ. ಆದರೆ ಬೀಜ ನೆಟ್ಟು ಖಾತ್ರಿಯಾಗಿ ಸಸ್ಯ ಬೆಳೆಸುವ ಮಾಹಿತಿ ಅಲ್ಲೂ ಲಭ್ಯವಿಲ್ಲ.

ಕೃಷಿ ವಿಜ್ಞಾನದಲ್ಲಿ, ತೋಟಗಾರಿಕೆಯಲ್ಲಿ ಇಷ್ಟೆಲ್ಲ ಕ್ರಾಂತಿಗಳಾಗುತ್ತಿವೆ. ಆದರೆ ಯಾಕೆ ಯಾವ ವಿಜ್ಞಾನಿಯೂ ಗಂಭೀರ ಲಕ್ಷ್ಯ ಕೊಟ್ಟಂತಿಲ್ಲವೇಕೆ? ಅಂಗಾಂಶ ಕಸಿಗೆ ಯಾರೂ ಯತ್ನಿಸಿಲ್ಲವೇಕೆ?

– ಸಂಗಾತಿ

ವ್ಯಕ್ತಿ ಕೋಪಗೊಂಡಾಗ ಹೆಚ್ಚು ಶಕ್ತಿ ವ್ಯರ್ಥವಾಗುವುದು

# ಪ್ರಾಚೀನ ಭಾರತದ ಇತಿಹಾಸ ಮತ್ತು ಭಾಷಿಕ ಘಟಕಗಳು

ಮಾನವ ಜನಾಂಗದ ರಚನೆ ಒಂದು ಪ್ರಗತಿಶೀಲ ಪ್ರವೃತ್ತಿ. ಈ ವಿಶಾಲ ಉಪಖಂಡವು ಒಂದಾನೊಂದು ಕಾಲದಲ್ಲಿ ಶೂನ್ಯವಾಗಿತ್ತೊ ಎಂದು ಊಹಿಸಿಕೊಳ್ಳುವುದು ಕಷ್ಟಕರವಾದ ಸಂಗತಿ. ಇಂದು ಭಾರತ ಉಪಖಂಡದಲ್ಲಿರುವ ನೂರುಕೋಟಿ ಜನರು ಈ ಮಣ್ಣಿನ ಒಂದೇ ಮಾನವಶಾಖೆಯ ವ್ಯಕ್ತಿಗಳಾಗಿ ವೃದ್ಧಿ ಹೊಂದಿದರೆ ಅಥವಾ ಭಾರತದ ಹೊರಗಡೆಯಿಂದ ಇಲ್ಲಿಗೆ ಬಂದಿರಬಹುದಾದ ಜನಾಂಗಗಳ ಶಾಖೆಗಳಾಗಿರಬಹುದೊ ಎಂದು ವಿಂಗಡಿಸಲು ನಾವು ಹೊರಟಾಗ ಹೆಚ್ಚುಕಡಿಮೆ ನಾವು ಈ ಸಮಸ್ಯೆಗೆ ಉತ್ತರವನ್ನು ಸುಲಭವಾಗಿ ಹುಡುಕುವುದು ಈ ಉಪಖಂಡದ ಹೊರಗಡೆಯೇ ಜನಾಂಗವೆಂಬುದು ಮಾನವರ ಒಂದು ಪಂಗಡ. ಭಾರತದ ಮೂರು ಕಡೆಗಳಲ್ಲಿ ಸಮುದ್ರಮೇರೆಗಳಿರುವುದರಿಂದ ವಿಶೇಷ ರೀತಿಯ ರಾಜಕೀಯ ಮತ್ತು ಸಾಂಸ್ಕೃತಿಕ ಪ್ರದೇಶವಾಗಿ ಬೆಳೆಯುವಂತಾಗಿದೆ. ಆದರೆ ಈ ವಿಶಾಲ ಭಾರತವು ನಾನಾ ರೀತಿಯ ಪ್ರಕೃತಿ ಲಕ್ಷಣಗಳಿಂದಲೂ ಮತ್ತು ವಾಯುಗುಣ ವೈವಿಧ್ಯಗಳಿಂದ ಕೂಡಿರುವುದರಿಂದಲೂ ವಿವಿಧ ಬುಡಕಟ್ಟು ಮತ್ತು ಭಾಷೆಗಳನ್ನು ಬೆಳೆಸಲು ಎಡೆಮಾಡಿಕೊಟ್ಟಿದೆ. ಪ್ರಕೃತಿ ಲಕ್ಷಣಗಳು ಮತ್ತು ವಾಯುಗುಣ ಪರಿಸ್ಥಿತಿಗಳು ಜನಜೀವನ ರೀತಿ ಮತ್ತು ಅವರ ನಡತೆಗಳ ಮೇಲೆ ತಮ್ಮ ಪ್ರಭಾವವನ್ನು ಬೀರಿವೆ ಅಲ್ಲದೆ ಈ ಅಂಶಗಳು ಜನರ ಗುಣ, ಆಕೃತಿ ಮತ್ತು ಬಣ್ಣಗಳ ಮೇಲೂ ಪ್ರಭಾವವನ್ನು ಬೀರಿವೆ ಹಾಗೂ ವಿಶಿಷ್ಟರೀತಿಯ ಗುಣಗಳನ್ನು ಜನಗಳಲ್ಲಿ ಮೂಡಿಸಿವೆ. ಉದಾಹರಣೆಗೆ-ಫಲವತ್ತಾದ ಗಂಗಾನದಿಯ ಬಯಲಿನಲ್ಲಿ ಹೆಚ್ಚಿನ ಶ್ರಮವಿಲ್ಲದೆ ಸುಲಭವಾಗಿ ಆಹಾರವನ್ನು ಪಡೆಯಬಹುದು. ಆದ್ದರಿಂದ ಆ ಭಾಗದಲ್ಲಿ ದಕ್ಷಿಣ ಭಾಗ ಕರಾವಳಿ ಪ್ರದೇಶಗಳಿಗಿಂತ ಹೆಚ್ಚಿಗೆ ಬೌದ್ಧಿಕ ವಿಚಾರ ಮತ್ತು ತರ್ಕಶಾಸ್ತ್ರಗಳು ಬೆಳೆದವು. ಕರಾವಳಿ ಜನರು ಪ್ರಪಂಚದ ಇತರ ಭಾಗಗಳೊಡನೆ ವ್ಯಾಪಾರ ಸಂಬಂಧವನ್ನಿಟ್ಟುಕೊಂಡಿದ್ದರು.

ಭಾರತದ ಐಕ್ಯತೆಯು ಸಂಸ್ಕೃತ ಭಾಷೆ ಮತ್ತು ಭಾರತೀಯ ಸಂಸ್ಕೃತಿ, ಹಿಂದೂ ಧರ್ಮ ಮತ್ತು ಸಾಮಾಜಿಕ ಸಂಸ್ಥೆಗಳ ಮೇಲೆ ಅವಲಂಬಿಸಿದ್ದರೂ ಭೌಗೋಳಿಕ ಪ್ರಭಾವವು ಬುಡಕಟ್ಟುಗಳ ಮತ್ತು ಭಾಷಾ ವ್ಯತ್ಯಾಸಗಳ ಮೂಲಕ ದಕ್ಷಿಣ ಭಾರತದ ಭಾಗಗಳು ಉತ್ತರ ಭಾರತದಿಂದ ಪ್ರತ್ಯೇಕವಾಗಿ ಉಳಿಯುವಂತೆ ಮಾಡುವುದೆಂದು ದಿವಂಗತ ಶ್ರೀ ಪಣಿಕ್ಕರ್ ಅವರು ಅಭಿಪ್ರಾಯ ಪಟ್ಟಿದ್ದರು. ಭಾರತದ ಜನಾಂಗಗಳು ಮತ್ತು ಅವುಗಳ ಚಲನ ವಲನಗಳಲ್ಲಿ ಮುಖ್ಯವಾಗಿ ಭಾರತದ ಇತಿಹಾಸಕ್ಕೆ ಸಂಬಂಧಿಸಿದಂತೆ ಹೊರಗಡೆಯಿಂದ ವಲಸೆಗಾರರಾಗಿ ಬಂದವರಲ್ಲಿ ಅತೀವ ಬೃಹತ್ ಪ್ರಮಾಣವುಳ್ಳದ್ದು ಆರ್ಯರದು. ಆರ್ಯರು ಮತ್ತು ದ್ರಾವಿಡ ಜನಾಂಗಗಳು ಭಾರತದ ಜನಾಂಗ ಮತ್ತು ಸಾಂಸ್ಕೃತಿಕ ಇತಿಹಾಸದಲ್ಲಿ ಗಮನಾರ್ಹವಾದ ಮಾರ್ಪಾಟನ್ನುಂಟು ಮಾಡಿವೆ ಎಂದು ಆಧಾರ ಗ್ರಂಥಗಳಿಂದ ತಿಳಿಯುತ್ತದೆ. ಬೇರೆ ಬೇರೆ ಮೂಲಗಳಿಗೆ ಸೇರಿದ ಜನರು ಈ ದೇಶಕ್ಕೆ ಬೇರೆ ಬೇರೆ ಕಾಲಗಳಲ್ಲಿ ಬಂದು ಒಬ್ಬರು ನೆರೆಯಲೊಬ್ಬರು ನೆಲಸಿದರು. ತಮ್ಮ ತಮ್ಮಲ್ಲಿಯೇ ಒಂದು ಅರಿವು ಸಹಕಾರವನ್ನು ತೋರಿಸಿದರು. ಅವರು ಇಂದು ನಾವು ಭಾರತದೊಳಗೆ ಜತೆಮಾಡಿ ಹೇಳುವ ಈ ಸಂಸ್ಕೃತಿಯನ್ನು ಕಟ್ಟಿದರು. ಭಾರತೀಯ ಸಂಸ್ಕೃತಿಯು ರೂಪುಗೊಳ್ಳುತ್ತಿದ್ದ ಕಾಲದಲ್ಲಿ ಅಸಂಖ್ಯ ಪ್ರಮಾಣದ ಜನಾಂಗಗಳು, ಜನವರ್ಗಗಳು ಬಂದರು. ಆಫ್ರಿಕಾದಿಂದ ಇಯೋಲಿಥಿಕ್ ನಿಗ್ರಾಯ್ಡ್‌ಗಳು, ಬಹುಷಃ ಪಶ್ಚಿಮ ಏಷ್ಯಾದಿಂದ ಬಂದ ಪ್ರೊಟೋ-ಆಸ್ಟ್ರೊಲಾಯ್ಡ್ ಮತ್ತು ಆಸ್ಟ್ರಿಕ್ ಜನ, ಮಂಗೋಲಿಯಡ್ ಜನ, ದ್ರಾವಿಡ ಭಾಷೆ ಸಂಸ್ಕೃತಿಯನ್ನು ತಂದವರಿರ ಬಹುದಾದ ಏಷ್ಯನ್ ಜನರ ಸಮುದಾಯ, ಇಂಡೊ ಯೂರೋಪಿಯನರು, ಆರ್ಯನರು (ಇಂಡೊ ಆರ್ಯನರು ಮತ್ತು ಇರಾನಿಯರು ಹೀಗೆ ಲೆಕ್ಕ ಮಾಡಿ ಹೇಳಲು ಆಗದಷ್ಟು ಜನರು ಬಂದರು.

ಆರ್ಯರು ಇಲ್ಲಿಗೆ ಬಂದಾಗ ಇರಾನ್ ಅಫ್ಘಾನಿಸ್ಥಾನ ಮತ್ತು ಏಷಿಯಾದ ಬೆಟ್ಟಗಾಡು ಪ್ರದೇಶಕ್ಕೆ ಹೋಲಿಸಿದಾಗ ಈ ಪ್ರದೇಶವು ತುಂಬಾ ಹಿತಕರ ನಿವಾಸ ಪ್ರದೇಶವಾಗಿ ತೋರಿತು. ಆರ್ಯರ ಸಾಮಾಜಿಕ ವ್ಯವಸ್ಥೆ ಬುಡಕಟ್ಟಿನದಾಗಿತ್ತು. ಅವರು ಹಲವು ಬುಡಕಟ್ಟುಗಳಾಗಿ ಒಡೆದಿದ್ದರು. ಈ ಬುಡಕಟ್ಟುಗಳು 'ಜನ'ಗಳೆಂದೂ ಕರೆಯಲ್ಪಡುತ್ತಿದ್ದವು. ಈ ಬುಡಕಟ್ಟುಗಳ ವ್ಯಾಪನೆಯ ಇತಿಹಾಸ ಕ್ರಮ ಕ್ರಮೇಣ ಜಾಸ್ತಿಯಾಯಿತು. ಅವರು ಪೂರ್ಣವಾಗಿ ಉತ್ತರ ಭಾರತವನ್ನೂ ದಕ್ಷಿಣದ ಸ್ವಲ್ಪ ಭಾಗವನ್ನು ಸಾವಿರಾರು ವರ್ಷಗಳ ಅವಧಿಯಲ್ಲಿ ಆಕ್ರಮಿಸಿಕೊಂಡ ಬಗ್ಗೆ ದಿ|| ಎಫ್.ಇ ಪಾರ್ಗಿಟೀರ್ ನಮ್ಮ ಪುರಾಣ ಸಂಪ್ರದಾಯಗಳ ತೊಡಕಿನಿಂದ ಬಿಡಿಸಿ ಶ್ರಮ ಸಾಧ್ಯವಾದ ಸಂಶೋಧನೆಗಳಿಂದ ತೋರಿಸಿದ್ದಾರೆ. ಬುಡಕಟ್ಟು ಪಾಳೆಯಗಳು ಭೂಗೋಳದ ಕಟ್ಟುಗಳಿಗೆ ಬದ್ಧವಾಗಿತ್ತೆಂದೂ, ಇದು ದೇಶದ ಸಹಜವಾದ ವಿಭಾಗಗಳಿಗೆ ಅನುಗುಣವಾಗಿತ್ತೆಂದೂ ಈ ಸಂಶೋಧನೆ ತೋರಿಸಿದೆ. ಕಾಲ ಕ್ರಮೇಣ ಜನ ನೆಲಸಿದ ಪ್ರದೇಶ ಅದರ 'ಜನಪದ'ವಾಗಿ ಪ್ರಚುರ ಗೊಂಡಿತು. 'ಜನಪದ'ದಲ್ಲಿ ಹುಟ್ಟುವುದಾಗಲಿ, ನೆಲಸುವುದಾಗಲಿ ಬುಡಕಟ್ಟಿನ ಮೂಲ ಬಾಂಧವ್ಯಕ್ಕಿಂತ ಹೆಚ್ಚಿನ ಬೆಸುಗೆಗಳಾದವು. ಹೀಗೆ ಮೂಲ 'ಜನ' ಅಥವಾ ಬುಡಕಟ್ಟುಗಳಿಂದ ಜನಪದಗಳು ಅಥವಾ ರಾಷ್ಟ್ರಗಳು ಉದ್ಭವಿಸಿದವು. ಬುಡಕಟ್ಟುಗಳಿಂದ ಜನಪದ ಜಾನರಾಜ್ಯ, ಜಾನಪದ ರಾಜ್ಯ ಅಥವಾ ರಾಷ್ಟ್ರೀಯ ಪ್ರದೇಶ ರಾಜ್ಯಗಳಿಗೆ ಎಡೆಕೊಟ್ಟವು. ಬುದ್ಧನ ಕಾಲದಲ್ಲಿ ಆ ಬಗೆಯ ಹದಿನಾರು(16) ಮಹಾರಾಷ್ಟ್ರಗಳು ಇದ್ದುವೆಂದು ತಿಳಿಯುತ್ತದೆ. ಗುಪ್ತರ ಕಾಲದ ಕೊನೆಯವರೆಗೂ (ಕ್ರಿ.ಶ.540) ಸಮಗ್ರ ಭಾರತ ಸಾಮ್ರಾಜ್ಯದ ಆದರ್ಶ ಹಾಗೂ ಭಾರತೀಯರೆಲ್ಲರೂ ಒಂದೇ ಜನಾಂಗ ಎಂಬ ಮನೋಭಾವ ಇತ್ತು. ಅವಿಛ್ಛಿನ್ನ ಸಾಮ್ರಾಜ್ಯಕ್ಕಾಗಿ ಹೋರಾಟವಿದ್ದರೂ 'ಜನಪದ'ದೇಶ ಭಕ್ತಿ ಬಲವಾಗಿ ಬೇರೂರಿ ಬೆಳೆಯಿತು. ಬೇರೆ ಬೇರೆ ರಾಷ್ಟ್ರೀಯರಿಗೆ ಅವರವರ ಜನಪದ ಮೇಲಿನ ಪ್ರೀತಿ

ತೀವ್ರವಾಯಿತು. ಮೌರ್ಯರ ಕಾಲದಲ್ಲಿ ಇನ್ನೊಬ್ಬರ ಜನಪದವನ್ನು ಜರಿಯುವುದು ಅವಮಾನಕರ ವಾದುದಾಗಿತ್ತು. ಭಾರತೀಯ ಸಮೂಹ ಜೀವನದಿಂದಾಗಿ ಸಾಂಸ್ಕೃತಿಕ ಸಂಘಟಕಗಳು ರಚನೆಯಾದುವು. ತಮ್ಮ ಪಾಳೆಯಗಳನ್ನು ಲಕ್ಷಿಸದೆ ದೇಶದ ಸ್ವಾಭಾವಿಕವಾದ ವಿಭಾಗಗಳಿಗೆ ಅನುಗುಣವಾಗಿ ಜನರು ಈ ಘಟಕಗಳನ್ನು ನಿರ್ಮಿಸಿಕೊಂಡರು. ಅವುಕ್ರಮೇಣ ವಿವಿಧ ಭಾಷಿಕ ಘಟಕಗಳಾಗಿ ಬೆಳೆದವು.

ಸುಮಾರು 30 ದಶಲಕ್ಷ ಜನರಲ್ಲಿ ಬಳಕೆಯಲ್ಲಿರುವ ದ್ರಾವಿಡ ಭಾಷೆಗಳಲ್ಲಿ, ಆರ್ಯನ್ ಭಾಷೆಗಳನ್ನಾಡುವ ಜನರಿಗೆ ಹಿಂದಿ ಇರುವಂತೆ ಒಂದು ಮಾಧ್ಯಮ ಅಂದರೆ ಸಂಪರ್ಕಭಾಷೆ ಬೆಳೆಯದಂತೆ ಇರುವುದು ಆಶ್ಚರ್ಯಕರವಾದುದು. ಪ್ರಾಚೀನ ಕಾಲ ಮತ್ತು ಮಧ್ಯಮ ಕಾಲದಲ್ಲಿ ಸಂಸ್ಕೃತವು ಸಂಪರ್ಕ ಭಾಷೆಯಾಗಿದ್ದಿತು. ದ್ರಾವಿಡ ಭಾಷೆಗಳಲ್ಲಿ ಕನ್ನಡಕ್ಕೆ ದೀರ್ಘ ಇತಿಹಾಸವಿದೆ. ಅದರ ಅತ್ಯಂತ ಪ್ರಾಚೀನವಾದ ಮಾದರಿಗಳು ಈಜಿಪ್ಟ್ ದೇಶದಲ್ಲಿ ದೊರೆತ ಕ್ರಿ.ಶ. 2 ನೇ ಶತಮಾನಕ್ಕೆ ಸೇರಿದ ಭಿನ್ನ ಹಸ್ತ ಪ್ರತಿಗಳಲ್ಲಿರುವ 'ಗ್ರೀಕ್' ನಾಟಕವೊಂದರಲ್ಲಿ ಕೆಲವು ಹಿಂದೂ ಪಾತ್ರಗಳು ಮಾತನಾಡುವ ಹಲವಾರು ವಾಕ್ಯ ರೂಪದಲ್ಲಿದೆ. ಕ್ರಿ.ಶ 6ನೇ ಶತಮಾನದಿಂದೀಚೆ ಕನ್ನಡದಲ್ಲಿ ಅನೇಕ ಶಾಸನಗಳಿವೆ ಮತ್ತು ಅದರ ಸಾಹಿತ್ಯ ಒಂಭತ್ತನೆಯ ಶತಮಾನದಿಂದ ಪ್ರಾರಂಭ ವಾಗುತ್ತದೆ ಕನ್ನಡ ಭಾಷಾಚರಿತ್ರೆಯಲ್ಲಿ ಮೂರು ಹಂತಗಳು ಕಂಡುಬರುತ್ತವೆ. ಹಳೆಯ ಅಥವಾ ಪ್ರಾಚೀನ ಕನ್ನಡ (ಪಳೆಗನ್ನಡ ಅಥವಾ ಹಳೆಗನ್ನಡ) ನಡುಗನ್ನಡ ಹಾಗೂ ಹೊಸಗನ್ನಡ.

ಭಾರತದ ಪ್ರಜಾಕೋಟಿಯಲ್ಲಿ ವಿಭಿನ್ನ ಭಾಷಾ ಸಂಘಟನೆ ಮತ್ತು ಸಂಸ್ಕೃತಿ ವರ್ಗಭೇದಗಳು ಕಂಡರೂ ಆಂತರಿಕ ಏಕ ರೂಪತೆಯುಳ್ಳ ಜೀವನ ವಿರುವುದನ್ನು ಒಂದು ಸಾಮಾನ್ಯ ಭಾರತೀಯ ವ್ಯಕ್ತಿತ್ವವಿರುವುದನ್ನು ನಾವೆಲ್ಲರು ಒಪ್ಪಲೇ ಬೇಕು. ಈ ವಿಭಿನ್ನ ಜನಾಂಗಗಳಲ್ಲಿ ಪ್ರತಿಯೊಂದು ಜನಾಂಗವೂ ಮತ್ತು ಅವುಗಳಲ್ಲಿನ ಕೆಲವು ಉಪಜನಾಂಗಗಳೂ ತಮ್ಮದೇ ಆದ ಒಂದು ಪ್ರತ್ಯೇಕ ಭಾಷೆ ಮತ್ತು ಅದಕ್ಕೆ ಸಂಬಂಧ ಪಟ್ಟ ಸಂಸ್ಕೃತಿಯನ್ನು ಕಾಪಾಡಿಕೊಂಡು ಬಂದಿವೆ. **ಈ ನಿಟ್ಟಿನಲ್ಲಿ ನಮ್ಮ ಬುಡಕಟ್ಟು ಜನಾಂಗದವರ (ಅರೆಗನ್ನಡ, ಅರೆಭಾಷೆ ಮಾತನ್ನಾಡುವವರ) ಭೌಗೋಳಿಕ, ಆರ್ಥಿಕ ಹಾಗೂ ಸಾಮಾಜಿಕ ಹಿನ್ನಲೆಯಲ್ಲಿ ಮೂಲ ಸಂಸ್ಕೃತಿಯ ಸಂಶೋಧನೆಗೆ ಜನಾಂಗದ ಹಿರಿಯ ಗಣ್ಯವ್ಯಕ್ತಿಗಳು ಮತ್ತು ಸಾಂಸ್ಕೃತಿಕ ಅಕಾಡೆಮಿಯು ಹೆಚ್ಚಿನ ಮುತವರ್ಜಿ ವಹಿಸಬೇಕಾಗುತ್ತದೆ. ಮತ್ತು ಕೊಡಗು ಸಂಗಾತಿಯಲ್ಲಿ ಈ ಕುರಿತು ಇನ್ನೂ ಹೆಚ್ಚಿನ ಗುಣ ಮಟ್ಟದ ಲೇಖನಗಳು ಮೂಡಿಬರುತ್ತಿರಲೆಂದು ಹಾರೈಸುತ್ತೇನೆ.**

ಬೈತಡ್ಕ ಎ. ಬೆಳ್ಯಪ್ಪ

ಆಧಾರ : ಯುಗಯಾತ್ರಿ ಭಾರತೀಯ ಸಂಸ್ಕೃತಿ

---

**ಜನಾಂಗದ ಜಾನಪದ ಹೊತ್ತಗೆ "ಹಸೆಮಣೆ" ಓದಿರಿ**

**ಕೊಡಗು ಸಂಗಾತಿ, ಪಾಕ್ಷಿಕ ಅನ್ನು ಕೊಂಡು ಓದಿರಿ.**

## ಮೂಲಗುಣ ಉಳಿಸಿಕೊಂಡಿರುವ ಕಲೆ-ಯಕ್ಷಗಾನ

### ಸುಳ್ಯದಲ್ಲಿ ಡಾ. ಪುರಷೋತ್ತಮ ಬಿಳಿಮಲೆ

ಜಾನಪದ ಜಗತ್ತಿನ ವೈವಿಧ್ಯಮಯ ಕಲೆಗಳಲ್ಲಿ ಯಕ್ಷ ಗಾನವು ಅತ್ಯಂತ ವಿಶಿಷ್ಟವಾದದ್ದು. ಜಗತ್ತಿನ ಜನಪ್ರಿಯ ಕಲೆಗಳಲ್ಲೊಂದಾದ ಇದು ಆಧುನಿಕತೆಗೆ ಒಳಗಾಗದೆ ಮೂಲಗುಣ ಉಳಿಸಿಕೊಂಡಿದೆ ಎಂದು ಅಮೆರಿಕನ್ ಇನ್ಸಿಸ್ಟಿಟ್ಯೂಟ್ ಆಫ್ ಇಂಡಿಯನ್ ಸ್ಟಡೀಸ್‌ನ ಉಪ ನಿರ್ದೇಶಕರಾದ ಡಾ. ಪುರುಷೋತ್ತಮ ಬಿಳಿಮಲೆ ಅವರು ಸುಳ್ಯದ ಸ್ನೇಹ ಪ್ರಾಥಮಿಕ ಶಾಲೆಯಲ್ಲಿ ಎಂಟು ದಿನಗಳ ಮಕ್ಕಳ ಯಕ್ಷಗಾನ ವಾಸ್ತವ್ಯ ಶಿಬಿರದ ಸಮಾರೋಪ ಸಮಾರಂಭದಲ್ಲಿ ಭಾಷಣ ಮಾಡುತ್ತಿದ್ದರು.

ಸಮಾರಂಭದ ಅಧ್ಯಕ್ಷತೆಯನ್ನು ಸಂಪಾಜೆಯ ಎನ್. ಎಸ್. ದೇವಿ ಪ್ರಸಾದ್ ವಹಿಸಿ, ಯಕ್ಷಗಾನವು ಒಂದು ರಾಷ್ಟ್ರೀಯ ಕಲೆ ಆದರೆ, ಅದು ಇನ್ನೂ ಬಯಲುಸೀಮೆಗೆ ವ್ಯಾಪಿಸಿಲ್ಲ. ಇದನ್ನು ದೇಶದ ಮೂಲೆ ಮೂಲೆಗೂ ತಲುಪಿಸುವ ಕೆಲಸ ತುರ್ತಾಗಿ ಆಗಬೇಕು ಹಾಗೂ ಇದು ತನ್ನದೇ ನೆಲದಲ್ಲಿ ತಳ ವೂರುವಂತಿರಬೇಕು. ಇದಕ್ಕಾಗಿ ಈ ಕಲೆಯನ್ನು ಎಳೆಯರಿಗೆ ಕಲಿಸುವ ಕೆಲಸ ಅಗತ್ಯ ಆಗಬೇಕು. ಈ ಶಿಬಿರದಲ್ಲಿ ಇಂತಹ ಕೆಲಸ ನಡೆದಿರುವುದು ಶ್ಲಾಘನೀಯ ಎಂದರು.

ಸುಳ್ಯ, ಬೆಳ್ತಂಗಡಿ, ಕಾರ್ಕಳ, ಬಂಟ್ವಾಳ, ಪುತ್ತೂರು, ಕಾಸರಗೋಡು ಮುಂತಾದೆಡೆಗಳಿಂದ 50ಕ್ಕೂ ಹೆಚ್ಚು ಮಂದಿ ಭಾಗವಹಿಸಿದ್ದ ಶಿಬಿರದಲ್ಲಿ ನೃತ್ಯಾಭಿನಯ, ಮುಖ ವರ್ಣಿಕೆ ತರಬೇತಿ, ಪುರಾಣ ಮತ್ತು ಪ್ರಸಂಗಗಳ ಅಭಿನಯ, ಅರ್ಥಗಾರಿಕೆ, ತಾಳ ಮದ್ದಳೆ ಹಾಗೂ ಯೋಗ ತರಬೇತಿಯನ್ನು ನೀಡಲಾಯಿತು.

ಈ ಶಿಬಿರವನ್ನು ಸುಳ್ಯದ ತೆಂಕುತಿಟ್ಟು ಯಕ್ಷಗಾನ ಹಿತರಕ್ಷಣಾ ವೇದಿಕೆಯ ಅಧ್ಯಕ್ಷ ಎ. ಗಣಪಯ್ಯ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಕಾರ್ಯದರ್ಶಿ ಡಾ. ಪ್ರಭಾಕರ್ ಶಿಶಿಲ ಸ್ವಾಗತಿಸಿ, ಡಾ. ಚಂದ್ರಶೇಖರ ದಾಮ್ಲೆ ವಂದಿಸಿದರು. ನಂತರ ದಶಾವತಾರ ಯಕ್ಷಗಾನ ಬಯಲಾಟ ಪ್ರದರ್ಶನಗೊಂಡಿತ್ತು.

**ವರದಿ : ಎಂ. ಆರ್. ಗೋಪಾಲ್.**

---

### ಬದುಕಿನ ಅಷ್ಟ ಸೂತ್ರಗಳು

| | | |
|---|---|---|
| ಉತ್ಸಾಹಿಗಳಾಗಿರಿ | : | ಸೋಮಾರಿಗಳಾಗಬೇಡಿ |
| ತಾಳ್ಮೆ ಇರಲಿ | : | ದುಡುಕಬೇಡಿ |
| ಮಿತವ್ಯಯಿಗಳಾಗಿರಿ | : | ಜಿಪುಣರಾಗಬೇಡಿ |
| ಮೃದುವಾಗಿರಿ | : | ಗುಲಾಮರಾಗಬೇಡಿ |
| ಕರುಣೆ ಇರಲಿ | : | ಮೋಸ ಹೋಗಬೇಡಿ |
| ದಾನಿಗಳಾಗಿರಿ | : | ದರಿದ್ರರಾಗಬೇಡಿ |
| ಶೂರರಾಗಿರಿ | : | ಕಟುಕರಾಗಬೇಡಿ |
| ತ್ಯಾಗಿಗಳಾಗಿರಿ | : | ಅಡವಿಗೆ ಹೋಗಬೇಡಿ |

**ಸಂಗ್ರಹ : ಆ ಜಡ್ಕ ರಾಣಿ ಬಾಲಕೃಷ್ಣ, ಕುಶಾಲನಗರ**

---

ತಾಳ್ಮೆಯ ವ್ಯಕ್ತಿ ಸುಗಮವಾಗಿ ಬಾಳುತ್ತಾನೆ

# ಜಿಪ್ಪುಣ - ಅತಿ ಆಸೆ ಗತಿಗೇಡ್

ರಂಜು ತುಂಬಾ ಜಿಪ್ಪುಣ. ಅವಂಗೆ ಓದಿಕೆ ಬರೆಕೆ ಎಂಥ ಗೊತ್ತುಲೆ. ಇಂವ ಈ ಮಳೆಗಾಲಲಿ ಸೋಮವಾರ ದಿನ ಬುಟ್ಟ್ ಬಾಕಿ ದಿನ ಗದ್ದೆ ಹೊತಿತ್ತ್. ಸೋಮವಾರ ದಿನ ಹೂಡಿಕೆ ಇಲ್ಲದ ಕಾರಣ ಅಂವ ಪೇಟೆಗೆ ಹೋಗಿ, ಒಂದು ವಾರಕ್ಕಿರುವ ಸಾಮಾನ್ ತಾತಿತ್ತ್. ಹಿಂಗೆ ಒಂದು ದಿನ ಸೋಮವಾರ ಅವಂಗೆ ಕೆಮ್ಮುಲು, ಶೀತ ಸುರು ಆತ್. ಅವಂಗೆ ಕೆಮ್ಮಿ ಕೆಮ್ಮಿ, ಎದೆ ಬೇನೆ ಸುರು ಆದರೂ ಕೂಡ ಅಂವ ಆಸ್ಪತ್ರೆಗೆ ಹೋತ್ಲೆ. ಏಕೆಂತೇಳ್ರೆ ದುಡ್ಡು ಖರ್ಚುಆದೆ ಅಲ ಆದರ ಬದಲ್ ಮನೆಗೆ ಬೇರೆ ಏನಾದರ್ ಸಾಮಾನ್ ತಂದ್ ಹಾಕಕ್ ತ ಗ್ಯಾನ ಮಾಡ್ತ್. ಹೆಣ್ಣ್ ರಂಜನಿ ಆಸ್ಪತ್ರೆಗೆ ಹೋಗಿ ಬನ್ನಿಂತೇಳ್ಕನ ನೀನ್ ಬಾಯಿ ಮುಚ್ಚುತೇಳಿ, ಹೆಣ್ಣ್‌ನ ಬಾಯಿ ಮುಚ್ಚಿಸಿತ್. ಅಂದರು ರಂಜನಿಗೆ, ರಂಜು ಕೆಮ್ಮಿಕಂಡ್ ಕುದ್ದದ್ ಕಾಂಬಕನ ಬೇಜಾರ್ ಆತ್. ಅಂತು ಅವಳ ಕೈಲಿ ಆಗುವಂತಹ ಶುಂಠಿಕಷಾಯ, ಒಳ್ಳೆಮೆಣಸ್‌ನ ಹೊಡಿ ಮಾಡಿ ಜೇನ್ ಮಿಶ್ರಮಾಡಿ ಮತ್ತೆ ಚಿಟ್ಟೆಕೊಡಿನ ಸುಳಿನ ತಂದ್ ಅರ್ದ್ ಅದಕ್ಕೆ ಒಳ್ಳೆಮೆಣಸ್, ಓಮಕ್ಕಿ ಹಾಕಿ ಕುದಿಸಿ ಕುಡಿಯಕೆ, ತಿಂಬಕೆತೇಳಿ ಕೊಡ್ತ್. ಇದನೆಲ್ಲ ಕುಡ್ದ್ ಆಕನ ರಂಜುನ ಕೆಮ್ಮುಲು ನಿಂತತ್. ಸೋಮವಾರ ಬೇರೆ ಪೇಟೆಗೆ ಹೋಗದೆ ಮನೆಲಿ, ಹಣ್ಣ್, ತರಕಾರಿ ಎಲ್ಲ ಮುಗ್ದು ಹೋಗಿತ್ತ್. ಅಂತು ಮಂಗಳವಾರ ಕುದ್ದ್‌ಕಂಡ್ ಗ್ಯಾನ ಮಾಡ್ತ್. ಕುದ್ದು ಗ್ಯಾನ ಮಾಡಿ ಆಕನ ಹೇಳ್ದಂಗೆ ನಾಳೆ ಬುಧವಾರ ಬೇರೆ, ಹೆಂಗಿದ್ದರು ನಾಳೆ ಸಂತೆ ದಿನ. ನಾಳೆನೆ ಪೇಟೆಗೆ ಹೋಕುಂತ ತೀರ್ಮಾನ ಮಾಡ್ತ್. ಅಂತು ರಂಜನಿನ ಕರ್ದ್ ಹೇಳ್ತ್ ನಾಳೆ ಬುಧವಾರ ಅಲನೆ ನಂಗೆ ಈ ಹೂಡುವ ಕೆಲಸಂದ ಸೋಮವಾರ ಸೋಮವಾರ ಪೇಟೆಗೆ ಹೋಗಿ, ಈ ಬುಧವಾರ ಸಂತೆನೇ ಮರ್ತ್ ಹೋಗಿಟ್ಟು ಅಂತ ಹೇಳ್ಕನ, ರಂಜನಿ ಹೇಳ್‌ತ್ತ್ ನಿಮಿಗೆ ಅಂಥದೆಲ್ಲ ಮರ್ತ್ ಹೋದೆ, ದುಡ್ಡು ಉಳ್ಸಿಕೆ ಮಾತ್ರ ಮರ್ತ್ ಹೋದುಲೆ ಅಂತ ಬಾಯಿ ಬಡ್ಕಂಡ್ ಒಳಗೆ ಹೋತ್.

ಅಂತೂ ಸಂತೆದಿನ ಬಂದೇ ಬುಡ್ತ್. ಬೆಳಿಗ್ಗಂದ ಮಳೆ ಸುರಾತ್. ಛೆ ಮಳೆಲಿ ಹೆಂಗಪ್ಪಾ ಪೇಟೆಗೆ ಹೋದುಂತ ಗ್ಯಾನ ಮಾಡಿಕಂಡೇ ಆಗಿ ಹೋತು. ರಂಜು ಅಂತೂ ಕೊನೆಗೆ ಎಂಥದರ್ ಆದರು ಆಗಲಿ ಇಂದ್ ಮಾತ್ರ ನಂಗೆ ಪೇಟೆಗೆ ಹೋಗಿಯೇ ಹೋಕುತ ಬಟ್ಟೆ ಎಲ್ಲ ಹಾಕಿ ಹೊರ್ಪ್ಪತ್. ಮಳೆ ಇದ್ದಕ್ಕಿದ್ದಂಗೆ ಜೋರು ಜೋರು ಹೊಡೆಕೆ ಸುರು ಆತ್. ಅಂದರೂ ಆ ಮಳೆಗೆ ಲಟಕಾ, ಪಟಕಾಂತೇಳುವ ಹವಾಯಿ ಚಪ್ಪಲ್ ಹಾಕಿಕಂಡ್ ಹೊರ್ಪ್ಪತ್. ತೋಡು, ಗದ್ದೆ ಎಲ್ಲ ದಾಟಿ ಹೋಕಾಕನ, ಆ ಹವಾಯಿ ಚಪ್ಪಲ್ ಅಂವನ ಪ್ಯಾಂಟ್, ಬಿಳಿ ಶರ್ಟ್‌ನ ಹೋಳಿ ಹಬ್ಬಕ್ಕೆ ಬಣ್ಣ ಹಚ್ಚಿದಂಗೆ, ಅಂವನ ಆ ಹವಾಯಿ ಚಪ್ಪಲ್ ಅವನ ಶರ್ಟ್‌ಗೆ ಬಣ್ಣ ಬಡ್ದ್ ಮಡಗಿತ್ತ್. ಈ ಪಾಡ್ ಪಟ್ಟ್‌ಕಂಡ್ ಬಾತ್ ಬಸ್ಸ್ ಇಲ್ಲೆ. ಇನ್ನ್ 11-30ಕ್ಕೆ ಬಸ್ಸ್ ಆ ಬಸ್ಸಿಗೆ ಪೋಯಿಂತ ಅಂಗಿಡಿಲಿ ಸುಮ್ಮನೆ ಕುದ್ದತ್. ಬಸ್ಸಿಗೆ ಬಂದ ಜನಗೆಲ್ಲ ಜೀಪು ಬಾಕಾಕನ ಜೀಪುಲಿ ಹತ್ತಿ ಹೋದೊ. ಹಿಂಗೆ 2,3 ಜೀಪುಗ ದಾಟಿದೊ. ಅಂದರು ರಂಜು ಹೋತ್ಲೆ. ಏಕೆಂತೇಳ್ರೆ ಜೀಪಿಗೆ ಆದರೆ 10ರೂಪಾಯಿ ಕೊಡೊಕು, ಬಸ್ಸಿಗೆ ಆದರೆ 5ರುಪಾಯಿ ಕೊಟ್ಟರೆ ಸಾಕಂತೇಳಿ ಸುಮ್ಮನೆ ಕುದ್ದತ್. ಇಂವನ ಕಲಿಕಾಲಕ್ಕೆ ಪುನಃ 11-30 ಬಸ್ಸ್ ಬಾತ್‌ಲೆ. ಇಂಥ ಒಂದು ಹಣೆಬರಹ ಆತಲ್ಲಾಂತೇಳಿ ತಲೆಗೆ ಕೈ ಕೊಟ್ಟತ್. ಅಷ್ಟೊತ್ತಿಗೆ ಪುನಃ ಒಂದ್ ಜೀಪ್ ಬಾತ್. ಅದಿಕ್ಕೆ ಅಲ್ಲಿದ್ದ ಜನಗ ಹತ್ತಿದೊ, ಅಂತು ರಂಜು ಇನ್ನು ಹತ್ತಿತ್‌ಲೆ. ಕೊನೆಗೆ ಲವಂತೇಳವ "ಯಾಕೆ ರಂಜು ಸುಮ್ಮನೆ ನಿಂತೋಳ" ಬಾ ಈ ಜೀಪಿನಲ್ಲಿ ಪೋಯಿ ಪೇಟೆಗೆ. ನೀನ್ ಒಬ್ಬನೆ ಈ ಚಳಿಲ್ಲಿ ಎಷ್ಟು ಹೊತ್ತು ಅಂತ ನಿಲ್ಲುದುತ ಹೇಳ್ಕನ, ರಂಜು ಹೇಳ್ತ್ "ನನ್ನ ಕೈಲಿ ಚಿಲ್ಲರೆ ಇಲ್ಲೆ", ಅದಕ್ಕೆ ನಾನು ಸುಮ್ಮನೆ ನಿಂತೊಳೆ. ಆಗ ಲವ ಹೇಳ್ತ್ ಚಿಲ್ಲರೆ ಇಲ್ಲೆ, ಪರವಾಗಿಲ್ಲೆ ಬಿಡು ಅದೇನು ಹತ್ತು ರುಪಾಯಿ ತಾನೆ, ನಾನೆ ಕೊಟ್ಟನೆ ನಿನ್ನ ಜೀಪು ಚಾರ್ಜು ಅಂತ ಹೇಳ್ಕನ, ರಂಜು ಕುಷೀಲಿ ಜೀಪು ಹತ್ತಿ ಕುದ್ದತ್. ಆಗ ರಂಜು ಮನಸ್ಸಿನಲ್ಲಿಯೇ ಗ್ಯಾನ ಮಾಡಿ ಕಣ್ತ್, ಸಧ್ಯ ನನ್ನ ಕೈಯಿಂದಂತು ಹತ್ತು ರುಪಾಯಿ ಜೀಪುಗೆ ಹೋದುಲೆ. ಅದ್ ಹೆಂಗಿದ್ದರು. ಲವ ಕೊಟ್ಟದೆ. ಆ ಲವಂಗೆ ಮಾತ್ರ ನಾನ್ ಹತ್ತ್ ರುಪಾಯಿನ ವಾಪಸ್ ತಿರುಗಿ ಕೊಡಿಕೆಲೆ ಅಂತ ಕುಷೀಲೆ ಕುದ್ದುಕಣ್ತ್. ಅಂತೂ ಪೇಟೆ ತಲಪಿತ್. ಎಲ್ಲಾ ಜೀಪುಂದ ಇಳ್ದ್ ಡ್ರೈವರ್‌ಗೆ ದುಡ್ಡುಕೊಟ್ಟೊ. ಅಷ್ಟೊತ್ತಿಗೆ ಲವ ಬಂದ್ ರಂಜುನ ಕೇಳ್ತ್ "ನಿನ್ನ ಹತ್ರ ಎಷ್ಟು ರುಪಾಯಿ ಉಟ್ಟು" ಅಂತ ಕೇಳ್ಕನ "ನನ್ನ ಹತ್ರ 50 ರುಪಾಯಿಯ ನೋಟೇ ಇರ್ದು" ಯಾಕೆ? ಅಂತ ಲವನ, ರಂಜು ಕೇಳ್ತ್. ನನ್ನ ಹತ್ರ ಬರೀ 100, 100 ರುಪಾಯಿಯ ನೋಟೇ ಇರ್ದು, ಆದ್ದರಿಂದ ನೀನ್ ನನ್ನ ಜೀಪ್ ಚಾರ್ಜು ಕೊಡು, ನಾನು ನಿಂಗೆ ಆಮೇಲೆ ಕೊಟ್ಟನೆತ್. ರಂಜುಗೆ ಈಗ ಆಕಾಶನೇ ತಲೆ ಮೇಲೆ ಬಿದ್ದ ಹಂಗೆ ಆತ್. ಛೆ ಹಿಂಗೆ ಆಗಿ ಹೋತಲ್ಲಾ. ಹೀ ಹೋಗಿ, ಹೋಗಿ ನನ್ನ ಕೈಯಿಂದ ಕೊಡಿಕೆ ಆಗಿ ಹೋತಲ್ಲಾಂತ ಸುಮ್ಮನೆ ಪ್ಯಾಂಟ್ ಜೊಬ್‌ನ ಅತ್ತ, ಇತ್ತ ತಟ್ಟಿಕಂಡ್ ನಿಂತತ್. ಆಗ ಜೀಪು ಡ್ರೈವರ್ "ಏನು ಸ್ವಾಮೀ, ಇನ್ನೂ ನೀವು ನನಗೆ ಜೀಪು ಚಾರ್ಜು ಕೊಡಲಿಲ್ಲಂತೇ"ಳ್ಕನ ಅಂವ ಬಾಯಿ ಮುಚ್ಚಿಕಂಡ್ ನಂದು ಮತ್ತೆ ಲವಂದುಂತೇಳಿ 50ರುಪಾಯಿನ ನೋಟು ತೆಗ್ದ್ ಕೊಡ್ತ್. ಡ್ರೈವರ್ 20ರುಪಾಯಿ ಮಡ್ಕಂಡ್ 30 ರುಪಾಯಿ ವಾಪಸ್ ಕೊಡ್ತ್. ರಂಜು ದುಃಖಲೆ ಸಾಮಾನ್ ಅಂಗಡಿಗೆ ಹೊತ್. ತರಕಾರಿ ಅದ್, ಇದ್‌ತೇಳ್ಕನ ಅಂವ ತಂದ ದೊಡ್ಡ ಬ್ಯಾಗ್‌ಲಿ ತುಂಬಿ ಹೋತ್, ಆಗಳೇ ಗಂಟೆ 1-00 ಆಗಿ ಹೋತ್. ಇವಂಗೆ 12-30ಗೆ ಹೊಟ್ಟೆ ಚುರ್ ಗುಟ್ಟಿಕೆ ಸುರು ಆಗಿತ್ತ್. ಅದಿಕ್ಕೆ ಸರಿ ಈ ಮಳೆಂದಾಗಿ ಚಳಿಗೆ ನಡ್‌ಗ್‌ತ್ತಿತ್ತ್. ಎಲ್ಲ ಗಂಡ್ ಜನರಂಗೆ ಸಿಗರೇಟ್ ಸೇದಿ ಮೈ ಬಿಸಿ ಮಾಡಿಕಣೋನಾಂತೇಳ್ರೆ ಆ ಚಟಬೇರೆ ಇಲ್ಲೆ. ಅಂತೂ ಕೊನೆಗೆ ಹೊಟೇಲ್‌ಗೆ ಹೋತ್. ಹೊಟೇಲ್ ಸಪ್ಲಾಯರ್ ಮಾಣಿ ಬಂದ್, ಏನು ಬೇಕು ಸ್ವಾಮೀ? ಅಂತ ಕೇಳ್ತ್, ಅದಿಕ್ಕೆ ರಂಜು ತಿನ್ನಲು ಏನಿದೆ? ಮಾಣಿ ಒಂದು

---

**ವ್ಯಕ್ತಿ ಒಳ್ಳೆಯ ಗುಣಗಳನ್ನು ಕಳೆದುಕೊಂಡಾಗ ಸರ್ವಸ್ವವನ್ನು ಕಳೆದುಕೊಂಡಂತೆ**

---

ಉಸುರಿಗೆ ಅನ್ನ, ಸಾಂಬಾರು, ಪಲ್ಯ, ಮೊಸರು, ಉಪ್ಪಿನಕಾಯಿ, ಪಪ್ಪಡ, ಉದ್ದಿನ ವಡೆ, ಕೇಸರಿಬಾತ್, ಮಸಾಲೆದೋಸೆ ಅಂತ ಹೇಳ್ತ್. ಇವಂಗೆ ಯಾವುದು ಅರ್ಥ ಆತ್ಲೆ. ಕೊನೇಗೆ ಹೇಳ್ದ ಮಸಾಲೆ ದೋಸೆ ಇವನ ಕಿವಿಗೆ ಪೇಪರ್ ದೋಸೆ ಅಂತ ಹೇಳ್ತ್. ಅಂತೂ ಮಾಣಿಗೆ ತೆಗ್ದ ಬಾಯಿಗೆ "ದೋಸೆ ಸಾಕು" ಅಂತ ಹೇಳ್ತ್.

ಇಂವ ದೋಸೆ ತಕಣಿಕೆ ಕಾರಣ ಇಷ್ಟೆ. ಹಿರಿಯರ್ ಹೇಳ್ದಂಗೆ "ಸುದ್ದಿ ತಿಳಿದಾಗಾಯ್ತು, ದೋಸೆ ತಿಂದಾಗಾಯ್ತು" ಏನಾದರ್ ಆಗಲಿ, ನನ್ನ ಕೈಯಿಂದಂತು ಪೇಪರಿಗೆ ದುಡ್ಡು ಕೊಟ್ಟು ಓದೊನೊಂತೇಳ್ರೆ ಓದಿಕೆ ಬಾದುಲೆ. ನಂಗೆ ಗೊತ್ತು ಆಗುವಂಗೆ ಏನಾದರು ಇರ್ದುಂತೇಲಿ, ಕುದ್ದತ್ ಸರಿ ಆ ತಲೇಂತ ಎಡ್ದ ಕಾಲ್ ಮೇಲೆ ಬಲ್ದ ಕಾಲ್ ಹಾಕಿ ಕುದ್ದತ್, ಅಷ್ಟೊತ್ತಿಗೆ ಮಾಣಿ ದೋಸೆ ತಂದ್ ಕೊಡ್ತ್. ಈ ರಂಜು ಏನ್ ಮಾಡ್ತ್‌ತೇಳ್ರೆ ಆ ದೋಸೆನ ಎರಡ್‌ಕೈಲಿ ಹಿಡ್ಕಂಡ್ ಅತ್ತೊಮ್ಮೆ, ಇತ್ತೊಮ್ಮೆ ನೋಡ್ತ್. ಈ ದೋಸೆಲಿ ಸುದ್ದಿಗೊಂದು ಕಾಂಬದುಲೆ, ಸುದ್ದಿ ಬದಲ್ ಬರೀ ತೂತುಗಳೇ ತುಂಬಿಕಂಡ್ ಉಟ್ಟುಂತೇಳಿ, ಎರಡ್ ಕೈಲಿ ದೋಸೆನ ಎಳ್ದ್ ನೋಡ್ತ್. ಇಂವನ ಆ ಎಳಿವ ರಬಸಕ್ಕೆ ಆ ದೋಸೆನೆ ಮುರ್ದು ಕಾಲ್ ಬುಡಕ್ಕೆ ಬೀತ್. ಅಂವ ಎಡ್ದ ಕಾಲ್‌ಮೇಲೆ ಇದ್ದ ಬಲ ಕಾಲ್‌ನ ತೆಗ್ದ್ ಅಡಿಗೆ ಹಾಕಿ ಬಗ್ಗಿ ನೋಡ್ತ್. ನೋಡುಕನ ಆ ಬಿದ್ದ ದೋಸೆ ಮೇಲೆ ಅವನ ಕಾಲ್ ಮಡಗಿಟ್ಟು. ಇವಂಗೆ ಈಗ ಏನು ಮಾಡುಕು ಅಂತಲೇ ಗೊತ್ತಾತ್‌ಲೆ. ಒಂದ್ ಸಲ ಹೊಟೇಲ್ ಸುತ್ತ ಕಣ್ಣಾಡಿಸಿ ನೋಡ್ತ್. ಸಧ್ಯ ಯಾರು ನೋಡ್ತ ಇಲ್ಲೆಂತ, ಬೇಗ ಬೇಗ ಇದ್ದ ಒಂದು ಗ್ಲಾಸ್ ಕಾಫಿ ಕುಡ್ದ್, ಹೊಟ್ಟೆಗೆ ಹೋಗಿ ತಲಪದ ಮಸಾಲೆ ದೊಸೆಗೆ ದುಡ್ಡು ಕೊಟ್ಟತ್. ಇವಂಗೆ ಇತ್ತ ಪೇಪ್ ಸುದ್ದಿನೂ ತಿಳ್‌ತ್‌ಲೆ, ಅತ್ತ ಹೊಟ್ಟೆನು ತುಂಬಿತ್‌ಲೆ. ಇಂದ್ ನಂಗೆ ಏನೋ ಶನಿ ಕಾದುಟುತ ಸೀದಾ ಬಂದ್ ಮನೆ ಕಡೆ ಹೋಗುವ ಬಸ್ಸಿಗೆ ಹತ್ತಿತ್.

ರಂಜು ಬಸ್ಸ್‌ಂದ ಇಳ್ದ್ ಮನೆಕಡೆ ಹೊರ್ಟತ್. ರಂಜು ಅಂತೂ ನಾನ್ ತಕಂಡಿದ್ದ ಸಾಮಾನ್‌ಗೆಲ್ಲ ಉಟ್ಟಂತೇಳಿ ಬ್ಯಾಗ್‌ನ ಒಮ್ಮೆ ನೋಡ್ತ್. ನೋಡ್ಕನ ಎಣ್ಣೆ ಕುಪ್ಪಿ ಇಲ್ಲೆ. ಇನ್ನ್ ರಂಜನಿ ಕೇಳ್ರೆ ನಾನ್ ಎಂಥರ ಕೇಳ್ದು. ಅಷ್ಟೊತ್ತಿಗೆ ಮಳೆ ಸ್ವಲ್ಪ ಕಡಿಮೆ ಆತ್. ಈ ಮಳೆ ಬುಡಿಕೆ ಮುಂಚೆ ಮನೆ ಸೇರಿಕಣೇಂತ ಬೇಗ ಬೇಗ ಹೆಜ್ಜೆ ಹಾಕಿತ್. ಸಧ್ಯಕ್ಕೆ ಈ ಬ್ಯಾಗ್‌ಲಿ ಇರುವ ಸಾಮಾನ್ ಗಳನ್ನ ತಕಂಡ್ ಹೋಗಿ ರಂಜನಿಗೆ ಒಪ್ಪಿಸಿರೆ ಸಾಕಪ್ಪಾತ ದೇವರ ಗ್ಯಾನ ಮಾಡಿಕಣ್ತ್. "ಪಾಪಿ ಹೋದಲೆಲ್ಲ ಪಾತಾಳಕ್ಕೆ ನೀರು" ತೇಳುವಂಗೆ ರಂಜು ಹೆಂಗೆಲ್ಲೋ ಗದ್ದೆ ಎಲ್ಲಾ ದಾಟಿ ಬಂದಾತ್. ಇದೊಂದು ಪಾಲ ದಾಟಿಬುಟ್ಟರೆ ಸಾಕಂತೇಳಿಕಂಡ್ ಪಾಲ ದಾಟಿತ್. ಪಾಲದಾಟಿ ಮಧ್ಯಕ್ಕೆ ಎತ್ತಿಟು. ಅಷ್ಟೊತ್ತಿಗೆ ಮಣ್ಣ್ ಅಂಟಿಕಂಡ್ ಇದ್ದ ಹವಾಯಿ ಚಪ್ಪಲ್ ಜಾರಿ ಬೀಳುವ ರಭಸಲಿ ಇದ್ದ ರಂಜು ಕೈಲಿದ್ದ ಕೊಡೆನ ತೆಗ್ದ್ ಗದ್ದೆಗೆ ಬಿಸಾಡ್ತ್. ಇಂವನ ಕುತ್ತಿಗೆ ಗಂಟ ನೀರ್ ಇದ್ದ ತೋಪ್‌ಲಿ ಬಿದ್ದ್ ಆಕನ, ಒಂದು ಕೈಲಿ ಪಾಲನ, ಒಂದು ಕೈಲಿ ಬ್ಯಾಗ್‌ನ ಹಿಡ್‌ಕಂಡಿತ್ತ್. ಇವಂಗೆ ಈಗ ಹೆಂಗೆ ಮೇಲೆ ಹತ್ತೊಕು ಅಂತಲೇ ಗೊತ್ತಾತ್‌ಲೆ. ಮತ್ತೆ ಅಂವ ಗ್ಯಾನ ಮಾಡ್ತ್, ಇಂದ್ ಮಾತ್ರ ನನ್ನ ಜೀವ ಸಮೇತ ಉಳಿಯಕಿಲೇಂತ, ಕೈಲಿದ್ದ ಬ್ಯಾಗ್‌ನ ಬುಟ್ಟೇ ಬುಡ್ತ್. ಮತ್ತೆ ಹೆಂಗೆಲೆಲೋ ಮಾಡಿ ತೋಡ್‌ಂದ ಮೇಲೆ ಹತ್ತಿ ಬಾತ್. ತೋಡ್‌ಂದ ಮೇಲೆ ಹತ್ತಿ ಬಂದ ರಂಜುಗೆ ಅವನ ಅರ್ಧ ಜೀವ ಹಾರಿ ಹೋದಂಗೆ ಆಗಿತ್ತ್. ಕೊನೆಗೆ ಯಾಕೋ ಕಾಲ್ ನೋಡ್ತ್ ಕಾಲ್‌ಲಿ ಚಪ್ಪಲ್ ಉಟ್ಟಾ, ರಂಜು ಒಂದು ಸಲ ತೋಡ್‌ಲಿ ಕಣ್ಣಾಡಿಸಿತ್. ಆ ಚಪ್ಪಲ್ ಎಲ್ಲಿ ಹೋಗಿ ಎತ್ತಿಟೋ ಏನೊ? ಮತ್ತೆ ರಂಜು ಗದ್ದೆಲಿ ಬಿಸಾಕಿದ ಕೊಡೆನ ತಕಂಡ್ "ಬಂದ ದಾರಿಗೆ ಸುಂಕ" ಇಲ್ಲೆಂತ ಮನೆ ಕಡೆ ಹೊರ್ಟತ್. ಅಷ್ಟಾಕನ ಒಂದು ಒಳ್ಳೆ ಮಳೆನು ಗಾಳಿನು ಸುರಾತ್. ಆ ಗಾಳಿ ಅವನ ಕೈಲಿದ್ದ ಕೊಡೆನ ಅತ್ತ, ಇತ್ತ ಆಡ್ಸಿ ಆಕನ, ಆ ಕೊಡೆ ಗಾಳಿಗೆ ಉಲ್ಟಾ, ಪಲ್ಟಾ ಆತ್. ರಂಜು ಅದರ ಸರಿ ಮಾಡ್‌ಕಾಕನ, ಆ ಕೊಡೆದ್ ಕಡ್ಡಿ ಎಲ್ಲ ಮುರ್ತ್. ಮತ್ತೆ ಆ ಕೊಡೆನ ಮಡ್ಚಿ ಕೈಲಿ ಹಿಡ್ಕಂಡ್ ಮಳೆಲಿ ಚೆಂಡಿ ಆಕಂಡೇ ಹೋತ್. ಮನೆ ಹೋಗಿ ಎತ್ತ್‌ಕಾಕನ, ನೀರಿಗೆ ಬಿದ್ದ ಕೋಳಿನ ಹಂಗೆ ಆಗಿ ಹೋಗಿತ್ತ್. ಅವನ ತಲೆ ಕೂದಲ್. ಇದರ ಕಾಂಬಕಾಕನೇ ರಂಜನಿ, ಏನೋ ಅನಾಹುತ ಆಗಿಟ್ಟುಂತ ಗ್ಯಾನ ಮಾಡ್ತ್. ಸುಸ್ತಾಗಿ ಬಂದವರೊಟ್ಟಿಗೆ ಈಗಳೇ ಏನ್ ಕೇಳಿಕಾಗದ್‌ತ ಗ್ಯಾನ ಮಾಡಿ ಕಂಡ್, ರಂಜುದು ಊಟ ಆದಮೇಲೆ ರಂಜನಿ ಕೇಳ್ತ್. ಆಗ ರಂಜು ನಡ್ದ ವಿಷಯನೆಲ್ಲ ಹೇಳ್ತ್. ಇದನ್ನೆಲ್ಲ ಕೇಳಿ ಆಕನ ರಂಜನಿ ಹೇಳ್ತ್ ಸಧ್ಯ ನಿಮ್ಮ ಪ್ರಾಣಕ್ಕೆ ಏನು ಅಪಾಯ ಆತ್ಲೆಲ್ಲ. "ಪ್ರಾಣ ಎಂಬ ಪಕ್ಷಿ" ಹಾರಿ ಹೋದರೆ ಮತ್ತೆ ಮರಳಿ ಪಡೆಯಕೆ ಆದುಲೆಲ್ಲಾ. ದುಡ್ಡು ಇಂದಲ್ಲ, ನಾಳೆ ಸಂಪಾದಿಸಕ್. ಆದರೆ ಪ್ರಾಣನ ಸಂಪಾದಿಸಿಕೆ ಆದುಲೆ ಅಲಾ? ನೀವು ಸೋಮವಾರನೆ ಉಷಾರಿಲ್ಲದೆ ಇರ್‌ಕಾಕನ ಆಸ್ಪತ್ರೆಗೆ ಹೋಗಿದ್ದರೆ, ಮದ್ದಿಗೆ ಸ್ವಲ್ಪ ಖರ್ಚು ಆಕ್ತಿತ್ತ್ ಅಷ್ಟೆ, ಈಗ, ನೀವು ಆ ದುಡ್ಡ್‌ನ ಉಳ್ಸಿಕೆ ಹೋಗಿ ಇದ್ದದ್ದನ್ನೆಲ್ಲಾ ಕಳ್ಕಂಡ್ ಬಂದರಿ. ಇನ್ನಾದರ್ ತಿಳಂಕಣಿ, ಇಲ್ಲಾದ ಆಶೆ ಪಟ್ಟ್‌ಕಂಡ್, ಹಣ ಉಳ್ಸಿಕೆ ಹೋಗಬೇಡಿ. "ಅತಿ ಆಸೆ, ಗತಿ ಗೇಡ್" ಅಂತ ನಾನ್ ಎಷ್ಟ್ ಸಾರಿ ಹೇಳ್‌ತ್ಲೆ. ಇನ್ನಾದರೂ ಈ ನಿಯಮನ ಪಾಲಿಸಿರೆ? ಅಂತ ರಂಜನಿ, ರಂಜುನ ಕೇಳ್ತ್. ಆಗ ರಂಜು "ಹುಂ" ಅಂತ ತಲ ಆಡ್ಸಿಕಂಡ್ ಒಲೆ ಬುಡಲಿ ಕುದ್ದತ್.

ಬೊಳಿಯನ ಆಶಾಭೀಮಯ್ಯ, ಹೆಗ್ಗಳ ಗ್ರಾಮ

---

**ಕವನ**

ನುಡಿದಂತೆ ನಡೆವವ
ನುಡಿದಂತೆ ನಡೆವವ
ನಾನು
ನುಡಿವವಳು
ಅವಳು
ನಡೆವವನು
ನಾನು

ಸುನಿತ ಚಂದ್ರಶೇಖರ್

---

## ಸಂಗಾತಿ ಭವಿಷ್ಯ : ಜುಲೈ 16 ರಿಂದ 31, 2000

ಜೋತಿಷ್ಯರು : ಗಿರೀಶ್‌ಕುಮಾರ್, ಕೊಯನಾಡು

**ಮೇಷ ರಾಶಿ** : ದೇಹದಲ್ಲಿ ರೋಗವು ಕಡಿಮೆಯಾಗುವುದು. ನೆಮ್ಮದಿ ಇರುವುದು. ಕೆಲಸ ಕಾರ್ಯಗಳಲ್ಲಿ ಯಶಸ್ಸು ದೊರೆಯುತ್ತದೆ. ಶತ್ರುಗಳು ದೂರವಾಗುವರು. ಬಯಸಿದ ವಸ್ತು ಕೈ ಸೇರುವುದು. ಹಣಕಾಸಿನ ವ್ಯವಹಾರದಲ್ಲಿ ಲಾಭವಿದೆ.

**ವೃಷಭ ರಾಶಿ** : ಆರೋಗ್ಯ ಹದಗೆಡುವುದು. ವ್ಯರ್ಥ ಪ್ರಯಾಣದಿಂದ ತೊಂದರೆಯಿದೆ. ಕುಟುಂಬದಲ್ಲಿ ಅನಾವಶ್ಯಕ ಕಲಹವೇರ್ಪಡುವುದು. ಹಣಕಾಸಿನ ವ್ಯವಹಾರದಲ್ಲಿ ಸುಧಾರಣೆ ಆಗುವುದು.

**ಮಿಥುನ ರಾಶಿ** : ಮಿತ್ರರೊಡನೆ ಕಲಹವೇರ್ಪಡುವುದು. ಅನಾರೋಗ್ಯ ಸಂಭವವಿದೆ. ಧನಹಾನಿಯಾಗುವುದು. ಘನತೆ ಗೌರವಗಳಿಗೆ ತೊಂದರೆ ಬರಬಹುದು. ಹಣಕಾಸಿನ ಬಗ್ಗೆ ವ್ಯವಹರಿಸುವಾಗ ಜಾಗ್ರತೆ ವಹಿಸಿ.

**ಕರ್ಕಾಟಕ ರಾಶಿ** : ಸಂಸಾರದಲ್ಲಿ ಖರ್ಚು ವೆಚ್ಚಗಳು ಹೆಚ್ಚುವುದು. ಸ್ತ್ರೀಯರಿಂದ ಮನಸ್ಸಿಗೆ ನೆಮ್ಮದಿ ಇರಲಾರದು. ಉದ್ಯೋಗದಲ್ಲಿ ಗೌರವ ಹೆಚ್ಚುವುದು. ಹಣಕಾಸಿನ ವ್ಯವಹಾರದಲ್ಲಿ ನಷ್ಟ ಅನುಭವಿಸುವಿರಿ. ಶತ್ರುಗಳಿಂದ ದೂರವಿರುವುದು ಒಳ್ಳೆಯದು.

**ಸಿಂಹ ರಾಶಿ** : ಆರೋಗ್ಯವು ಉತ್ತಮಗೊಳ್ಳುವುದು. ಸಂಸಾರದಲ್ಲಿ ನೆಮ್ಮದಿ ನೆಲೆಸುವುದು. ಹಣಕಾಸಿನ ವ್ಯವಹಾರದಲ್ಲಿ ಗೆಲುವು ಸಾಧಿಸುವುದು. ಭೂಮಿ ಸಂಬಂಧ ವ್ಯವಹಾರದಲ್ಲಿ ಜಯ ಸಿಗುವುದು. ಶತ್ರುಗಳು ಮಿತ್ರರಾಗುವರು. ಹೊಸ ಮಿತ್ರರ ಭೇಟಿ.

**ಕನ್ಯಾ ರಾಶಿ** : ಅಪಘಾತ ಭಯವಿದೆ. ವಾಹನದಲ್ಲಿ ಸಂಚರಿಸುವಾಗ ಎಚ್ಚರ ಅಗತ್ಯ. ಅನಾವಶ್ಯಕವಾಗಿ ಅಪವಾದ ಕೇಳಲಿದ್ದೀರಿ. ಕಲಹಕ್ಕೆ ಆಸ್ಪದ ಕೊಡದಿರಿ. ಆಸ್ತಿಪಾಸ್ತಿಗೆ ಧಕ್ಕೆ ಉಂಟಾಗಬಹುದು. ವಿಷ್ಣುವನ್ನು ಆರಾಧಿಸಿ.

**ತುಲಾ ರಾಶಿ** : ಕುಟುಂಬ ವಲಯದಲ್ಲಿ ಕಲಹ ವೇರ್ಪಡುವುದು. ಉದರ ವ್ಯಾಧಿ ಕಾಣಿಸಬಹುದು. ದೇಹದಲ್ಲಿ ರಕ್ತದೊತ್ತಡದಿಂದ ಮನಸ್ಸಿಗೆ ನೆಮ್ಮದಿ ಇಲ್ಲ. ಅಧಿಕಾರಿ ಜನಗಳ ಕೋಪಕ್ಕೆ ತುತ್ತಾಗುವಿರಿ. ಹಣಕಾಸಿನ ವ್ಯವಹಾರದಲ್ಲಿ ನೆಮ್ಮದಿ ಸಹನಾಭೂತಿಯಿಂದ ವರ್ತಿಸುವುದು ಒಳಿತು.

**ವೃಶ್ಚಿಕ ರಾಶಿ** : ಸರಕಾರಿ ಅಧಿಕಾರಿಗಳಿಂದ ತೊಂದರೆ ಆಗಬಹುದು. ಅಪವಾದಕ್ಕೆ ಈಡಾಗುತ್ತೀರಿ. ಸ್ವಂತ ಜನರಿಂದ ನಷ್ಟ ಅನುಭವಿಸುತ್ತೀರಿ. ಮಾನಸಿಕ ವ್ಯಥೆಯಿಂದ ದೂರವಾಗಲು ಶ್ರೀ ಕ್ಷೇತ್ರ ಸುಬ್ರಮಣ್ಯದಲ್ಲಿ ನಾಗ ತಾಂಬೂಲಾದಿಗಳನ್ನು ಮಾಡಿಕೊಂಡು ಬನ್ನಿ.

**ಧನಸ್ಸು ರಾಶಿ** : ಸರ್ವ ಕಾರ್ಯಗಳಲ್ಲಿ ಜಯ. ಆರೋಗ್ಯ ಸುಧಾರಿಸಬಹುದು. ಹಣಕಾಸಿನ ವ್ಯವಹಾರದಲ್ಲಿ ಜಯವಿದೆ. ಮಾನಸಿಕ ವ್ಯಥೆ ದೂರ ಮಾಡಿ. ಗೃಹ ವಲಯದಲ್ಲಿ ನೆಮ್ಮದಿ ಇರುವುದು. ಗಣಪತಿಯನ್ನು ಆರಾಧಿಸಿಕೊಂಡು ಬನ್ನಿ.

**ಮಕರ ರಾಶಿ** : ದೇಹದಲ್ಲಿದ್ದ ರೋಗವು ನಿವೃತಿಯಾಗಿ ಮನಸ್ಸಿಗೆ ನೆಮ್ಮದಿ. ವ್ಯವಹಾರ ಉದ್ಯೋಗದಲ್ಲಿ ಜಯ ಲಭಿಸುವುದು ಸ್ವರ್ಣ ಪ್ರಾಪ್ತಿ ಯೋಗವಿದೆ. ಮನಸ್ಸಿನಲ್ಲಿರುವ ವ್ಯಾಕುಲತೆಯನ್ನು ದೂರ ಮಾಡಿ. ಶನಿಯನ್ನು ಆರಾಧನೆ ಮಾಡಿಕೊಂಡು ಬನ್ನಿ.

**ಕುಂಭ ರಾಶಿ** : ಶತ್ರುಗಳಿಂದ ಉಪಟಳವಿದೆ. ರಕ್ತಕೂಟದಿಂದ ದೇಹಕ್ಕೆ ನೆಮ್ಮದಿ ಇಲ್ಲ. ಗೃಹ ವಲಯದಲ್ಲಿ ಕಲಹವೇರ್ಪಡುವುದು. ಪಂಚೇಂದ್ರಿಯಗಳಿಗೆ ಕಡಿವಾಣ. ವ್ಯವಹಾರಿಸಿ ಶನಿ ಜಪ ಮಾಡಿಸಿಕೊಂಡು ಬನ್ನಿ.

**ಮೀನ ರಾಶಿ** : ವ್ಯವಹಾರ ಉದ್ಯೋಗದಲ್ಲಿ ನೆಮ್ಮದಿ. ಹಣಕಾಸಿನ ವ್ಯವಹಾರದಲ್ಲಿ ಸ್ವಲ್ಪಮಟ್ಟಿಗೆ ಜಯ. ಮಸ್ಸಿನಲ್ಲಿ ಗುಪ್ತ ವ್ಯವಹಾರಗಳನ್ನು ಹತ್ತಿಕ್ಕುವುದರಿಂದ ಮನಸ್ಸಿಗೆ ನೆಮ್ಮದಿ. ಘನತೆ, ಗೌರವಗಳಿಗೆ ಧಕ್ಕೆಯಾಗಲ್ಲಿಕ್ಕಿಲ್ಲ. ನೂತನ ಮಿತ್ರರ ಆಗಮನದಿಂದ ನೆಮ್ಮದಿ.

---

## ನಿಧನ

ಮರಗೋಡು ಗ್ರಾಮದ ನಿವಾಸಿ ತೊಂಡೀರ ಬಿದ್ದಪ್ಪನವರ ಧರ್ಮಪತ್ನಿ **ಕುಂಞಮ್ಮ**ನವರು ದಿನಾಂಕ 20-6-2000 ರಲ್ಲಿ ವಿಧಿವಶರಾದರು. ಇವರಿಗೆ 65 ವರ್ಷ ಪ್ರಾಯವಾಗಿತ್ತು. ಮೃತರು ಪತಿ ಮತ್ತು ಎರಡು ಗಂಡು ಮಕ್ಕಳು ಹಾಗೂ ಅಪಾರ ಬಂಧುಬಳಗದವರನ್ನು ಅಗಲಿದ್ದಾರೆ.

ಮರಗೋಡು ಗ್ರಾಮದ ನಿವಾಸಿ **ಮುಕ್ಕಾಟೀರ ಮಾಚಯ್ಯ**ನವರು ದಿನಾಂಕ 13-6-2000 ರಲ್ಲಿ ವಿಧಿವಶರಾದರು. ಇವರಿಗೆ 85 ವರ್ಷ ಪ್ರಾಯವಾಗಿತ್ತು. ಮೃತರು ಪತ್ನಿ ಮತ್ತು ಎರಡು ಗಂಡು ಹಾಗೂ ಒಂದು ಹೆಣ್ಣು ಮಕ್ಕಳನ್ನು ಹಾಗೂ ಅಪಾರ ಬಂಧುಬಳಗದವರನ್ನು ಅಗಲಿದ್ದಾರೆ.

ಎಂ. ಕೆ. ಜನಾರ್ಧನ, ಮರಗೋಡು

---

**ಕೋಪದ ತಾಪವನ್ನು ಆರಿಸಬೇಕಾದರೆ ಮನಸ್ಸನ್ನು ಹತೋಟಿಯಲ್ಲಿಡಬೇಕು**

# ವಾಂಟೆಡ್ ಮಿಸ್ಟರ್ ರಾಜು [ನಮ್ಮ ರಾಜು ಮಂಜನ ಕಥೆ]

ಲೇಖನ : ಶಂಕರನ ಬಸಪ್ಪ

ಧಾರಾವಾಹಿ -14

**ಹಿಂದೆ ನಡದದ್.......**

ಕೂರ್ಗಳ್ಳಿ ರಸ್ತೆಲಿ ಟ್ರಾಫಿಕ್ ಇನ್‌ಸ್ಪೆಕ್ಟರ್ ಆಗಿ ಕೆಲಸನ ನಿರ್ವಹಿಸಿದ ಮೇಲೆ ಒಂದ್ ಅಸಾಯಕ ಹೆಣ್ಣ್ ಗೂಡೆನ ಮಾನನೂ ಪ್ರಾಣನೂ ಮಿ. ರಾಜು ಉಳ್ಸಿದೆ. ಆ ಗೂಡೆನ ಜವಾಬ್ದಾರಿನ ಆ ಕೂರ್ಗಳ್ಳಿ ಗೌಡ್ರಿಗೆ ಒಪ್ಪಿಸಿ ನಂತರ ಮಿ. ರಾಜು ಮೈಸೂರು ಸಿಟಿಗೆ ಹೊರಟದೆ. ಮಾರನೆ ದಿನ ಇಂವ ಮೈಸೂರು ಸಿಟಿಗೆ ಗೈಡ್ ಆಗಿ ಮೈಸೂರು ಅರಮನೆ ಮುಂದಿನ ಗಣಪತಿ ದೇವರ ಗುಡಿ ಹತ್ರ ಹೋಗಿದ್ದದೆ.

ಮುಂದಕೆ..........

ಬೆಳಿಗ್ಗಿನ ಜಾವದ ಗಾಢವಾದ ನಿದ್ದೇಲಿ ಮುಳುಗಿದ ರಾಜುಗೆ ಏನೋ ಒಂದು ಅಪೂರ್ವವಾದ ಕನ್ಸ್‌ನ ಕಾಣುತಾ ಇತ್ತ್.ಕಳೆದರಾತ್ರಿ ಅದೂ ಮಧ್ಯರಾತ್ರಿಲಿ ಒಂದು ಅಮಾಯಕ ಹೆಣ್ಣ್ ಗೂಡೆನ ಪ್ರಾಣನ ಉಳ್ಸುವಂತಹ ಅವಕಾಸ ಸಿಕ್ಕಿದ್ಕೆ ರಾಜುಗೆ ಬಹಳ ಖುಷಿ ಆಗಿತ್ತ್. ಆ ಖುಷೀಲೇ ತನ್ನ ಲಾಡ್ಜ್‌ಗೆ ಬಂದ್ ಮಲಗಿತ್. ಹಂಗಾಗಿ ರಾಜುನ ಕನ್ಸ್‌ಲಿ ಮೊದಲು ಹೊಳೆಲಿ ನೀರ್‌ಗೆ ಬಿದ್ದ್ ಸಾಯಕೆ ಹೋಗಿದ್ದ ಶಾಂತಿ ಗೂಡೆನ ಗ್ಯಾನ ಆಗಿ ಅವಳು ಕನಸ್ಸ್‌ಲಿ ಬಂದ್ ಹೆಂಗೆಲ್ಲೋ ಕಂಡಂಗೆ ಆಗ್‌ತಿತ್. ಅಷ್ಟೊತ್ತಿಗೆ ಮಾಮೂಲಿ ಚಾಯ್‌ವಾಲ ಚೋಕ್ರ ಛಾಯ್, ಗರಾಮಾ ಗರಂ ಚಾಯ್‌ತ್ತೇಳಿ ಕಿರುಚುದರ ಕೇಳಿ ರಾಜುಗೆ ಎಚ್ಚರ ಆಗಿಹೋತ್.

ನಿತ್ಯಕರ್ಮಗಳ್ನ ತೀರ್ಸಿಕಂಡ್ ರಾಜು ನೀಟಾಗಿ ಶೇವ್ ಮಾಡಿಕಂಡ್, ಸ್ನಾನ ಮಾಡಿ ನೀಟಾಗಿ ಗಡ್ಡ, ಮೀಸೆನ ಅಂಟಿಸಿ ಕಂಡ್, ಬಿಳಿ ಜುಬ್ಬ, ಬಿಳೀ ಪೈಜಾಮನ ಹಾಕಂಡ್, ಕಾಲಿಗೆ ಕೊಲ್ಲಾಪುರ ಚಪ್ಪಲಿ, ಕಣ್ಣಿಗೆ ಕಪ್ಪು ಕೂಲಿಂಗ್ ಗ್ಲಾಸ್‌ನ ಸಿಕ್ಕಿಸಿಕಂಡ್, ಬಹಳ ಸಾಧು ನಿರ್ಮಲ ಹೃದಯದ ಸಭ್ಯಸ್ತನಂಗೆ ಹೊರಟಿತಂ. ಅಲ್ಲೆ ಎದುರುಗಡೆ ಜನತಾ ಹೋಟೇಲ್‌ಲಿ ಹೊಟ್ಟೆ ತುಂಬಾ ಟಿಫನ್ ಮಾಡಿ ಏನ್ ಕೆಲ್ಸ ಹುಡ್ಕುದೂ ಇಂದ್‌ತ್ತೇಳಿ ಕಂಡ್ ನೆಟ್ಟಂಗೆ ಅರಮನೆ ಗೇಟ್ ಮುಂದೆ ಇರ್‍ವ ಗಣಪತಿ ಗುಡಿಗೆ ಹೋತ್. ಅಲ್ಲಿ ಆ ಕಂಟಕ ನಿವಾರಕ ಮಹಾಗಣಪತಿಗೆ ಸಾಷ್ಟಾಂಗ ನಮಸ್ಕಾರ ಹಾಕಿ ಮೇಲೆ ಎದ್ದತ್.

ಮೈಸೂರು ನಗರನ ಮತ್ತೆ ಮಹಾರಾಜರ್ ಆಳಿದ ಅವರ ವೈಭವ ಇಂತದರಲ್ಲೇ ನೋಡಿಕ್ಕೋಸ್ಕರ ಬಹಳ ದೂರ ಡೆಲ್ಲಿ ಕಡೇಂದ ಒಂದ್ ಲಕ್ಷುರಿ ಟೂರಿಸ್ಟ್ ಗಾಡಿ ಬಂದ್ ಆ ಅರಮನೆ ಗೇಟ್ ಮುಂದೆ ನಿಂತತ್. ಆ ಬಸ್‌ಂದ ಇಳ್ದ್ ಬಂದ ವಯಸ್ಸಾದ ಒಬ್ಬ ಈ ಗೇಟ್‌ನವನ ಹತ್ರ ಹಿಂದಿ ಭಾಸೆಲಿ ಅರಮನೆ ಒಳಗೆ ಹೋಕುತಾ ಕೇಳ್‌ತಿತ್ತ್. ಈ ಗೇಟ್ ಕೀಪರ್ ಕನ್ನಡ ಭಾಸೆಲಿ ಆ ಕಡೆ ಗೇಟ್‌ಂದ ಹೋಗಿ, ಈ ಕಡೆಂದ ಟಿಕೇಟ್‌ನ ತಕಂಡ್ ಹೋಗಿ ತಾ ಹೇಳ್ತಿತ್. ಇವರ ಭಾಸೆ ಅವುಕೆ ಅರ್ಥ ಆದುಲೆ, ಅವರ ಭಾಸೆ ಇವುಕೆ ಅರ್ಥ ಆದುಲೆ. ಹಿಂಗಾಗಿ ಸ್ವಲ್ಪ ಹೊತ್ತ್ ಅತ್ತ ಇತ್ತ ಬಯ್ದಾಡಿಕಂಡೊ. ಇವರ ಒದ್ದಾಟನ ನೋಡ್ದ ರಾಜು ಆ ವಯಸ್ಸಾದ ಮನುಷ್ಯನ ಹತ್ರ ಹೋಗಿ ಅವನ ಕೈನ ಹಿಡ್ದ್ ಕುಲ್ಕಿತ್, ದೇಖೋಜೀ, ಮೈ ರಾಜು ಹೂಂ. ಗೌರ್ನ್‌ಮೆಂಟ್ ಎಪಾಯಿಂಟೆಡ್ ಗೈಡ್ ಹೂಂ. ಮೈ ತುಮ್ ಟೂರಿಸ್ಟ್ ಲೋಗೋಂಕೋ ಗೈಡ್ ಕರ್‍ತಾ ಹೂಂ. ಆಯಿಯೆ ಮೇರಾ ಸಾಥ್ ಆಪ್‌ಕೋ ಯೇ ಸಬ್ ಪ್ಯಾಲೆಸ್ ಔರ್ ದೂಸ್‌ರ ದೇಖ್‌ನಿಕೊ ಅಚ್ಛಾ ಅಚ್ಛಾ ಜಗೊಂಕೋ ಮೈ ದಿಕಾತ ಹುಂ. ತಾ ಹೇಳಿಕಂಡತ್.

ಆಗ ಆ ನಾರ್ಥ್‌ನ್ ಇಂಡಿಯಾದ ಟೂರಿಸ್ಟ್ ಜನ ಆದ ಈ ಮನುಷ್ಯ ಅಚ್ಛಾ ಬಾಯಿಸಾಬ್ ಮೈ ಹೂಂ ಮೆಹತಾ. ಹಮ್ ಲೋಗ್ ಡೆಲ್ಲಿಸೆ ಆಯಾ ಹೈ. ಪ್ಲೀಸ್ ಹಂ ಲೋಗೊಂಕೊ ಇತ್‌ನೀ ಮರದದ್ ಕರೊ ಪ್ಲೀಸ್ ಹೆಲ್ಪ್ ಅಸ್ ತುಮ್ಹಾರೆಕೊ ಬಹುತ್ ಪ್ರಣಾಮ್ ಕರತಾ ಹುಂ. ತಾ ಹೇಳಿ ಮಿಸ್ಟರ್ ರಾಜುನ ಇವರ ಬಸ್ ಒಳಗೆ ಕರ್‍ಕಂಡ್ ಹೋತ್. ಬಸ್ ಒಳಗೆ ಹತ್ತಿದಂಗೆ ರಾಜು ಹೇಳ್ತ್ ಡ್ರೈವರ್ ಸಾಬ್ ಬಸ್‌ಕೊ ಪೀಚೆವಾಲೆ ದೂಸ್‌ರೆ ದಕ್ಷಿಣ್ ಗೇಟ್‌ಪೆ ಚಲಾವೋ. ಯೆ ಗೇಟ್‌ಪೆ ಅಂದರ್ ಎಂಟ್ರೀ ನಹೀ ಹೈ ತ್ತೇಳ್ತ್. ಆಗ ಆ ಡ್ರೈವರ್ ಬಸ್ಸ್‌ನ ಸೀದಾ ಹಿಂದೆಗಡೆ ದಕ್ಷಿಣ ಗೇಟ್ ಹತ್ರ ತಕಂಡ್‌ಹೋಗಿ ನಿಲ್ಸಿತ್. ಆ ಗೇಟ್‌ಲಿ ಅಷ್ಟೊತ್ತಿಗಾಗಲೇ ಇವರ ತರದ ಟೂರಿಸ್ಟ್‌ಗ ತುಂಬಾ ಜನ ಬಂದ್ ಸೇರಿ ಬುಟ್ಟಿದೊ. ಬಸ್‌ಂದ ಇಳ್ದ್ ರಾಜು ನೆಟ್ಟಂಗೆ ಟಿಕೇಟ್ ಕೌಂಟರ್‌ಗೆ ಹೋಗಿ ಬಸ್ಸ್‌ಲಿದ್ದ ಜನಕ್ಕೆಲ್ಲಾ ಒಟ್ಟಿಗೆ ಟಿಕೇಟ್‌ನ ತಕಂಡತ್.

ಈ ಬಸ್ಸ್‌ಂದ ಕೆಳಗೆ ಇಳ್ದ ಜನಗಳಿಗೆ ಇಲ್ಲಿನ ಲೋಕಲ್ ಜನ ಗಂಧದ ಕುಶಲಕೆತ್ತನೆ ವಸ್ತುಗಳ ವ್ಯಾಪಾರ ಮಾಡಿಕೆ ನಾಮುಂದೆ ತಾಮುಂದೆ ತಾ ಗುಂಪು ಕಟ್ಟಿಕಂಡ್ ಮುತ್ತಿ ಕಂಡಿದ್ದೊ. ಆಗ ರಾಜು ಈ ಟೂರಿಸ್ಟ್ ಜನಕೆ ಒಂದ್ ಸರ್ತಿ ಜೋರಾಗಿ ಕಿರುಚಿ ಹೇಳ್ತ್. ದೇಖಿಯೇ ಸಬ್ ಲೋಗ್ ಮೇರೆ ಪೀಚೆಹೀ ರಹನಾ. ಇದರ್ ಉದರ್ ನಹೀ ಜಾನಾ, ಸಮಜೆ, ಔರ್ ಇದರ್ ಕುಚ್ ಸಾಮಾನ್ ನಹೀ ಖರೀದ್ ಕರ್‌ನಾ. ಇದರ್ ಸಬ್ ಬೋಗಸ್ ಹೈ. ನೀವು ಎಲ್ಲಾ ಮೋಸ ಹೋಗಿಬುಟ್ರೆ ಸಬ್ ಜನೋ ಮೇರೆ ಪೀಚೆ ಸಾವದಾನ್‌ಸೆ ಆಯೇತೊ ಸಬ್ ಅಚ್ಛಾಹೋತಾ ಹೈ ತಾ ಒಂದ್ ಎಚ್ಚರಿಕೆ ಕೊಡ್ತ್. ಆಗ ಅಲ್ಲಿದ್ದ ಜನ ಎಲ್ಲಾ ರಾಜುನ ಮಾತಿಗೆ ಬೆಲೆ ಕೊಟ್ಟ್ ಅವನ ವ್ಯಕ್ತಿತ್ವಕ್ಕೆ ಮೆಚ್ಚಿಕಂಡ್ ಅಚ್ಛಾ, ಅಚ್ಚಾ ಬಾಯಿತ್ತೇಳಿಕಂಡ್ ಎಲ್ಲವೂ ಬೇಗ ಬೇಗ ಹೆಜ್ಜೆ ಹಾಕಂಡ್ ಅವನ ಹಿಂದೇ ಹೊರಟೊ.

ಅರಮನೆ ಒಳಗಡೆಗೆ ಹೋಕೆ ಮೊದ್ಲ್ ಸಾಲಾಗಿ ನಿಂತಿದ ಜನರೊಟ್ಟಿಗೆ ಪಕ್ಕದ ಹಾಲ್‌ಂದ ಮೇಲೆ ಹತ್ತಿ ಹೋದೊ. ಅಲ್ಲಿ ರಾಜಮನೆತನದ ಒಂದೊಂದು ಕಲಾಕೃತಿಗಳ ಜನ ನೋಡಲಿತ್ತೇಳಿ ಸರಿಯಾಗಿ ಜೋಡ್ಸಿ ಇಟ್ಟಿದ್ದೊ. ಈ ರಾಜು ಆ ಒಂದೊಂದು

ಕಲಾಕೃತಿಗಳ ಬಗ್ಗೆ ವಿವರ ಕೊಟ್ಟ್‌ಕಂಡ್ ತೋರ್ಸಿಕಂಡ್ ಹೋಗ್‌ತಿತ್. ಈ ಟೂರಿಸ್ಟ್ ಜನ ಇವನ ಸುತ್ತು ಗುಂಪಾಗಿ ಕೂಡಿಕಂಡ್ ಇಂವ ಹೇಳಿ ವಿವರಿಸಿಕೊಡುದರ ಆಲಿಸಿಕಂಡ್ ಜೊತೆಲೇ ಸಾಗುತಿದ್ದೊ. ಅಲ್ಲಿಂದ ಎಡಗಡೆ ಕೊಂಬರೆಗೆ ನುಗ್ಗಿದೊ. ಅಲ್ಲಿ ಬೇರೆ ಬೇರೆ ದೇಶಗಳಿಂದ ಬೆಲ್ಜಿಯಂನಿಂದ ಗ್ಲಾಸ್‌ಗ, ಕನ್ನಡಿಗ, ಇಟಲಿಯಿಂದ ಲೋಹದ ಕಲಾಕೃತಿಗ, ಬರ್ಮಾ, ಥಾಯ್ಲೆಂಡ್‌ದ ಮರದ ಕಲಾಕೃತಿಗ ಮತ್ತೆ ಇಂಗ್ಲೀಷ್‌ರವರಿಂದ ಬಂದಂತಹ ಅಪೂರ್ವ ಕೆತ್ತನೆಗಳ ಕುಸುರಿ ಕೆಲ್ಸಗಳ ಚಿನ್ನಾಭರಣಗ, ವಜ್ರ, ಹವಳಗಳ ಜೋಡಿಸಿ ತಯಾರು ಮಾಡಿ ದಂತ ಹಲವಾರು ತುಂಬಾ ಬೆಲೆ ಬಾಳುವಂತಹ ವಸ್ತುಗಳ ನೋಡ್ದ ಈ ಜನ ಬಹಳ ಆಶ್ಚರ್ಯಲಿ ನೋಡಿ ಖುಷಿ ಪಡುತಿದ್ದೊ. ಅಲ್ಲಿಂದ ದರ್ಬಾರ್ ಹಾಲಿಗೆ ಬಂದೊ. ಅಲ್ಲಿ ಹಳೇಕಾಲದ ವಿಜಯನಗರ ರಾಜನಾದ ಶ್ರೀ ವಿಕ್ರಮಾದಿತ್ಯನ ವಜ್ರಖಚಿತ ಪಟ್ಟಾಭಿಷೇಕದ ದೊಡ್ಡ ಸಿಂಹಾಸನನ ತೋರ್ಸಿತ್. ಅದರಲ್ಲಿ ಒಂಬತ್ತು ಮೆಟ್ಲ್‌ಗಳಲ್ಲಿ ಎರಡೂ ಬದಿಗೆ ನಿಲ್ಸಿದ ಗೊಂಬೆಗಳ ತೋರ್ಸಿ ಆ ಒಂದೊಂದು ಮೆಟ್ಲ್‌ಗಳ ಬೊಂಬೆಗೆ ರಾಜಂಗೆ ಒಂದೊಂದು ತರದ ಕಥೆಗಳ ಹೇಳುತ್ತಿದ್ದುದರ ವಿವರಿಸಿ ಕಂಡ್ ಹೇಳಿ ಕೊಡ್ತ್ ಮತ್ತೆ ಸಿಂಹಾಸನದ ಮೇಲೆ ಮದ್ಯಲಿ ಕೂರಿಸಿದ ಆ ಸುಂದರವಾದ ಚಿನ್ನದ ಗಿಣಿನ ಕಣ್ಣಿಗೆ ಕೂರಿಸಿದ ಅತ್ಯಮೂಲ್ಯವಾದ ವಜ್ರದ ಮಾಹಿತಿನ ಕೂಡಾ ಹೇಳಿ ಕೊಟ್ಟತ್. ಇದಾದ ಮೇಲೆ ಆಗಿನ ಮಹಾರಾಣಿಗ ವಾಸ ಮಾಡ್‌ತಿದ್ದ ಕೊಂಬರೆಗಳ ಮತ್ತೆ ಅಲ್ಲಿ ಮೇಲೆ ಮಾಡ್‌ಗೆ ಬರ್ದ ಚಿತ್ರಕಲೆಗಳೆಲ್ಲಾ ಯಾವ ಯಾವ ದೇಶದಕಲೆಗಾರರ್ ಬಂದ್ ಈ ಚಿತ್ರಗಳ ಕೆತ್ತಿದ್ದೋ ತೇಳುವ ವಿವರಗಳ ಬಹಳಲಾಯಕ್ಕ್‌ಲಿ ಆ ಜನಿಕೆ ಹಿಂದಿ ಭಾಷೆಲೇ ಹೇಳಿ ಕೊಡ್ತಿತ್. ಆಗ ಆ ಗುಂಪ್‌ನ ಮುಖ್ಯಸ್ತ ಮಿಸ್ಟರ್ ಮೆಹತ ಬಹಳ ಖುಷೀಂದ ಹೇಳ್ದೊ. ಯೇ ರಾಜು ಶಾಬ್ ಬಹುತ್ ಅಚ್ಛಾ ಆದ್‌ಮಿ ಹೈ, ಹಮಾರೆಕೊ ಮೈಸೂರು ದೇಖ್‌ನೇಕೆಲಿಯೆ ಅಬಿ ಬಹುತ್ ಆಸಾನ್ ಹೋಗಯಾತಾ ಹೇಳಿ ರಾಜುನ ಬೆನ್ ತಟ್ಟಿ ಅಭಿನಂದಿಸಿದೊ.

ಇನ್ನೂ ಅಲ್ಲಿ ನೋಡಿಕೆ, ಬಾಕಿ ತುಂಬಾ ಇತ್. ಅಲ್ಲಿನ ಪಾಕ ಸಾಲೆ, ಅಂತಪುರದ ಪಡಸಾಲೆ ಹಿಂಗೇ ಎಷ್ಟು ನೋಡಿರೂ ಮುಗಿಯಕಿಲ್ಲೆ. ಆದ್ರೂ ಬೇಗ ಬೇಗ ಇದನೆಲ್ಲಾ ನೋಡಿಕಂಡ್ ಇನ್ನು (Zoo) ಜೂಗಾರ್ಡನ್ನಿಗೆ ಹೋಗಿ ಅದರ ನೋಡಿಕೆ ತುಂಬಾ ಸಮಯ ಬೇಕಾದೆತಾ ಹೇಳಿ ಅಲ್ಲಿಂದ ಎಲ್ಲರನ್ನೂ ಬೇಗ ಬೇಗ ಹೊರಡಿಸಿತ್.

ಬಸ್ ಜೂಗಾರ್ಡನ್ ಗೇಟ್ ಪಕ್ಕಕ್ಕೆ ಪಾರ್ಕ್ ಆತ್. ರಾಜು ಹೋಗಿ ಎಲ್ಲವಕೂ ಗೇಟ್ ಪಾಸ್‌ನ ತಕಂಡ್ ಬಂದ್ ಜೂ ಗಾರ್ಡನ್ ಒಳಗಡೆಗೆ ಹೊರಟೊ. ಇಲ್ಲಿ ಕೂಡಾ ಆ ಜನ ಎಲ್ಲವಕೂ ಎಚ್ಚರಿಕೆ ಕೊಡ್ತ್. ಯಾರೊಬ್ಬರೂ ಇಲ್ಲಿನ ಪ್ರಾಣಿಗಳಿಗೆ ತಿಂಡಿ ಕೊಡ್ಕೆ ಬೊತ್ತ್. ಆ ಪ್ರಾಣಿಗಳ ಜೊತೆ ಆಟ ಆಡಿಕೆ, ಮುಟ್ಟಿಕೆ ಹೋಕೆ ಆಗದ್. ಬೇಗ ಬೇಗ ನನ್ನ ಜೊತೆ ನೀವು ಕಾಲ್‌ಹಾಕಿರೆ ಇಲ್ಲಿ ನೋಡಿಕೆ ತುಂಬಾ ಉಟ್ಟ್. ಅದನೆಲ್ಲಾ ನೋಡಕ್ ತ್ತೇಳ್ತ್.

ಮೊದಲ್ ಎಡಗಡೆ ಬರಿಂದ ನೋಡಿಕೆ ಶುರುಮಾಡ್ದೊ. ಎಲ್ಲಾ ತರದ ಬಣ್ಣ ಬಣ್ಣದ ಹಕ್ಕಿಗಳ ದೊಡ್ಡ ದೊಡ್ಡ ಪಂಜರದ ಒಳಗೆ ಇಟ್ಟಿದ್ದೊ. ನವಿಲ್‌ಗ, ಕಾಡುಕೋಳಿಗ, ನೀರ್ ಕೋಳಿಗ, ಉಷ್ಟ್ರ ಪಕ್ಷಿ, ಬಕ ಪಕ್ಷಿ, ಅಯ್ಯೋ ನೋಡ್ದಷ್ಟು ಮುಗಿಯದೇ ಇಲ್ಲೆ.

ಮುಂದೆ ಹೋದ್ರೆ ಹಾವುಗಳ ಪಂಜರಗ. ಅಲ್ಲಿ ಕೇರೆ ಹಾವುಗ, ಸರ್ಪಗ, ಪಟ್ಟೆಯ ಕೊಳಕ, ಕಾಟ್ ಮಾರ್ಖ, ಕಾಳಿಂಗ, ಕರ್ನಡ ಭಯಂಕರ ಭಯಂಕರ ಹಾವುಗ. ಕೆಲವು ಹಾವುಗ ಎಷ್ಟು ಉದ್ದ ತ್ತೇಳಿರೆ ಅದರ ಬಾಲನೇ ಕೊನೆಗೆ ಕಾಂಬುದಿಲ್ಲೆ. ಅಲ್ಲಿ ಕಾಳಿಂಗ ಸರ್ಪಕ್ಕೆ ನುಂಗಿಕೆ ಕೆಲವು ಹಾವನ್ನೇ ಕೊಡ್ತಿದ್ದೊ. ಆ ಕಾಳಿಂಗ ಸರ್ಪ ಮಿರ ಮಿರನೆ ಮಿಂಚ್‌ತಿತ್. ಅದರ ಹತ್ರ ಕೇರೆ ಹಾವುನ ಅಲ್ಲಿದ್ದಂವ ತಿಂಬಕೆ ಬುಟ್ಟತ್. ಅದ್ ಒಂದೇ ಕ್ಷಣ್‌ಕೆ ಹಾರಿ ಕೇರೆಹಾವುನ ತಲೆನ ಬಾಯಿ ಒಳಗೆ ಸೇರ್ಸಿಕಂಡ್ ನುಂಗಿಕೆ ಶುರ್ ಮಾಡ್ತ್. ಆ ಹಾವುನ ನುಂಗಿಕಾಕನ ಈ ಡೆಲ್ಲಿ ಜನರ ಮೈ ರೋಮಗೆಲ್ಲಾ ನೆಟ್ಟಂಗೆ ನಿಂತಂಗೆ ಆಗಿ ಹೋತ್. ಉಸುರ್ ಬುಡದೆ ನೋಡ್‌ತಿದ್ದೊ. What a real Natural Senceತ್ತೇಳಿ ಕಂಡ್ ಖುಷಿ ಪಟ್ಟ್‌ಕಂಡೊ.

ಅಲ್ಲಿಂದ ಮುಂದಕ್ಕೆ ಹೋಕಾಯ್ತ್. ಅರ್ಧ ಗುಂಪು ಅಲ್ಲಿದ್ದ ಆನೆಕಡೆ ಹಾಥೀ ಹಾಥೀ ತೇಳಿಕಂಡ್ ಓಡಿರೆ ಅರ್ಧ ಗುಂಪುಗರಿಬಿಚ್ಚಿ ಕುಣಿಯುತ್ತಿದ್ದ ನವಿಲಿನ ಕಡೆಗೆ ಪಿಕಾಕ್ ಪಿಕಾಕ್ ಅಂತ ಓಡ್ದೊ. ರಾಜು ಜೋರಾಗಿ ಕೂಗ್‌ಹಾಕಿ ಅವರನೆಲ್ಲಾ ಹತ್ತಿರಕೆ ಕರ್ದ್ ಒಂದ್ ಸರ್ತಿ ಬೊಯ್ತಿ. ಸಬ್ ಲೋಗ್ ಮೇರೆ ಪೀಚೆ ರೆಹೆನಾ ಇದರ್ ಉದರ್ ನಹೀ ಬಾಗ್‌ನಾ. ದೇಖೋ ಉದರ್ ಶೇರ್ ಹೈ ಓ ಬಹುತ್ ಡೇಂಜರಸ್. ಖತರ್‌ನಾಕ್ ಹೈ ಸಮ್‌ಜೇ ಅಂತ ಹೇಳಿ ಅವರನೆಲ್ಲಾ ಗುಂಪುಗೂಡಿಸಿಕಂಡ್ ಕಾಡು ಮನುಷ್ಯಗ ಇರುವ ಕಡೆಗೆ ಹೊರಟೊ. ಹೋ ಇಲ್ಲಿ ನೋಡಿರೆ ಎಷ್ಟೊಂದ್ ತರ ತರದ ಕಪಿಗ, ಕೆಂಪು ಮೂತಿ, ಕಪ್ಪು ಮೂತಿ, ದೊಡ್ಡ ಜಾತಿಗ, ಸಣ್ಣ ಜಾತಿಗ ಒಂದೊಂದು ಊರುಗಳ ಒಂದೊಂದು ತರ ಕಪಿಗಳ ಜಾತಿಗಳ ನೋಡಿ ಬಹಳ ಕುಷಿ ಪಟ್ಟೊ. ಅಲ್ಲೇ ಕಾಡು ಮನುಷ್ಯನ ಚೇಷ್ಟೆನ ನೋಡಿಕಂಡ್ ನಿಂತಿರ್‌ಕಾಕನ ಅಲ್ಲೇ ಬೆಳ್ದ್ ನಿಂತ ಹುಲ್ಲ್ ಪೊದೆ ಒಳಗಿಂದ ದೊಡ್ಡ ಒಂದು ಹುಲಿ ಘರ್ಜನೆ ಮಾಡಿಕೆ ಶುರು ಮಾಡ್ತ್. ಅದರ ಘರ್ಜನೆಗೆ ನೆಲನೇ ಅದುರುತಿತ್. ಅದ್ ಅಲ್ಲಿಂದ ನೆಗ್ದ್ ಹೊರಗೆ ಬಾಕೆ ನೋಡ್‌ತಿತ್. ಆದ್ರೆ ಹುಲಿಗ ಅವರ ಜಾಗ ಬುಟ್ ಮುಂದೆ ಬರದಂಗೆ ಬೇಲಿ ಹಾಕಿದ್ದ್ ಮತ್ತೆ ಸುತ್ತ ಆಳವಾದ ಕಡಂಗ ತೋಡಿದ್ದೊ. ಅದರ ಹಾರಿ ಬಾಕೆ ಅವುಗಳಿಗೆ ಆದ್‌ಲೆ. ಹುಲಿಗಳಿಗೆ ಮೇವುಕೊಡುತಿದ್ದೊ. ಬಿಳಿ ಹುಲಿಗ, ಪಟ್ಟೆ ಹುಲಿಗ, ಕೊಯ್ಯಿ ಕತ್ತಿ ಬರೆ ಹುಲಿಗ, ಕಂದು ಬಣ್ಣದ ಹುಲಿಗ ನೋಡಿಕೆ ಇವೆಲ್ಲಾ ಎಷ್ಟ್ ಪೂರ್ಸ್ತ್ತೇಳಿರೆ ಅದರ ಬಾಯಿಲಿ ಹೇಳಿ ವರ್ಣಿಸಿಕೆ ಆದ್ಲೆ. ಜೊತೆಲಿ ಸಿಂಹಗಳ ಗುಹೆಗ ಇದ್ದೊ. ಹೆಣ್ಣ್ ಸಿಂಹ ಅವ್ವನ ಜೊತೆ ಎರಡ್ ಸಣ್ಣ್ ಮೊರಿಗ ಹಾಲ್ ಕುಡಿಯಿತಿದ್ದೊ. ಈಗ ನೋಡ್ರೇ ಅವು ಒಂದ್ ಕೊತ್ತಿಮರಿ ಹಂಗೆ ಇದ್ದೋ. ಆದ್ರೆ ಅವು ದೊಡ್ಡದಾದ ಮೇಲೆ ದೊಡ್ಡ ಆನೇನ ಕಚ್ಚಿ ಹೊಡ್ದ್ ಸಾಯಿಸಿ ಬುಟ್ಟವೆ. ಅಷ್ಟ್ ಬಲಶಾಲಿಗ ಈ ಸಿಂಹ

ಭಗವಂತನನ್ನು ಪ್ರೀತಿಸಿದರೆ, ಮನು ಕುಲವನ್ನೇ ಪ್ರೀತಿಸಿದಂತೆ

ಮೊರಿಗ. ಅಲ್ಲಿಂದ ಮುಂದಕ್ಕೆ ಈ ನಾರ್ಥ್ ಇಂಡಿಯಾದ ಜನನ ಈ ಗೈಡ್ ಕರಕಂಡ್ ಹೋತ್. ಒಂದ್ ಎಳೆಂಟ್ ಎಕರೆಗಳಷ್ಟ್ ಅಗಲಕ್ಕೆ ಜಾಗ ಖಾಲಿ ಮಾಡಿ ಅಲ್ಲಿಗೆ ಬೇಲಿ ಹಾಕೊಳೊ. ಅದರೊಳಗೆ ಎಲ್ಲಾ ಜಿರಾಫೆಗ, ಕತ್ತೆತರದ ಕುದುರೆಗ, ಘೇಂಡಾಮೃಗಂಗ, ನೀರಾನೆಗ, ನೀರ್ ಕುದುರೆಗ, ಆಫ್ರಿಕ ಕಡೇಂದ ಬಂದ ಆಡ್‌ನ ತರದ ಅದು ಎಂಥದೋ ಕುರಿಗ, ಎಲ್ಲಾ ಹಿಂಡ್ ಹಿಂಡ್‌ಗ. ಇವೆಲ್ಲಾ ಕಾಡಿನ ಒಳಗೆ ಇದ್ದಿದ್ರೇ ಮನುಷ್ಯನ ಕಣ್ಣ್‌ಗೆ ಒಂದೂ ಬೀಳ್‌ತಿತ್ತ್‌ಲೆ. ಆದ್ರೇ ಇಲ್ಲಿ ಬಟ್ಟ ಬಯಲ್‌ಲಿ ಅವುಕೆ ಇರೀಕೆ ಬೇರೆ ಬೇರೆ ಮಾಡಿಕೊಟ್ಟ ಷೆಡ್‌ಗಳ ಕೆಳಗೆ ನಿಂತಿದ್ದವೆ. ಮನುಷ್ಯರ್ ಅಲ್ಲೆ ಓಡಾಡಿಕಾಕನ ಇವು ಏನಾದರೂ ತಿಂಬಕೆ ಕೊಟ್ಟೆಯ್ಯಾನಾ? ತೇಳಿಕಂಡ್ ಕಣ್‌ಗಳಲೇ ನೋಡಿಕಂಡ್ ಕೇಳುವೆ. ಯಾಕೆತ್ತೇಳಿರೆ ಈ ಜೂ ಗಾರ್ಡನ್‌ನವು ಕೊಡುವ ಅವುಗಳ ಮೇವು ಉಟ್ಟೆಲ್ಲಾ ಅದ್ ಅವರವರ ಮನೆಗಳಿಗೆ ಸಾಕಷ್ಟ್ ಕಳ್ಸಿ ಆದ ಮೇಲೆ ಉಳಿದರೆ ಈ ಪ್ರಾಣಿಗಳಿಗೆ ಮೇವು ಕೊಟ್ಟವೆ. ಇವುಕೆಲ್ಲಾ ಬೇರೆ ಬೇರೆ ತರದ ಮೇವುಗಳ ಹಾಕಕ್ಕು ಎಲ್ಲಾ ಲಾರಿಗಟ್ಟಲೆ ಮೇವು ತಂದು ಸುರಿಯಕ್ಕು. ಇದೆಲ್ಲಾ ನೋಡಿಕಂಡಾಕನ ಈ ಜನಗಳಿಗೆ ಸುಸ್ತ್ ಆತ್ ಕಂಡದೆ. ಉಸ್ಸಾ ಅಪ್ಪಾತ್ತೇಳಿಕಂಡ್ ಬಾಯಿ ಬುಡಿಕೆ ಶುರು ಮಾಡ್ದೋ. ಮತ್ತೆ ಕೆಲವು ಗೂಡೆಗ ರಾಜು ಅಂಕಲ್ ಹಮಾರೆಕೋ ಪೀನೆಕೋ ಪಾನಿ ಮಾಂಗ್‌ತಾ ಹೈ, ಚಾಯ್ ಮಾಂಗ್‌ತಾ ಹೈ ಅಂತ ಕೇಳಿಕೆ ಶುರು ಮಾಡ್ದೋ. ಎಲ್ಲವಕೂ ಈಗ ರಾಜು ಬಯ್ಯಾ ಆಗಿ ಹೋಗಿತ್. ಸರಿ ಎಲ್ಲರನ್ನೂ ಕರ್ಕಂಡ್ ಅಲ್ಲೇ ಇರುವ ಇಂದ್ರಜಿತ್ ಭೇದಿಸಿದ ಚಕ್ರವ್ಯೂಹ ಪಾರ್ಕ್ ಹತ್ತಿರ ಕೂರಿಸಿತ್. ಎಲ್ಲಾ ಮಕ್ಕಳಿಗೆ ಐಸ್‌ಕ್ರೀಂ, ಪಾನಿ, ಚಾ, ಸಿಗರೇಟ್, ಪಾನ್ ಪರಾಗ್ ತ ಕೇಳಿಕಂಡ್ ಎದುರುಗಡೆಯ ಕ್ಯಾಂಟೀನ್‌ನಿಂದ ಸಪ್ಲೆ ಮಾಡ್ಸಿತ್. ಅಷ್ಟೊತ್ತಿಗೆ ಕೆಲವು ತುಂಟ ಮಕ್ಕ ಅಲ್ಲೇ ಪಕ್ಕದಲ್ಲಿದ್ದ ಜಾರು ಬಂಡಿಲಿ ಜಾರಾಡಿಕೆ, ಉಯ್ಯಾಲೆಲ್ ತೂಗಾಡಿಕೆ ಶುರ್ ಮಾಡ್ದೊ. ಅಷ್ಟೊತ್ತಿಗೆ ಇದರ ಕಂಡ ಅವರ ಅಮ್ಮಂದಿರ್ ಏನ್ ಕಡಿಮೆನಾ? ಅವರ ಉರುಟ್ ಉರ್‌ಟ್ ಶರೀರನ ಹೊತ್‌ಕಂಡ್ ಜಾರ್‌ಬಂಡಿ ಮೆಟ್ಲ್‌ನ ಏರಿ ಹತ್ತಿ ಆ ಮಕ್ಕಳೊಟ್ಟಿಗೆ ಇವು ಕೂಡಾ ಜಾರಿಕಂಡ್ ಹೊಣೆಕಾಡಿಕಂಡ್ ಖುಷೀಪಟ್‌ಕಂಡೊ. ಹಿಂಗೆ ಸ್ವಲ್ಪ ಹೊತ್ತ್ ಕಳ್ದ್ ಆದ ಮೇಲೆ ಈ ಗೈಡ್ ಎಲ್ಲವರ್ನ ಕರ್ದ್ ಏಳಿಸಿ ಬನ್ನಿ ಹೊರಗೆ ಪೋಯಿ ಊಟ ಅಲ್ಲೇ ಹೊರಗಡೆ ಮಾಡಿಕಂಡ್ ಚಾಮುಂಡಿ ದೇವಿದ್ ದರ್ಶನಕ್ಕೆ ಪೋಯಿತ್ತೇಳಿ ಎಲ್ಲವರ್ನ ಕರ್ದ್ ಏಳ್ಸಿತ್.

ಬಸ್ ರೇಸ್‌ಕೋರ್ಸ್ ಬಳಸಿಕಂಡ್ ಡೊಂಕ್‌ಡೊಂಕಾಗಿ ಚಾಮುಂಡಿ ಬೆಟ್ಟನ ಏರ್‌ತಿತ್ತ್. ಕೆಲವು ಹೈದಂಗ ಲೇ ಲೇ ಲೈಸಾ ಐಸ್ಸಾತ್ತೇಳಿರೆ ಕೆಲವು ಗೂಡೆಗ ಹಮ್ ಕಿಸೀಸೆ ಕಮ್ ನಹೀ ಕಮ್ ನಹೀತ್ತೇಳಿ ಹಾಡಿಕೆ ಶುರ್ ಮಾಡ್ದೊ. ಬಸ್ ಬೆಟ್ಟ ಹತ್ತಿದೇ ಗೊತ್ತಾತ್‌ಲ್ಲೆ. ಅಷ್ಟೊತ್ತಿಗೆ ಬಸ್ಸಿನ ಮುಂದೆ ಕುದ್ದಿದ್ದ ಒಂದ್ ದಪ್ಪ ಹೆಂಗ್ಸ್ ಹೇ ರಾಮಾ !! ತ್ತೇಳಿ ಕಿರ್‌ಚಿಕಂಡ್ ಬುಡ್ತ್. ಎಲ್ಲವಕೆ ಗಾಭರಿ ಆಗಿ ಹೋತ್. ಬಸ್ಸನವ ಬ್ರೇಕ್ ಹೊಡ್ತ್. ಯಾಕೆ? ಯಾಕೆ?ತಾ ಎಲ್ಲಾ ಕೇಳ್ದೋ. ಅಷ್ಟೊತ್ತಿಗೆ ಗೈಡ್ ಬಂದ್ ಹೇಳ್ತ್. ಹಾಂ. ಕ್ಯಾಬಿ ನಹೀ ಯೇ ಅಮ್ಮ ಓ ಮಹಿಷಾಸುರಕೊ ದೇಖ್‌ಕೆ ಐಸಾ ಡರ್‌ಗಯಾ ಹೈ ಉದರ್ ದೇಖೋ ಅಂತ ಭಯಂಕರ ರೂಪಲಿ ನಿಂತಿದ್ದ ಮಹಿಷಾಸುರನ ವಿಗ್ರನ ತೋರ್ಸಿತ್. ಅವೆಲ್ಲಾ ಭಯಂಕರ ಮಹಿಷಾಸುರನ ನೋಡಿ ಹೆದ್ರಿಕಂಡ್ರೂ ಇದ್ ಪ್ರತಿಮೆ ತಾನೇ? ತೇಳಿಕಂಡ ನೆಗಾಡಿಕೆ ಶುರು ಮಾಡ್ದೋ. ಬಸ್ ಅಲ್ಲೇ ಪಕ್ಕದಲ್ಲಿ ಪಾರ್ಕ್ ಆತ್. ಎಲ್ಲಾ ಕೆಳಗೆ ಇಳ್ದ್ ಓಡಿ ಹೋಗಿ ಆ ಪ್ರತಿಮೆ ಸುತ್ತಾ ನಿಂತ್‌ಕಂಡೊ. ಹಳೇ ಕಾಲಲಿ ಕಥೆ ಪುಸ್ತಕಲಿ ಈ ಮಹಿಷಾಸುರನ ಬಗ್ಗೆ ತಿಳಿದಿದ್ದವು ಇಂದ್ ಪ್ರತ್ಯಕ್ಷ ಈ ಮೂರ್ತಿನ ಕಣ್ಣಿಂದ ನೋಡಿ ಖುಷಿಪಟ್‌ಕಂಡೊ. ಕೆಲವು ಹೊಸ ಜೋಡಿಗ ಅದರ ಪಾದದ ಬುಡಕ್ಕೆ ಹೋಗಿ ನಿಂತ್‌ಕಂಡ್ ಪೋಟೋ ಹೊಡಿಸಿಕಂಡೊ. ಮೈಸೂರಿಗೆಈ ಹೆಸರ್ ಹೆಂಗೆ ಬಾತ್‌ತೇಳುವ ಕಥೆನ ಈ ಸಂದರ್ಭಲಿ ಈ ಗೈಡ್ ಆ ಜನಕ್ಕೆ ಸೂಕ್ಷ್ಮ ಆಗಿ ಹಿಂದಿ ಭಾಷೆಲಿ ಹೇಳಿ ವಿವರಿಸಿತ್. ಅಚ್ಚಾ ಆಯಿಯೇ ಹಮ್ ಶ್ರೀ ಚಾಮುಂಡೇಶ್ವರಿ ದೇವಿಕಾ ದರ್ಶನ್ ಪಹಲೆ ಕರೇಂಗೆ ತಾ ಹೇಳಿ ಅವರ್‌ಗೆಲ್ಲಾ ದೇವಸ್ಥಾನಕ್ಕೆ ಹೊರಡಿಸಿ ಕಂಡ್ ಹೋತ್. ದಾರಿಲಿ ಪೂಜೆ ಸಾಮಾನ್‌ಗಳ ಮಾರುವ ಹೆಂಗಸ್‌ರ ಕೂಗಾಟ, ಬನ್ನಿ ಸ್ವಾಮಿ, ಇಲ್ಲಿ ಬನ್ನಿ ಇದರ್ ಆವೋ ಉದರ್ ನಹೀ. ಹೆಣ್ಣ್ ಜನ ಎಲ್ಲಾ ಒಂದೊಂದು ಪೂಜೆ ತಟ್ಟೆಗಳ ತಕಂಬಕೆ ಹೊರೊಟೊ. ಎಲ್ಲವೂ ಸಾಲಾಗಿಹೋಗಿ ಆ ಭವ್ಯ ಶ್ರೀ ಚಾಮುಂಡಮ್ಮನ ದರ್ಶನನ ಭಯ ಭಕ್ತಿಲಿ ಮಾಡ್ದೊ. ಅದಾದ ಮೇಲೆ ಹೊರಗಡೆಗೆ ಬಂದ್ ಹೊರಗೆ ಇದ್ದ ಎಲ್ಲಾ ನವಗ್ರಹ ದೇವರುಗಳಿಗೂ ನಮಸ್ಕರಿಸಿಕಂಡ ಎಲ್ಲವೂ ಹೊರಗೆ ಬಂದ್ ಆತ್. ಆ ಭವ್ಯವಾದ ದೇವಸ್ಥಾನದ ಗೋಪುರ, ದೇವಸ್ಥಾನನ ಎಲ್ಲಾ ಕಣ್ಣ್ ತುಂಬಾ ನೋಡಿ ಜನಿಕೆ ಒಳ್ಳೆ ಖುಷಿ ಆತ್.

ಈಗ ಬಸ್ ನಿಧಾನ ಆಗಿ ಆ ಬೆಟ್ಟಂದ ಕೆಳಗೆ ಇಳಿದು ಬರುತಾ ಉಟ್ಟು. ಸ್ವಲ್ಪ ದೂರಲೇ ಒಂದು ಕವಲೊಡೆದ ರಸ್ತೆದಾಟಿದಂಗೆ ಬಸ್ ಗಕ್ಕನೆ ನಿಂತ್ ಬುಡ್ತ್. ಆಗ ರಾಜು ಬಯ್ಯಾ, ಆ ಜನರನೆಲ್ಲಾ ಕರಕಂಡ್ ನಂದೀಶ್ವರನ ದರ್ಶನಕ್ಕೆ ಮೇಲೆ ಹತ್ತಿತ್. ಆಹೈದಂಗ ಗೂಡೆಗ ಈ ಭಾರೀ ಗಾತ್ರದ ಕಲ್ಲ್ ನಂದಿನ ನೋಡಿ ಅಯ್ಯೋ ಬಾಪುರೆ ! ಕಿತ್‌ನಾ ಬಡಾ ಹೈ ಯೇ ನಂದೀಶ್ವರ್ ತೇಳಿಕಂಡ್ ಆಶ್ಚರ್ಯ ಪಟ್‌ಕಂಡ್ ಅದರ ಪಾದಕ್ಕೆ ಬೊಗ್ಗಿ ನಮಸ್ಕಾರ ಮಾಡಿದೊ. ಅಷ್ಟೊತ್ತಿಗೆ ಕೆಲವು ಸಣ್ಣಮಕ್ಕ ಆ ನಂದೀಶ್ವರನ ಬೆನ್ ಮೇಲೆ ಹತ್ತಿ ಖುಷಿ ಪಡಿಕೆ ನೋಡ್ದೊ. ಅದರ ಎದುರುಗೆ ಕೆಲವು ಜನ ನಿಂತ್‌ಕಂಡ್ ಪೋಟೋನ ತಕಂಡದ್ ಆತ್. ಆ ಮಕ್ಕಳಿಗೆ ಆ ಗೈಡ್ ಬೈದ್ ನೀಚೆ ಉತಾರೋ ಯೇ ನಂದೀಶ್ವರ್ ಭಗವಾನ್ ಹೈ, ಐಸೆ ಮತ್ ಕರೋ ತಾ ಕೆಳಗೆ ಇಳ್ಸಿತ್.

ಹಂಗೆ ಬಸ್ ಹತ್ತಿಕಂಡ್ ನೆಟ್ಟಂಗೆ ಬಂದ್ ಜಗನ್ಮೋಹನ ಅರಮನೆಯ ಆರ್ಟ್ ಗ್ಯಾಲರಿಗೆ ಟಿಕೇಟ್ ತಕಂಡ್ ಒಳಗೆ ಹೋದೊ. ಇಲ್ಲಿ ಎಲ್ಲಾ ಹಳೇ ಕಾಲದ ಕಲಾಕೃತಿಗ ತುಂಬಿದ್ದೊ. ಈಗಿನ ರಾಜನ ಕಾಲದ ವಸ್ತುಗಳಿಂದ ಹಿಡ್ದ್, ತಾತ, ಮುತ್ತಾತ,

**12ನೇ ಪುಟಕ್ಕೆ**

# ಹಂದಿ ಸಾಕಾಣೆ ಲಾಭದಾಯಕ ಮತ್ತು ವೈಜ್ಞಾನಿಕ ಮಾಹಿತಿಗಳು


ಡಾ. ಹೆಚ್. ಡಿ. ರಮೇಶ್‌ರಾಜು,
ಪಶುವೈದ್ಯಾಧಿಕಾರಿ, ಬೆಳ್ಳೂರು, ನಾಗಮಂಗಲ

ದೇಶದಲ್ಲಿ ದಿನೇ ದಿನೇ ಹೆಚ್ಚುತ್ತಿರುವ ಜನಸಂಖ್ಯೆಯಿಂದಾಗಿ ಜನ ಸಾಮಾನ್ಯರಿಗೆ ಆಹಾರ ಪೂರೈಕೆ ಶ್ರಮದಾಯಕವಾಗಿದ್ದು ಜೊತೆಗೆ ಪೌಷ್ಟಿಕ ಆಹಾರದ ಕೊರತೆ ಇದೆ. ಮನುಷ್ಯ ಜೀವಿಗೆ ಪೌಷ್ಟಿಕಾಂಶಗಳಲ್ಲಿ ಸಸಾರಜನಕ (ಪ್ರೋಟೀನ್) ಬಹು ಮುಖ್ಯವಾಗಿ ಅವಶ್ಯಕವಾದುದು. ಆದ್ದರಿಂದ ಪ್ರಾಣಿಜನ್ಯ ಆಹಾರದ ಉತ್ಪತ್ತಿಯಲ್ಲಿ ಆದಾಯಕರ ಉದ್ದಿಮೆಗಳಾದ ಹೈನುಗಾರಿಕೆ, ಕೋಳಿ ಸಾಕಾಣೆ, ಕುರಿ ಸಾಕಾಣೆ, ಮೊಲ ಸಾಕಣೆ, ಮುಂತಾದವುಗಳಂತೆಯೇ ಹಂದಿ ಸಾಕಾಣೆ ಕೂಡ ಪ್ರಧಾನವಾದುದು. ಹಾಲು, ಮೊಟ್ಟೆ ಮಾಂಸ ಇವುಗಳಿಂದ ಪ್ರಾಣಿಜನ್ಯ ಸಸಾರಜನಕ ಪೂರೈಸಲು ಸಾಧ್ಯ.

ಕರ್ನಾಟಕ ರಾಜ್ಯದಲ್ಲಿ ಅಂದಾಜು 5.50 ಲಕ್ಷ ಹಂದಿಗಳಿದ್ದು ಶೇಕಡ 20 ರಷ್ಟು ಮಾತ್ರ ಮೇಲ್ದರ್ಜೆಯ ವಿದೇಶಿ ತಳಿಗಳಿವೆ, ಉಳಿದವುಗಳು ಸ್ಥಳೀಯ ಹಂದಿಗಳಾಗಿವೆ. ಸ್ಥಳೀಯ ಹಂದಿಗಳು ಗಾತ್ರದಲ್ಲಿ ಸಣ್ಣದಾಗಿದ್ದು, ಶೇಕಡವಾರು ಉತ್ತಮ ಗುಣಮಟ್ಟದ ಮಾಂಸ ಕೊಡುವುದಿಲ್ಲ ಮತ್ತು ಪೌಷ್ಟಿಕಾಂಶದ ಕೊರತೆಯಿಂದ ಹೆಚ್ಚಿನ ಸಂಖ್ಯೆಯಲ್ಲಿ ಮರಿ ಹಾಕುವುದಿಲ್ಲ. ಇಂತಹ ಕಾರಣಗಳಿಂದ ಹಂದಿ ಸಾಕಾಣಿಯನ್ನು ಆದಾಯವನ್ನಾಗಿ ಮಾಡಲು ಸುಧಾರಿತ ವಿದೇಶಿ ತಳಿಯ ಹಂದಿಯನ್ನು ವೈಜ್ಞಾನಿಕ ರೀತಿಯಲ್ಲಿ ಅಂದರೆ ಸ್ವಚ್ಛ ವಾತಾವರಣದ ಮನೆ, ಪೌಷ್ಟಿಕ ಆಹಾರ ಸರಬರಾಜು ಮಾಡುವುದು, ಮತ್ತು ಕಾಯಿಲೆಗಳು ಬರದ ಹಾಗೆ ತಾಂತ್ರಿಕತೆ ಅಳವಡಿಸಿಕೊಂಡು ಸಾಕಬೇಕಾಗುತ್ತದೆ.

**ಹಂದಿಗಳಲ್ಲಿ ಆರ್ಥಿಕ ಗುಣಗಳು :** ಹಂದಿಗಳಲ್ಲಿ ಶೀಘ್ರ ಬೆಳವಣಿಗೆ, ಬೇಗ ಪ್ರಾಯಕ್ಕೆ ಬರುವುದು, ಹೆಚ್ಚಿನ ಸಂಖ್ಯೆಯಲ್ಲಿ ಅಂದರೆ 8 ರಿಂದ 14 ಮರಿಗಳನ್ನು ವರ್ಷಕ್ಕೆ 2 ಬಾರಿ ಮರಿ ಹಾಕುವುದು, ತಿಂದ ಆಹಾರವನ್ನು ಉತ್ತಮ ರೀತಿಯಲ್ಲಿ ಮಾಂಸವನ್ನಾಗಿ ಪರಿವರ್ತಿಸಿ ಕೊಳ್ಳುವ ಸಾಮರ್ಥ್ಯ, ಅಧಿಕ ಮಾಂಸದ ಇಳುವರಿ ದೇಹದ ಹೆಚ್ಚಿನ ಭಾಗ ತಿನ್ನಲು ಯೋಗ್ಯ ಮತ್ತು ಕೊಬ್ಬಿನಾಂಶ ಇರುವುದರಿಂದ ಶಕ್ತಿದಾಯಕ ಮುಂತಾದ ಲಕ್ಷಣಗಳಿಂದಾಗಿ ಬೇರೆ ಪ್ರಾಣಿಗಳಲ್ಲಿ ಇಲ್ಲದ ವಿಶೇಷ ಆರ್ಥಿಕ ಗುಣಗಳನ್ನು ಹೊಂದಿರುತ್ತದೆ.

**ಹಂದಿಗಳ ವಸತಿ :** ಶ್ರೀಮಂತ ಮನೆ ಬೇಕಿಲ್ಲದಿದ್ದರೂ ಬಿಸಿಲು ಮಳೆಯಿಂದ ರಕ್ಷಿಸುವಂತಹ ಕಡಿಮೆ ಖರ್ಚಿನ ಮನೆ ಬೇಕಾಗುತ್ತದೆ. ಗಾಳಿ ಬೆಳಕು ಸಾಕಷ್ಟು ಇದ್ದು ಮನೆಯನ್ನು ತೊಳೆದು ನೀರು ಸರಾಗವಾಗಿ ಹರಿದು ಹೋಗುವಂತಿರಬೇಕು. ಇದರಿಂದಾಗಿ ಸ್ವಲ್ಪ ಎತ್ತರದ ಸ್ಥಳದಲ್ಲಿ ಮನೆ ಮಾಡುವುದು ಉತ್ತಮ. ಆಹಾರ ತಿನ್ನಲು ಮತ್ತು ನೀರಿಗೆ ಪ್ರತ್ಯೇಕವಾದ ವ್ಯವಸ್ಥೆ ಒಳ್ಳೆಯದು. ಸೆಖೆ ತಡೆಯಲು ಸಾಧ್ಯವಾಗದ ಪ್ರಾಣಿಯಾದ್ದರಿಂದ ಹೊರಳಾಡಲು ಅಗತ್ಯ ನೀರಿನ ತೊಟ್ಟಿಗಳನ್ನು ನಿರ್ಮಿಸಬೇಕಾಗುತ್ತದೆ. ಗಂಡು ಹಂದಿ, ಹೆಣ್ಣು ಹಂದಿ, ಗರ್ಭದ ಹಂದಿಗಳು, ಮರಿ ಹಾಕಿದ



ಚಿತ್ರ : ದುಗ್ಗಳ ಸದಾನಂದ ಗೌಡ, ನಾಪೋಕ್ಲು

ಹಂದಿಗಳು ಮತ್ತು ಬೆಳೆಯುವ ಹಂದಿಗಳು ಇವುಗಳಿಗೆ ವಿಭಾಗ ಮಾಡಬೇಕಾಗುತ್ತದೆ.

**ಸಂತಾನ ಅಭಿವೃದ್ಧಿ :** ಸಾಮಾನ್ಯವಾಗಿ ಚೆನ್ನಾಗಿ ಬೆಳೆದ ಹೆಣ್ಣು ಹಂದಿ 6ತಿಂಗಳಲ್ಲಿ ಮೊದಲ ಬೆದೆಗೂ, ನಂತರ 20 ರಿಂದ 21 ದಿನಗಳಲ್ಲಿ ಬಂದರೂ ಸಹ 8 ತಿಂಗಳಾದ ಮೇಲೆ ಅಥವಾ 80 ಕೆ.ಜಿ. ತೂಕವಿದ್ದಾಗ ಮಾತ್ರ ಗಂಡು ಹಂದಿಯೊಡನೆ ಸೇರಿಸುವುದು ಯೋಗ್ಯ. ಬೆದೆ ಸುಮಾರು 2-3 ದಿನವಿರುತ್ತದೆ. ಬೆದೆಯ ಕೊನೆಯ 2ದಿನ ಕೂಡಿಸಿದರೆ ಗರ್ಭ ನಿಲ್ಲುತ್ತದೆ. ಗಂಡು ಹಂದಿಯು 1 ವರ್ಷದ ಪ್ರಾಯದಲ್ಲಿ ಹೆಣ್ಣಿನೊಡನೆ ಕೂಡಲು ಯೋಗ್ಯವಾಗಿರುತ್ತದೆ. ಹಂದಿಗಳಲ್ಲಿ ಗರ್ಭಾವಧಿ ಸರಾಸರಿ 114 ದಿನಗಳು, ವರ್ಷಕ್ಕೆ ಎರಡು ಬಾರಿ 8-14 ಮರಿಗಳನ್ನು ಹಾಕುತ್ತದೆ. ಮರಿಗಳು ಸಾಮಾನ್ಯವಾಗಿ 8 ವಾರಗಳ ಕಾಲ ತಾಯಿಯ ಹಾಲು ಕುಡಿಯುತ್ತದೆ. ಹಾಲು ಬಿಡಿಸಿದ 7 ದಿನಗಳ ಒಳಗಾಗಿ ತಾಯಿ ಹಂದಿ ಮತ್ತೆ ಬೆದೆಗೆ ಬರುತ್ತದೆ.

**ಗಬ್ಬ (ತೆನೆ) ಹಂದಿಯ ಪೋಷಣೆ :** ಮರಿಹಾಕುವ 10 ದಿನಗಳ ಮುಂಚೆ ಹಂದಿಯನ್ನು ಬೇರ್ಪಡಿಸಿ ಹೆಚ್ಚಿನ ಸ್ಥಳಾವಕಾಶ ಮಾಡಿಕೊಡಬೇಕು ಮತ್ತು ಹುಲ್ಲಿನ ಹಾಸಿಗೆ ಒದಗಿಸಿಕೊಡಬೇಕು. ಚೆನ್ನಾಗಿ ಪಚನವಾಗುವ ಪೌಷ್ಟಿಕ ಆಹಾರದ ಜೊತೆಗೆ ಸ್ವಚ್ಛವಾದ ನೀರು ಕೊಡಬೇಕಾಗುತ್ತದೆ. ಮರಿ ಹಾಕುವ 5 ದಿನಗಳ ಮುಂಚೆ ಕೆಚ್ಚಲನ್ನು ತೊಳೆಯುವುದು ಮತ್ತು ಸ್ವಲ್ಪ ಹೊತ್ತಿನವರೆಗೆ ಮೇಯಲು ಹೊರಗೆ ಬಿಡುವುದರಿಂದ ಸತ್ವಪೂರ್ಣ ಆಹಾರದ ಜೊತೆಗೆ ವ್ಯಾಯಾಮವು ದೊರೆತಂತಾಗುತ್ತದೆ.

**ಮರಿ ಹಾಕುವ ಸಮಯ ಮತ್ತು ಮರಿಗಳ ಪಾಲನೆ:** ಹಂದಿ ಮರಿ ಹಾಕುವ ಸಮಯ ಹತ್ತಿರವಾದಂತೆಯೇ ಹುಲ್ಲಿನ ಹಾಸಿಗೆಯನ್ನು ತಾನೇ ತಯಾರು ಮಾಡಿಕೊಳ್ಳುತ್ತದೆ. ಇದರಿಂದಾಗಿ 24 ಗಂಟೆಯೊಳಗೆ ಮರಿ ಹಾಕುತ್ತದೆ ಎಂಬುದಾಗಿ ಭಾವಿಸ ತಕ್ಕದ್ದು. ಮರಿ ಹಾಕುವ 12 ಗಂಟೆಯ ಮೊದಲು ಹಂದಿಗೆ

ಆಹಾರ ಕೊಡುವುದನ್ನು ನಿಲ್ಲಿಸಬೇಕು. ಕೆಲವೊಮ್ಮೆ ಹಂದಿಗಳಲ್ಲಿ ಹೆರಿಗೆ ತೊಂದರೆಯಾದರೆ ಪಶು ವೈದ್ಯರ ಸಹಾಯ ಪಡೆಯುವುದು ಒಳ್ಳೆಯದು.

ಹುಟ್ಟಿದ ಹಂದಿ ಮರಿಗಳು ಸಾಯದಂತೆ ನೋಡಿ ಕೊಳ್ಳುವುದು ಲಾಭದಾಯಕದ ವಿಷಯದಲ್ಲಿ ಬಹು ಮುಖ್ಯ. ಹಂದಿ ಮರಿಗಳ ಪಾಲನೆಯಲ್ಲಿ ಎಚ್ಚರಿಕೆ ವಹಿಸದೆ ಇದ್ದಲ್ಲಿ ಸುಮಾರು ಅರ್ಧದಷ್ಟು ಹಂದಿ ಮರಿಗಳು ಹುಟ್ಟಿದ ಮೊದಲ ಮೂರು ದಿನಗಳಲ್ಲಿ ಸಾಯುವುದು ಖಂಡಿತ. ಆದ್ದರಿಂದ ಜನನವಾದ ಪ್ರತೀ ಹಂದಿ ಮರಿಯ ಮುಸುಡಿಯನ್ನು ಒಣ ಬಟ್ಟೆಯಿಂದ ಒರೆಸಿ ಹುಲ್ಲಿನ ಹಾಸಿಗೆಯಲ್ಲಿ ಮಲಗಿಸಬೇಕು. ಹಂದಿಯು ಮರಿ ಹಾಕಿದ ಮೇಲೆ ಹೊಲಸಾದ ಅದರ ಹಾಸಿಗೆಯನ್ನು ತೆಗೆದು ಮತ್ತೆ ಹೊಸದಾಗಿ ಸ್ವಚ್ಛವಾದ ಒಣ ಹುಲ್ಲಿನ ಹಾಸಿಗೆಯನ್ನು ಮಾಡಬೇಕು. ಕಸ (ಕಂದು, ಸತ್ತೆ) ವನ್ನು ಶೇಖರಿಸಿ ಜೋಪಾನವಾಗಿ ಹೂಳಬೇಕು. ಮತ್ತು ತಾಯಿ ಹಂದಿಯು ಮರಿಗಳ ಮೇಲೆ ಹೊರಳದಂತೆ ಕಬ್ಬಿಣದ ಕಂಬಿಯನ್ನಾಗಲೀ ಇಲ್ಲವೇ ಮರದ ತೊಲೆಯನ್ನಾಗಲೀ ಅಡ್ಡವಾಗಿ ಇರಿಸಬೇಕು. ಮರಿಗಳು ಹಾಲು ಕುಡಿಯುವುದರಿಂದ ಕೆಚ್ಚಲಿಗೆ ಗಾಯವಾಗುವುದನ್ನು ತಡೆಗಟ್ಟಲು ಚೂಪಾದ 8 ಹಲ್ಲುಗಳನ್ನು ಕತ್ತರಿಸಿ ಮೊಂಡು ಗೊಳಿಸಬೇಕು. ಮರಿಗಳಲ್ಲಿ ಕಂಡು ಬರುವ ರಕ್ತ ಹೀನತೆ, ಜಂತು ಹುಳುಗಳಿಂದ ರಕ್ಷಣೆ ಲಸಿಕೆ ಕಾರ್ಯಕ್ರಮ, ಮರಿಗಳ ಬೀಜ ತೆಗೆಯುವುದು ಮತ್ತು ಹಂದಿಗಳ ಸಾಮಾನ್ಯ ರೋಗಗಳು ಮುಂತಾದ ತಾಂತ್ರಿಕ ಸಲಹೆಗಳನ್ನು ಪಶುವೈದ್ಯರಿಂದಲೇ ಪಡೆಯ ಬೇಕಾಗುತ್ತದೆ.

**ಹಂದಿಗಳಲ್ಲಿ ಆಹಾರ :** ಹಂದಿ ಸಾಕಾಣಿಕೆಯಲ್ಲಿ ವೆಚ್ಚದ ಶೇಕಡ 80ರಷ್ಟು ಭಾಗ ಆಹಾರ ತಿಂಡಿಗೆ ಆಗುವುದರಿಂದ ಲಾಭದಾಯಕ ಉದ್ಯಮವನ್ನಾಗಿಸಲು ಆಹಾರ ಪಡಿತರವು ಸಾಧ್ಯವಾದಷ್ಟು ಅಗ್ಗವಾಗಿ ದೊರೆಯುವಂತಾಗಿದ್ದು, ದೇಹದ ಬೆಳವಣಿಗೆ ಮತ್ತು ಆರೋಗ್ಯ ಚೆನ್ನಾಗಿರುವಂತಹ ಆಹಾರ ಅತ್ಯಗತ್ಯ. ಮೇವಿನ ಅಭಾವ ಕಾಲದಲ್ಲಿ ಬೇರು, ಗೆಡ್ಡೆ, ಗೆಣಸು, ಕೊಡಬಹುದು. ಜನ, ದನ ತಿನ್ನಲು ಆಗದೇ ಇರುವ ನುಚ್ಚು, ಹೊಟ್ಟು, ಹಾಕುವುದು ಕೂಡ ಸೂಕ್ತ. ಪುಷ್ಠಿಕರವಾದ ಬೆಳವಣಿಗೆಗೆ ಪೌಷ್ಠಿಕ ಆಹಾರವನ್ನು ಕೊಡಬೇಕಾಗುತ್ತದೆ. ಹಂದಿಗಳಿಗೆ ಮಿತಿ ಮೀರಿ ತಿನ್ನಿಸುವುದರಿಂದ ಆಹಾರ ಪೋಲಾಗುವುದರ ಜೊತೆಗೆ ಉದರ ರೋಗಗಳು ಬರುತ್ತವೆ. ಖನಿಜಾಂಶಗಳ ಕೊರತೆ ತಪ್ಪಿಸಲು ಖನಿಜ ಮಿಶ್ರಣವನ್ನು ಸೇರಿಸಬೇಕು. ಹಂದಿಗಳ ಆಹಾರ ಪಡಿತರದಲ್ಲಿ ಸಾಮಾನ್ಯವಾಗಿ ಉಪಯೋಗಿಸಲ್ಪಡುವ ವಸ್ತುಗಳೆಂದರೆ ಮುಸುಕಿನ ಜೋಳ, ಅಕ್ಕಿಯ ಪಾಲಿಷ್, ಗೋಧಿ ಬೂಸಾ, ಕಾಕಂಬಿ, ಕಡಲೆ ಕಾಯಿ ಹಿಂಡಿ, ಮೀನು ಪುಡಿ ಇವುಗಳಾಗಿರುತ್ತವೆ.

ಹಂದಿ ಸಾಕಾಣೆಯನ್ನು ಉಪ ಕಸುಬನ್ನಾಗಿ 3 ಹೆಣ್ಣು ಮತ್ತು 1 ಗಂಡು ಹಂದಿಯೊಂದಿಗೆ ಸಣ್ಣ ಪ್ರಮಾಣದಲ್ಲಿ ತೆಗೆದುಕೊಂಡಲ್ಲಿ ಎಲ್ಲಾ ಮೂಲಗಳಿಂದ ಒಂದು ತಿಂಗಳಿಗೆ ಸರಾಸರಿ 2000-00 ರೂ. ಗಳಷ್ಟು ಆದಾಯ ಬರುತ್ತದೆ. ಮುಖ್ಯ ಕಸುಬನ್ನಾಗಿ 10 ಹೆಣ್ಣು 1 ಗಂಡುಗಳ ಜೊತೆ ರೂಪಿಸಿಕೊಂಡರೆ ವರ್ಷಕ್ಕೆ ರೂ. 50,000-00 ಗಳಷ್ಟು ಆದಾಯ ಬರುತ್ತದೆ.

ಕೊಡಗಿನಲ್ಲಿ ಹೇಳಿ ಮಾಡಿಸಿದಂತಹ ಪರಿಸರದ ಅನುಕೂಲವಿರುವುದರಿಂದ ಇದನ್ನು ಲಾಭದ ದಂಧೆಯನ್ನಾಗಿ ಪರಿವರ್ತಿಸಬಹುದು.

---

**10ನೇ ಪುಟದಿಂದ**

ಹಳೇ ತಲೆಮಾರಿನ ರಾಜಂಗಳ ಕಾಲದಿಂದಲೂ ಬಳುವಳಿ ಆಗಿ ಬಂದಂತ ಕಲಾಕೃತಿಗಳ ವರ್ಣಿಸಿಕೆ ಇಲ್ಲಿ ಜಾಗ ಸಾಲ್ಟ್. ಮತ್ತೆ ರವಿವರ್ಮನ ಪೇಯಿಟಿಂಗ್ ಅಂತೂ ಎಲ್ಲಾ ಗೋಡೆಗಳ ಮೇಲೂ ಇತ್. ಒಂದೊಂದು ಆಗಿನ ಕಾಲದ ಈ ಚಿತ್ರಗಳಿಗೆ ಈಗ ಲಕ್ಷಾಂತರ ರೂಪಾಯಿಗಳ ಬೆಲೆ ಉಟ್ಟೊ. ಇದನ್ನೆಲ್ಲಾ ನೋಡುವಷ್ಟು ಹೊತ್ತಿಗೆ ಗಂಟೆ ಆರರ ಹತ್ರ ಆಗಿ ಹೋತ್. ಇನ್ ಬೃಂದಾವನ ಗಾರ್ಡನ್ ನೋಡದಿದ್ದರೆ ಆಕಿಲ್ಲೆತ್ತೇಳಿಕಂಡ್ ಈಗೈಡ್ ಆತುರ ಆತುರಲಿ ಅಲ್ಲಿಂದ ಹೊರಗೆ ಹೊರಡಿಸಿಕಂಡ್ ಬಂದ್ ಬಸ್ಸ್ ಹತ್ತಿದೊ. ಡೆಲ್ಲಿಯ ಈ ಲಕ್ಸುರಿ ಬಸ್ ಅಲ್ಲಿಂದ ಬುರ್ರತ್ತೇಳಿಕಂಡ್ ಮಹರಾಣೀಸ್ ಕಾಲೇಜ್‌ನ ಮುಂದುಗಡೆಗಾಗಿ ಅಂಡರ್ ಬ್ರಿಡ್ಜ್ ಕೆಳಗೆಂದ ದಾಟಿ ಕೆ.ಆರ್.ಎಸ್. ರಸ್ತೆಲಿ ಓಡ್‌ತಿತ್, ಅಷ್ಟೊತ್ತಿಗೆ ನೋಡಿ ಶುರ್ ಆತ್ ಈ ಮಕ್ಕಳ ಹಾಡ್, ಕುಣಿತ, ತಾಳ, ಮದ್ದಳೆ, ಹಾಡಿಕಂಡ್ ಹಾಡಿಕಂಡ್ ಎದ್ದೆದ್ದ್ ಕುಣಿಯಕೆ ಶುರು ಮಾಡ್ಡೊ. ಬಸ್ ಒಳಗೆ ಎಲ್ಲವಕೂ ಬಹಳ ಕುಷಿ ಆಗಿತ್. ಈ ಮಿ. ರಾಜು ಗೈಡ್‌ನ ಸೂಕ್ತ ಆದ ಗೈಡ್‌ನಿಂದಾಗಿ ಇಂದ್ ಒಂದೇ ದಿನಕ್ಕೆ ಇಷ್ಟೆಲ್ಲಾ ನೋಡಿಕೆ ಸಾಧ್ಯ ಆತ್ ತ್ತೇಳಿ. ಮಿ. ಮೆಹತ ಅವರ ಜನರೊಟ್ಟಿಗೆ ಹೇಳುತಿದ್ದೊ.

ಇಂದ್ ಮೈಸೂರು ಎಲ್ಲಾ ನೋಡಿ ಆದರೆ ನಾಳೆ ಬೆಳಿಗ್ಗೆ ಎದ್ದ್ ನಾವೆಲ್ಲಾ ಮಂಗಳೂರು ಕಡೆಗೆ ಹೊರಡಕ್ಕ್ ತಾ ಹೇಳಿ ಕಂಡ್ ಇರ್‌ಕಾಕನ ಕೆ.ಆರ್.ಎಸ್. ಡ್ಯಾಂನ ಮೇಯಿನ್ ಗೇಟ್ ಹತ್ರ ಇವರ ಟೂರಿಸ್ಟ್ ಬಸ್ ಬಂದ್ ನಿಂತತ್.

(ಮುಂದ್‌ವರ್ದದೆ)

---

## ನಗೆಹನಿ

ಸೀತು : ಭಟ್ರೇ ಗಂಡ್ ಮಕ್ಕ ಹೆಂಗೆ ಆದೆ?

ಭಟ್ಟ : ಅಮವಾಸ್ಸೆಲಿ, ಶಂಖ- ಜಾಗಟೆಗ ಜೋರಾಗಿ, ತಮಟೆ ಬಾರ್‌ಸಕನ ಗಂಡ್ ಮಕ್ಕ ಆದೆ.

ಯಾಲದಾಳು. ಚಂದ್ರಕಲಾ, ಮಡಿಕೇರಿ.

---

ಪ್ರೀತಿ : ಬೇಡ ಬೇಡ ವೆಂದರು ಕಾಡುವ
ನನ್ನಲ್ಲಿರುವ ನಿನ್ನ ಮೇಲಿನ ಪ್ರೀತಿಯ
ಅಂಬಿನಿಂದ ತಪ್ಪಿಸಿ ಕೊಂಡ ಜಿಂಕೆಯನ್ನು
ಬೆನ್ನಟ್ಟಿ ಬರುವ ಬೇಡನಂತೆ

ತಳೂರು ಸುಧಿ, ಮಡಿಕೇರಿ

# ವ್ಯಕ್ತಿ ಪರಿಚಯ : ಕೇದಗಡಿ ಗುಡ್ಡಪ್ಪ ಗೌಡ

ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡಮಿಯು 1999ನೇ ಸಾಲಿನ ಪ್ರಶಸ್ತಿ ಪ್ರಧಾನ ಸಮಾರಂಭವನ್ನು ದಿನಾಂಕ 22-6-2000ದಂದು ಬೆಂಗಳೂರಿನ ಪುರಭವನದಲ್ಲಿ ಏರ್ಪಡಿಸಿತ್ತು. ಈ ಬಾರಿಯ ಹೊರನಾಡು ಕನ್ನಡಿಗ ಪ್ರಶಸ್ತಿಯನ್ನು ಕಾಸರಗೋಡಿನ ಯಕ್ಷಗಾನ ಕಲಾವಿದರಾದ ಶ್ರೀ ಕೇದಗಡಿ ಗುಡ್ಡಪ್ಪ ಗೌಡರು. ಅವರಿಗೆ ಹಿರಿಯ ಹಿಂದೂಸ್ಥಾನಿ ಗಾಯಕಿ ಶ್ರೀಮತಿ ಗಂಗೂಬಾಯಿ ಹಾನಗಲ್ ಅವರು ಕರ್ನಾಟಕ ಸರ್ಕಾರದ ಮಂತ್ರಿಗಳಾದ ಶ್ರೀ ಕಾಗೋಡು ತಿಮ್ಮಪ್ಪ ಹಾಗೂ ಶ್ರೀಮತಿ ರಾಣಿ ಸತೀಶ್ ಇವರುಗಳ ಸಮ್ಮುಖದಲ್ಲಿ ನೀಡಿ ಗೌರವಿಸಿದರು. ಈ ಸಮಾರಂಭದಲ್ಲಿ ಜಾನಪದ ಅಕಾಡಮಿಯ ಅಧ್ಯಕ್ಷರಾದ ಪ್ರೊ. ಕಾಳೇಗೌಡ ನಾಗವಾರ ಅವರು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿಗಳಾದ ಶ್ರೀ ಅ. ರಾ. ಚಂದ್ರಹಾಸಗುಪ್ತ ಹಾಗೂ ಇಲಾಖೆಯ ನಿರ್ದೇಶಕರಾದ ಶ್ರೀ ಕೆ. ಸಿ. ರಾಮಮೂರ್ತಿ ಅವರು ಉಪಸ್ಥಿತರಿದ್ದರು.

ಕರಾವಳಿ ತೀರಕ್ಕೆ ಅಂಟಿಕೊಂಡಿರುವ ಕಾಸರಗೋಡು ಪ್ರಾಂತ್ಯದಲ್ಲಿ ತೆಂಕುತಿಟ್ಟು ಯಕ್ಷಗಾನ ಪರಂಪರೆಯನ್ನು, ಅದರ ಎಲ್ಲ ವೈವಿಧ್ಯತೆಗಳಿಂದ ವಿಸ್ತರಿಸುತ್ತಿರುವ ಕೆಲವೇ ಪ್ರತಿಭಾವಂತ ಕಲಾವಿದರಲ್ಲಿ ಶ್ರೀ ಕೇದಗಡಿ ಗುಡ್ಡಪ್ಪ ಗೌಡರು ಎದ್ದು ಕಾಣುವ ಪ್ರತಿಭೆ.

ಕಾಸರಗೋಡು ತಾಲ್ಲೂಕು ದೇಲಂಪಾಡಿ ಗ್ರಾಮದ ಕೇದಗಡಿ ಮನೆತನದ ಗುಡ್ಡಪ್ಪಗೌಡ (1928)ರ ತಂದೆ ಸುಬ್ರಾಯ ಗೌಡ, ತಾಯಿ ಗೌರಮ್ಮ, ತಮ್ಮ ಹನ್ನೆರಡನೆ ವಯಸ್ಸಿನಲ್ಲೇ ಪ್ರಸಿದ್ಧ ಕಲಾವಿದ ಕೀರಿಕ್ಕಾಡು ಮಾಸ್ತರ್ ವಿಷ್ಣುಭಟ್ಟರಿಂದ ಯಕ್ಷಗಾನಕ್ಕೆ ದೀಕ್ಷೆ ಪಡೆದರು. ಇಲ್ಲಿಂದ ಆರಂಭವಾದ ಕೇದಗಡಿ ಗುಡ್ಡಪ್ಪ ಗೌಡರ ಯಕ್ಷಯಾತ್ರೆ, ಅವರನ್ನು ಕದ್ರಿ ಮೇಳದವರೆಗೆ ಎಳೆದು ತಂದಿತು. ಆ ಬಳಿಕ ಮೂಲ್ಕಿ, ಕೂಡ್ಲು, ಮುಚ್ಚೂರು ಚೌಡೇಶ್ವರಿ ಮೇಳ, ಮಡಿಕೇರಿ ಮೊದಲಾದ ಮೇಳಗಳಲ್ಲಿ ಹನ್ನೆರೆಡು ವರ್ಷ ನಿರಂತರವಾಗಿ ಪುಂಡುವೇಷ, ಸ್ತ್ರೀ ವೇಷ, ಪೀಠಿಕೆ ವೇಷಗಳಲ್ಲಿ ಕಲಾವಿದರಾಗಿ ಅನುಭವಗಳಿಕೆ. ಅಲ್ಲಿಂದ ಕಟೀಲು ಮೇಳದಲ್ಲಿ ಯಕ್ಷಗಾನದ ಎಲ್ಲ ನೈಪುಣ್ಯತೆಯಿಂದ ಪ್ರಧಾನ ವೇಷಧಾರಿಯಾಗಿ ನಲವತ್ತೆರಡು ವರ್ಷಗಳ ಕಾಲ ಯಕ್ಷಗಾನದ ರಾತ್ರಿಗಳನ್ನು ಜೀವಂತವಾಗಿಟ್ಟವರು.

ಅತಿಕಾಯ, ತಾಮ್ರಧ್ವಜ, ಕರ್ಣ ಮೊದಲಾದ ವೇಷಗಳಲ್ಲಿ ಗುಡ್ಡಪ್ಪಗೌಡರು ಯಕ್ಷಗಾನದ ಪ್ರೇಕ್ಷಕರ ಅಭಿರುಚಿಯನ್ನೇ ಎತ್ತರಕ್ಕೇರಿಸಿದ ಪ್ರತಿಭಾವಂತ ವೇಷಧಾರಿ. ತಮ್ಮ ಲಯಬದ್ಧವಾದ ಹೆಜ್ಜೆಗಾರಿಕೆ, ಎಲ್ಲೆ ಮೀರದ ಅಭಿನಯ, ಕಂಚಿನ ಶಬ್ಧದಂತಹ ಸ್ಫುಟವಾದ ಮಾತುಗಾರಿಕೆಯಿಂದ ಯಕ್ಷಗಾನದ ಪೌರಾಣಿಕ ಪ್ರಸಂಗಗಳ ವಿವಿಧ ಪಾತ್ರಗಳಿಗೆ ವ್ಯಕ್ತಿ ಪ್ರತಿಭೆಯ ಛಾಪನ್ನು ಮೂಡಿಸಿ, ರಂಗಸ್ಥಲದಲ್ಲಿ ತಮ್ಮದೇ ಆದ ಅಭಿನಯದ ಮುದ್ರೆಯನ್ನು ಪ್ರೇಕ್ಷಕರ ಮನಸ್ಸಿನಲ್ಲಿ ಒತ್ತುವ ಅನನ್ಯ ಕಲಾವಿದ.

ತಮ್ಮ ಐವತ್ತೆರಡು ವರ್ಷಗಳ ವೃತ್ತಿ ಜೀವನದಲ್ಲಿ, ಮೇಳಗಳ ಯಜಮಾನರುಗಳಿಂದ, ಸಹೋದ್ಯೋಗಿ ನಟರುಗಳಿಂದ ಅಪಾರ ಪ್ರೀತಿ ಗೌರವಗಳನ್ನು ಗಳಿಸಿರುವ ಗುಡ್ಡಪ್ಪಗೌಡರು ಸರಳ ಸಜ್ಜನಿಕೆಯ ನಿರಾಡಂಬರ ಜೀವಿ.

ಪ್ರಶಸ್ತಿ ಸ್ವೀಕರಿಸಲು ಬೆಂಗಳೂರಿಗೆ ಬಂದಿದ್ದ ಶ್ರೀಗುಡ್ಡಪ್ಪ ಗೌಡರಿಗೆ ಲೇಖಕರು ಕೊಡಗಿನ ಗೌಡನೆಂದು ಪರಿಚಯಿಸಿಕೊಂಡಾಗ ಕೊಡಗಿನಲ್ಲಿನ ತಮ್ಮ ಕೆಲವು ಸಂಬಂಧಿಗಳ ಬಗ್ಗೆ ವಿಚಾರಿಸಿದರು. ಮಾತಿನ ಮಧ್ಯದಲ್ಲಿ ಅರೆಭಾಷೆಯ ಬಗ್ಗೆ ಪ್ರಸ್ತಾಪವಾದಾಗ ಗುಡ್ಡಪ್ಪ ಗೌಡರು ಅರೆಭಾಷೆಯೇ ಗೌಡರ ಭಾಷೆ ಎಂದರು. ಆದರೆ ಸುಳ್ಯ, ಕಾಸರಗೋಡು ಭಾಗಗಳಲ್ಲಿ ವಾಸಿಸುವ ಗೌಡರು ಸುತ್ತಲ ಪರಿಸರದ ಒತ್ತಡದಿಂದಾಗಿ ತುಳುಭಾಷೆಯನ್ನಾಡುತ್ತಾರೆ ಎಂದು ಹೇಳಿದರು. ಕುಂಬಳಚೆರಿ ಮನೆಯಿಂದ ಬಂದ ತಮ್ಮ ಪತ್ನಿ ಶುದ್ಧ ಅರೆಭಾಷೆಯನ್ನು ಮಾತನಾಡುತ್ತಾರೆ ಎನ್ನುವಾಗ ಗೌಡರ ಕಣ್ಣು ಮಿಂಚುತ್ತದೆ.

ಕಾರ್ಯಕ್ರಮದ ಒತ್ತಡದಲ್ಲಿ ಗುಡ್ಡಪ್ಪ ಗೌಡರೊಡನೆ ಹೆಚ್ಚು ಚರ್ಚಿಸಲಾಗಲಿಲ್ಲ. ಈ ಮಹಾನ್ ಯಕ್ಷಗಾನ ಕಲಾವಿದರ ವಿವರವಾದ ಲೇಖನವನ್ನು ಸಂಗ್ರಹಿಸಿ ಸಂಗಾತಿಯಲ್ಲಿ ಪ್ರಕಟಿಸಲು ಓದುಗರಲ್ಲಿ ನನ್ನ ಮನವಿ.

**ಗೋವಿಂದಮ್ಮನ ಪ್ರವೀಣ್‌ಕುಮಾರ್, ಬೆಂಗಳೂರು**

---

**ಚುಟುಕು**

ಕವಿಗೆ ಕಾವ್ಯದ ಬಯಕೆ
ನವಿಲಿಗೆ ನಾಟ್ಯದ ಬಯಕೆ
ಕೋಗಿಲೆಗೆ ರಾಗದ ಬಯಕೆ
ನನಗೆ ಸಂಗಾತಿಯ ಬಯಕೆ

**ಮುಕ್ಕಾಟಿ ಮದು ಪೂಣಚ್ಚ, ಹೊಸ್ಕೇರಿ**

---

**ಚುಟುಕು**

ಗೌಡರು ಒಗ್ಗಟ್ಟಿದ್ದರೆ ಲಾಯ್ಕ
ಅರೆಭಾಷೆ ಮಾತಾಡಿಕೆ ಲಾಯ್ಕ
ಸಂಗಾತಿ ಓದಿಕೆ ಲಾಯ್ಕ
ಪೊನಿಧ್ವನಿ ಕೇಳಿಕೆ ಲಾಯ್ಕ

**ಕುಂಜಿಲನ ಆರ್. ರಾಜ, ಅರ್ವತೋಕ್ಲು**

---

**ಚುಟುಕು**

**ಎಳೆನೀರ್**

ಎಳೆನೀರ್‌ಕಿಂತ
ಪೊರ್‌ಲಾಗಿತ್
ಅದರ್‌ನ ಕೊಟ್ಟ
ಎಳೆಗೂಡೆನ ಮಾತ್.

**ರಾಜ ಸೀಟ್**

ಮನ್ಸ್‌ಗೆ ನೆಮ್ಮದಿ ಸಿಕ್ಕಲಿ ತೇಳಿ
ರಾಜ ಸೀಟ್‌ಗೆ ಹೋಕನ
ಅಲ್ಲಿಗೆ ಬರೋಕಾ ನನ್ನ
ಆಗಾಗ ಪೀಡ್‌ಸುವ ಸೊಳ್ಳೆ

ಬರಹ : **ಕುಂಜಿಲನ ಆರ್. ರಾಜ, ಕುಂಬಳದಾಳ್**

---

ಸೋಮಾರಿಗೆ ಎಷ್ಟೇ ಸುಲಭವಾದ ಕೆಲಸವು ಅಷ್ಟೇ ಕಷ್ಟಕರವೆನಿಸುತ್ತದೆ.

# ಶ್ರೀ ಲಕ್ಷ್ಮೀ ವೆಂಕಟೇಶ್ವರ ಮಹಾತ್ಮೆ

ಪೂರ್ವಕಾಲದಲ್ಲಿ ಹಿರಣ್ಯಾಕ್ಷನೆಂಬ ರಾಕ್ಷಸನಿದ್ದನು. ಅವನು ಅನೇಕ ಕಾಲ ಘೋರ ತಪಸ್ಸನ್ನು ಮಾಡಿ ದೇವತೆಗಳಿಂದಲೂ ಸಹ ತನಗೆ ಮರಣವಿಲ್ಲದಂತೆ ವರಗಳನ್ನು ಪಡೆದು ಗರ್ವದಿಂದ ಮದೋನ್ಮತ್ತನಾಗಿ ಸಂಚರಿಸುತ್ತಿದ್ದನು. ಒಂದು ದಿನ ಅವನು ಭೂಮಿಯಲ್ಲಿ ದೇವತೆಗಳಿಗೆ ಅಧಿಕಾರವಿರಕೂಡದೆಂದು ಆಲೋಚಿಸಿ ಭೂಲೋಕವನ್ನು ಸಮುದ್ರದಲ್ಲಿ ಬಚ್ಚಿಟ್ಟಿದ್ದನು. ಆವಾಗ ಋಷಿಗಳೂ, ದೇವತೆಗಳೂ ಶ್ರೀ ವಿಷ್ಣುವಿನಲ್ಲಿಗೆ ಹೋಗಿ ಹಿರಣ್ಯಾಕ್ಷನಿಂದ ಉಂಟಾಗಿರುವ ಬಾಧೆಗಳನ್ನು ವಿಜ್ಞಾಪಿಸಿಲು, ಅದನ್ನು ಗಮನಿಸಿ ಈ ದುಷ್ಕಾರ್ಯಗಳನ್ನು ಸಹಿಸದೇ ವರಾಹಾವತಾರವನ್ನು ಧರಿಸಿ, ಪಾತಾಳಕ್ಕೆ ಹೋಗಿ ಹಿರಣ್ಯಾಕ್ಷನೊಡನೆ ಘೋರ ಯುದ್ಧವನ್ನು ಮಾಡಿ ತನ್ನ ಹರಿತವಾದ ಕೋರೆಗಳಿಂದ ಚುಚ್ಚಿ ಸೀಳಿಕೊಂಡು ಭೂಲೋಕವನ್ನು ಮೇಲಕ್ಕೆ ತಂದನು. ಆದುದರಿಂದ ಮಹಾ ವಿಷ್ಣುವಿಗೆ ಭೂವರಾಹ ಮೂರ್ತಿಯೆಂದು ಹೆಸರಾಯಿತು. ದೇವತೆಗಳ ಪ್ರಾರ್ಥನೆಯಂತೆ ಅವನೇ ಶೇಷಾಚಲವೆಂಬ ಪ್ರಸಿದ್ದ ಪುಣ್ಯ ಕ್ಷೇತ್ರದಲ್ಲಿ ಮಹಾಮೂರ್ತಿಯಾದುದರಿಂದ ಲಕ್ಷ್ಮಿ ಸಮೇತನಾಗಿ ನೆಲೆಸಿ ಭಕ್ತರ ಮನೋರಥಗಳನ್ನು ಪೂರೈಸುತ್ತಿದ್ದನು.

ಲೋಕ ಕಲ್ಯಾಣರ್ಥವಾಗಿ ಕಶ್ಯಪಾದಿ ಮುನಿಶ್ರೇಷ್ಠರು ಒಂದಾಗಿ ಸೇರಿ ಒಂದು ಮಹಾಯಜ್ಞವನ್ನು ಮಾಡಲು ನಿಶ್ಚಯಿಸಿದರು. ವಿಷ್ಣು ಸ್ವರೂಪರಾದ ಎಲ್ಲರನ್ನೂ ಕರೆಯಿಸಿ ಗಂಗಾ ತೀರದಲ್ಲಿ ಯಜ್ಞವಾಟಿಕೆಯನ್ನು ವ್ಯವಸ್ಥೆಗಳನ್ನೂ ಮಾಡಿ ಯಜ್ಞವನ್ನಾರಂಭಿಸಲು ಶುಭ ಮೂರ್ತದಲ್ಲಿ ಶ್ರೇಷ್ಠರಿಗೆ ಆಹ್ವಾನಿಸಿ, ಸಕಲ ಮುನಿಗಳನ್ನು ಕಳುಹಿಸಿ ಹಾಗೆಯೇ ತ್ರಿಲೋಕ ಸಂಚಾರಿಯಾದ ನಾರದ ಮಹರ್ಷಿಗೂ ಸಹ ಆಹ್ವಾನವನ್ನು ಕಳುಹಿಸಿ ಯಾಗಕ್ಕೆ ಬೇಕಾದ ಸಾಮಗ್ರಿಗಳನ್ನು ಸಂಗ್ರಹ ಮಾಡಿ ಶುಭ ಮುಹೂರ್ತ ಸಮಯವನ್ನು ನಿರೀಕ್ಷಿಸುತ್ತಿದ್ದರು. ಯಜ್ಞದ ಪ್ರಾರಂಭದ ಸಮಯಕ್ಕೆ ನಾರದ ಮಹರ್ಷಿ ಸಕಲ ಮುನಿ ಶ್ರೇಷ್ಠರು ಯಾಗ ಶಾಲೆಗೆ ಬಂದ ಕೂಡಲೇ ಎಲ್ಲರೂ ಬಹಳ ಸಂತೋಷದಿಂದಿದ್ದರು. ಆಗ ನಾರದ ಮಹರ್ಷಿಯು ಬಹಳ ಸಂತೋಷದಿಂದ ಈ ಯಜ್ಞವು ಲೋಕ ಕಲ್ಯಾಣಕ್ಕಾಗಿಯೇ ಆರಂಭಿಸಲ್ಪಟ್ಟಿದೆ ಇದರ ಅನಿಷ್ಟ ನಿವೃತ್ತಿಯಾಗಿ ಶಾಂತಿಯು ಉಂಟಾಗುವುದು ಆದರೆ ಯಜ್ಞದ ಫಲವನ್ನು ಯಾರಿಗೆ ಅರ್ಪಿಸುವಿರಿ. ಇದು ಸಾಮಾನ್ಯರಿಗೆ ಕೊಡಬಾರದಲ್ಲವೇ? ಎಂದು ಕೇಳಿದರು. ನಾರದ ಮುನಿಯ ಪ್ರಶ್ನೆಗೆ ಸಮಾಧಾನವನ್ನು ಹೇಳಲಾರದ ಮುನೀಶ್ವರರೆಲ್ಲರೂ ಏನು ತೋಚದೆ ನಿಮ್ಮ ಪ್ರಶ್ನೆಗೆ ಉತ್ತರವು ನಮಗೆ ತಿಳಿಯಲಿಲ್ಲ ನೀವೇ ಹೇಳಬೇಕು ಎಂದು ಕೋರಲು ಯಾಗ ಫಲಾರ್ಪಣೆಗೆ ತ್ರಿಮೂರ್ತಿಗಳೇ ಅರ್ಹರು. ಅವರಲ್ಲಿ ಶಾಂತವು, ಸಹನವು, ಸತ್ವ ಗುಣ ಉಳ್ಳವರು ಯಾರೋ ಅವರಿಗೆ ಯಜ್ಞದ ಫಲವನ್ನು ಅರ್ಪಣೆ ಮಾಡಬೇಕು. ಆದುದರಿಂದ ಎಲ್ಲರೂ ಚೆನ್ನಾಗಿ ಆಲೋಚಿಸಿ ಯಾಗವನ್ನು ಆರಂಭಿಸಿರಿ ಎಂದು ನಾರದ ಮಹರ್ಷಿ ಹೇಳಿದರು.

ಭೃಗು ಮಹರ್ಷಿ ತಪಸ್ಸಂಪನ್ನರು, ತೇಜಸ್ವಿ, ಧೈರ್ಯ ಸಾಹಸವುಳ್ಳವರು ಅವರಿಗೆ ಪಾದದಲ್ಲಿ ಮೂರನೇ ಕಣ್ಣು ಇರುವುದು. ಆದರೇ ಈ ಮೂರನೆಯ ನೇತ್ರದ ಪ್ರಭಾವದಿಂದ ಗರ್ವಿತನಾಗಿ, ನನಗಿಂತಲೂ ದೊಡ್ಡವರು ಯಾರು ಇಲ್ಲವೆಂಬ ಅಹಂಭಾವವು ಅವರಲ್ಲಿರುವ ಅವರ ಅಹಂಕಾರವನ್ನು ಹೋಗಲಾಡಿಸಲು ಈ ಕಾರ್ಯಕ್ಕೆ ಭೃಗುಮಹರ್ಷಿಯೇ ಸಮರ್ಥರೆಂದು ಹೇಳಿದರು. ತ್ರಿಮೂರ್ತಿಗಳನ್ನು ಪರೀಕ್ಷಿಸಲು ಆತನೇ ಸಮರ್ಥನು ಎಂದು ಎಲ್ಲರೂ ಸಂತೋಷ ಪಟ್ಟರು. ಮಹರ್ಷಿಗಳು ಉದ್ದೇಶ ಮಾಡಿದ ಈ ಯಾಗವೇ ಶ್ರೀ ವೆಂಕಟೇಶ್ವರ ಸ್ವಾಮಿಯ ಚರಿತ್ರೆಗೆ ಮುಖ್ಯ ಕಾರಣವಾಯಿತು. ಆಗ ಭೃಗು ಮಹರ್ಷಿಯು ಸತ್ಯಲೋಕಕ್ಕೆ ತೆರಳಿದರು.

ಕಾರ್ಯಾರ್ಥಿಯಾಗಿ ಹೊರಟ ಭೃಗುಮಹರ್ಷಿಯು ಸತ್ಯಲೋಕಕ್ಕೆ ಹೋಗಿ ಚತುರ್ಮುಖ ಬ್ರಹ್ಮನನ್ನು ನೋಡಿದನು. ಆ ಸಮಯದಲ್ಲಿ ಸರಸ್ವತೀ ಚತುರ್ಮುಖರು(ಬ್ರಹ್ಮ) ಸಂತೋಷದಿಂದ ಸರಸಸಲ್ಲಾಪಗಳನ್ನಾಡುತ್ತಿರಲು ತಾನು ಬಂದದನ್ನು ಗಮನಿಸದೇ ಸರಸ್ವತಿದೇವಿಯೊಡನೇ ಸರಸ ಸಲ್ಲಾಪಗಳನ್ನಾಡುತ ಇದ್ದನೆಂಬ ಕೋಪದಿಂದ ಚತುರ್ಮುಖನೇ ಸಕಲ ಚರಾಚರಗಳ ಸೃಷ್ಟನೆಂದು ಗರ್ವಿತನಾಗಿದ್ದುದರಿಂದ, ಭೂಲೋಕದಲ್ಲಿ ನಿನಗೆ ದೇವಾಲಯವು. ಪೂಜೆಯೂ ಇಲ್ಲದಂತಾಗಲಿ" ಎಂದು ಶಾಪವನ್ನು ಕೊಟ್ಟು ಅಲ್ಲಿಂದ ತೆರಳಿದನು.

ಕೈಲಾಸದಲ್ಲಿ ಪಾರ್ವತಿ ಪರಮೇಶ್ವರರು ಆನಂದದಿಂದ ತಾಂಡವವನ್ನು ಮಾಡುತ್ತಾ ಭೃಗು ಮಹರ್ಷಿಯ ಬರುವಿಕೆಯನ್ನು ಗಮನಿಸಲಿಲ್ಲ. ಪಾರ್ವತಿ ದೇವಿಯು ಮಹರ್ಷಿಯು ಬರುವುದನ್ನು ಗಮನಿಸಿ ತನ್ನ ಪತಿಗೆ ಹೇಳಲು ಪರಮೇಶ್ವರನಿಗೆ ಆಗ್ರಹವುಂಟಾಯಿತು. ಭೃಗುಮಹರ್ಷಿಗೂ ಸಹ ಆಗ್ರಹವುಂಟಾಗಿ ಸಹಿಸಲಾರದೇ ಸಾಂಬಶಿವನೇ ಶ್ರಮಪಟ್ಟು ನಿನ್ನಲ್ಲಿಗೆ ಬಂದುದ್ದಕ್ಕೆ ಇದು ಮರ್ಯಾದೆಯೆ? ಎಂದೂ ಭೂಲೋಕವಾಸಿಗಳು ನಿನ್ನ ರೂಪಕ್ಕೆ ಬದಲಾಗಿ ಲಿಂಗಾಕಾರವನ್ನೇ ಪೂಜಿಸಲಿ" ಎಂದು ಶಾಪವನ್ನು ಕೊಟ್ಟು ಕೂಡಲೇ ವೈಕುಂಠಕ್ಕೆ ತೆರಳಿದನು.

ವೈಕುಠದಲ್ಲಿ ಶ್ರೀಮನ್ನಾರಾಯಣನು ಲಕ್ಷ್ಮೀಸಮೇತನಾಗಿ ಶೇಷತಲ್ಪದಲ್ಲಿ ಮಲಗಿ ಲಕ್ಷ್ಮಿದೇವಿಯೊಡನೆ ಸರಸಸಲ್ಲಾಪಗಳನ್ನಾಡುತ್ತಿದ್ದಾಗ ಭೃಗು ಮಹರ್ಷಿಯು ಬಂದು ನಿಲ್ಲಲು ಸ್ವಾಮಿಯು ಅವರನ್ನು ಗಮನಿಸಲೇ ಇಲ್ಲ.

ಇದಕ್ಕೆ ಮೊದಲು ಬ್ರಹ್ಮ, ಮಹೇಶ್ವರರಿಬ್ಬರೂ ನಿರ್ಲಕ್ಷ್ಯ ಮಾಡಿದ ಭೃಗುಮಹರ್ಷಿಯನ್ನು, ವಿಷ್ಣುಮೂರ್ತಿಯೂ ಸಹ ಲಕ್ಷ್ಯಮಾಡದೇ ಇರಲು ಭೃಗುಮಹರ್ಷಿಗೆ ಆಗ್ರಹವು ಮಿತಿ ಮೀರಿತು. ನನ್ನನು ನೋಡಿಯೂ ನೋಡದಂತೆ ನಟನೆಯನ್ನು ಮಾಡುತ್ತಾ ಇದ್ದಿರಾ?" ಎಂದು ಪ್ರಳಯ ಕಾಲರುದ್ರನಂತೆ ಚರ ಚರನೆ ಹೋಗಿ ಶ್ರೀ ಹರಿಯ ವಕ್ಷಸ್ಥಳವನ್ನು (ಎದೆ) ಕಾಲಿನಿಂದ ಒದೆದನು.

ಕೋಪದಿಂದ ತಾಡಿತನಾದ ವಿಷ್ಣುವು ಶಾಂತದಿಂದ ಮುನಿಂದ್ರಾ! ನಿಮ್ಮ ಆಗಮನದಿಂದ ವೈಕುಂಠವು ಪಾವನವಾಯ್ತು. ನಿಮ್ಮ ಆಗಮನವನ್ನು ಗಮನಿಸಲಿಲ್ಲ. ನಿಮ್ಮ ಪಾದಗಳಿಗೆ ಎಷ್ಟು

ನೋವು ಉಂಟಾಯಿತೋ" ಎಂದು ಪಾದಗಳನ್ನು ಒತ್ತುತ್ತಿರಲು, ವಿಷ್ಣುಮೂರ್ತಿ ಬಹಳ ಶಾಂತಾ ಸ್ವಭಾವವುಳ್ಳವನೆಂದು ಮಹರ್ಷಿ ಬಹಳವಾಗಿ ಸಂತೋಷಿಸುತ್ತಿರಲು, ಮಹರ್ಷಿಯ ಕಾಲಿನಲ್ಲಿದ್ದ ಮೂರನೇ ನೇತ್ರವನ್ನು ಕಿತ್ತು ಹಾಕಿದ ನಂತರ ಆತನು ಬಂದ ಕಾರ್ಯಗಳನ್ನು ತಿಳಿದು ಕೊಂಡನು.

ಶ್ರೀ ಮನ್ನಾರಾಯಣನ ವಕ್ಷಸ್ಥಳವು ಮಹಾಲಕ್ಷ್ಮೀ ನಿವಾಸ ಸ್ಥಳ. ಆಸ್ಥಳವನ್ನು ಭೃಗುಮಹರ್ಷಿ ಕಾಲಿನಿಂದ ಒದ್ದುದಕ್ಕೆ ಲಕ್ಷ್ಮಿದೇವಿಗೆ ಕೋಪವು, ದುಃಖವೂ ಉಂಟಾಯ್ತು. ವಿಷ್ಣುಮೂರ್ತಿಯು ಲಕ್ಷ್ಮಿದೇವಿಯನ್ನು ಶಾಂತಗೊಳಿಸಲು ಎಷ್ಟು ಪ್ರಯತ್ನಿಸಿದರೂ ಫಲಿತವಿಲ್ಲದೇ ಹೋಯ್ತು. ಕಡೆಯಲ್ಲಿ ಲಕ್ಷ್ಮೀ ದೇವಿ ಅಪಮಾನವನ್ನು ಸಹಿಸಲಾರದೆ ತಪಸ್ಸು ಮಾಡಲು ಭೂಲೋಕಕ್ಕೆ ತೆರಳಿದಳು.

ದೇವತೆಗಳು ಭೂದೇವಿಯನ್ನು ಭೂಲೋಕದಲ್ಲಿ ತಂದು ಸಂತೋಷಪಟ್ಟು ಪುಷ್ಪ ವೃಷ್ಟಿಯನ್ನು ಕರೆದರು. ಋಷಿಗಳು ಮತ್ತು ಸಾದುಗಳಿಗಾಗಿ ಶ್ರೀ ಮಹಾವಿಷ್ಣುವು ವರಾಹಾವತಾರವನ್ನು ತಾಳಿ ಭೂಲೋಕದಲ್ಲಿ ವಾಸ ಮಾಡಿದ ಸ್ಥಳಕ್ಕೆ ವರಾಹ ಕ್ಷೇತ್ರವೆಂದು ಹೆಸರಾಯಿತ್ತು.

ಶ್ರೀ ಹರಿಯು ಭೂಲೋಕಕ್ಕೆ ಬರುವಾಗ ನಡೆದು ಬಳಲಿ ಬಾಯರಿಕೆಯಿಂದ ಶ್ರಮಪಟ್ಟು ನಡೆಯಲಾರದೇ ವೆಂಕಟಾಚಲದಲ್ಲಿ ಸಂಪಿಗೆ ಮರದಡಿಯಲ್ಲಿನ ಹುತ್ತದಲ್ಲಿ ವಿಶಾಲವಾದ ಸ್ಥಳವಿದ್ದುದನ್ನು ಕಂಡು ಅಲ್ಲಿಯೇ ವಾಸಮಾಡಲು ನಿರ್ಧರಿಸಿದನು.

ವೈಕುಂಠದಲ್ಲಿ ವಾಸಿಸುತ್ತಿದ್ದ ಶ್ರೀಮನ್ನಾರಾಯಣನಿಗೆ ಆಹಾರವನ್ನು ಕೊಡಲು ಬ್ರಹ್ಮ, ಮಹೇಶ್ವರರು ಮಹಾಲಕ್ಷ್ಮಿಯಲ್ಲಿಗೆ ಹೋಗಿ ದೇವರಿಗೆ ಆಹಾರಕ್ಕೆ ಉಂಟಾದ ತೊಂದರೆಗಳನ್ನು ವಿವರಿಸಿ ಬ್ರಹ್ಮನು ಹಸುವಾಗಿಯೂ, ರುದ್ರನು (ಶಿವ) ಕರುವಾಗಿಯೂ, ಲಕ್ಷ್ಮಿದೇವಿಯು ಗೊಲ್ಲತಿಯಾಗಿಯೂ ವೇಷವನ್ನು ಧರಿಸಿ ಚಂದ್ರಗಿರಿ ಅರಸ ವಿಕ್ರಯಿಸುವಂತೆ ನಿರ್ಣಯ ಮಾಡಿಕೊಂಡರು.

ಲಕ್ಷ್ಮಿದೇವಿ ಗೊಲ್ಲ ಸ್ತ್ರೀಯಾಗಿಯೂ, ಬ್ರಹ್ಮನು ಹಸುವಾಗಿಯೂ. ರುದ್ರನು ಕರುವಾಗಿಯೂ ಆಗಿ ಚೋಳ ರಾಜನ ಬಳಿಗೆ ಹೋಗಿ ಆ ಗೊಲ್ಲ ಸ್ತ್ರೀಯು ಆ ಹಸುವನ್ನು ಮಾರುವುದಾಗಿ ಹೇಳಲು ಚೋಳ ರಾಜನು ಆ ಹಸುಕರುಗಳನ್ನು ಬೆಲೆ ಕೊಟ್ಟು ತೆಗೆದು ಕೊಂಡನು. ದೇವತಾ ಹಸುವು ಗೊಲ್ಲನು ಹಾಲನ್ನು ಕರೆದಾಗ ಅದು ಸ್ವಲ್ಪವೂ ಹಾಲುಕೊಡದೇ ಇರಲು ಚೋಳ ರಾಜನ ಹೆಂಡತಿಯೂ ಗೊಲ್ಲನನ್ನು ನೀನು ಮರೆಯಾಗಿ ಹಾಲನ್ನು ಕರೆದುಕೊಂಡು ಮೋಸ ಮಾಡುತ್ತಾ ಇರುವೆ" ಎಂದು ನಿಷ್ಠೂರವಾದ ಮಾತುಗಳನ್ನಾಡಿ ಇನ್ನು ಮೇಲೆ ಈ ಪ್ರಕಾರವಾದರೆ ನಿನಗೆ ಕಠಿಣ ಶಿಕ್ಷೆಯಾಗುವುದೆಂದು ಗೊಲ್ಲನನ್ನು ನಿಂದಿಸಿದಳು. ಗೊಲ್ಲನು ಗೋವುಗಳೊಡನೆ ಹೋಗುತ್ತಾ ಆ ದೇವತಾ ಹಸುವು ವಾಲ್ಮೀಕದ ಕಡೆಗೆ ಹೋಗುವುದನ್ನು ಕಂಡು ಅದನ್ನು ಹಿಂಬಾಲಿಸಿದನು. ಆ ಹಸು ವಾಲ್ಮೀಕದಲ್ಲಿದ್ದ ಶ್ರೀ ವಿಷ್ಣುವಿನ ಬಾಯಿಗೆ ಹಾಲು ಬೀಳುವಂತೆ ಆ ಹುತ್ತದ ಕಡೆಗೆ ನಿಂತು ಹಾಲನ್ನು ಸುರಿಸಿತು. ಅದನ್ನು ಗೊಲ್ಲನು ನೋಡಿದನು.

ಗೊಲ್ಲನು ಕೋಪಗೊಂಡವನಾಗಿ ಈ ಹಸು ತನ್ನನ್ನು ಮೋಸಮಾಡಿತೆಂದು ತನ್ನ ಕೈಯಲ್ಲಿದ್ದ ಕುಠಾರದಿಂದ ಆ ಹಸುವನ್ನು ಕೊಲ್ಲಲು ಕುಠಾರವನ್ನು ಮೇಲಕ್ಕೆ ಎತ್ತಿ ಹಾಕುವಷ್ಟರಲ್ಲಿ ವಲ್ಮೀಕದಲ್ಲಿದ್ದ ವಿಷ್ಣುವು ಬಂದು ಹಸುವಿಗೆ ಏಟು ಬೀಳದಂತೆ ತಡೆದನು.

ಗೊಲ್ಲನ ಕುಠಾರ ಪ್ರಹಾರವು ವಾಲ್ಮೀಕದಲ್ಲಿದ್ದ ಶ್ರೀ ಹರಿಯ ತಲೆಗೆ ಬಿದ್ದು ತಲೆಯಿಂದ ರಕ್ತ ಪ್ರವಾಹವು ಹೊರಟಿತು. ಅದನ್ನು ಕಂಡ ಗೊಲ್ಲನು ಭಯ ಭ್ರಾಂತನಾಗಿ ಕೆಳಗೆ ಬಿದ್ದು ತಕ್ಷಣ ಸತ್ತುಹೋದನು. ದೇವತಾ ಹಸುವು ಶ್ರೀಹರಿಗೆ ಕುಠಾರ ಪ್ರಹಾರದಿಂದ ರಕ್ತವು ಬರುವುದನ್ನು ಕಂಡು ದುಃಖದಿಂದ ಕಣ್ಣೀರು ಸುರಿಸುತ್ತಾ ವೇಗವಾಗಿ ರಾಜನ ಬಳಿಗೆ ಬಂದು ರಾಜನನ್ನು ವಾಲ್ಮೀಕದ ಕಡೆಗೆ ಬರಬೇಕೆಂದು ಸಂಜ್ಞೆಗಳನ್ನು ಮಾಡಿ ನಡೆದುದನ್ನು ತಿಳಿಯ ಪಡಿಸಿತು.

ಹಸುವು ಮುಂದೆ ಹೋಗುತ್ತಿರಲು ರಾಜನು ಅದರ ಹಿಂದೆಯೇ ಹೋಗಿ ವಾಲ್ಮೀಕದಿಂದ ರಕ್ತವು ಬರುತ್ತಿರುವುದನ್ನು. ಗೊಲ್ಲನು ಸತ್ತು ಬಿದ್ದಿರುವುದನ್ನು ನೋಡಿ ದಿಗ್ಭ್ರಾಂತನಾಗಿ ನೋಡುತ್ತಿರಲು ವಾಲ್ಮೀಕದಿಂದ ಶ್ರೀ ಹರಿಯು ಹೊರಗೆ ಬಂದು ಗೊಲ್ಲನು ಮಾಡಿದ ಅಪರಾಧಕ್ಕಾಗಿ ರಾಜನನ್ನು "ಪಿಶಾಚನಾಗು" ಎಂದು ಶಪಿಸಿದನು ರಾಜನು ತನ್ನ ಅಪರಾಧವನ್ನು ಮನ್ನಿಸೆಂದು ಕೇಳಿಕೊಳ್ಳಲು.

"ಎಲೈ ರಾಜನೇ ನಾನು ಕೊಟ್ಟ ಶಾಪವನ್ನು ತಿರುಗಿಸಲು ಸಾಧ್ಯವಿಲ್ಲ. ಕೆಲವು ಕಾಲಾನಂತರ ಆಕಾಶ ರಾಜನ ಮಗಳು ಪದ್ಮಾವತಿಯನ್ನು ನನಗೆ ಕೊಟ್ಟು ವಿವಾಹವಾಗುವುದು. ಆ ವಿವಾಹ ನಂತರ ನಿನ್ನ ಶಾಪವು ತೊಲಗುವುದು" ಆಕಾಶ ರಾಜನು ನನಗೆ ಒಂದು ಕಿರೀಟವನ್ನು ಕೊಡುವನು ಅದನ್ನು ನಾನು ಧರಿಸಿದಾಗ ನಿನಗೆ ಪಿಶಾಚ ರೂಪವಿರುವುದಿಲ್ಲ" ಎಂದು ಅಭಯವಿತ್ತನು.

ವಿಷ್ಣುವಿಗೆ ಏಟು ತಗುಲಿ ರಕ್ತವು ಹೋಗುತ್ತಾ ಇರಲು ಬೃಹಸ್ಪತಿಯು ತನಗೆ ವನಮೂಲಿಕೆಗಳನ್ನು ಹೇಳಿ ಅದನ್ನು ತಂದು ಕಟ್ಟುವಂತೆ ಹೇಳಲು, ವನಮೂಲಿಕೆಗಳನ್ನು ಹುಡುಕಿಕೊಂಡು ಹೋಗುವ ಸಮಯದಲ್ಲಿ ಗರ್ಜಿಸುತ್ತಿದ ಶಬ್ಧವನ್ನು ಕೇಳಿ ರಕ್ತವು ಹೋಗಿರುವುದರಿಂದ ಆಯಾಸವಾಗಿ ಬಲಹೀನನಾಗಿ ಭಯ ಪಟ್ಟಿರುವ ಸಮಯದಲ್ಲಿ ಅಲ್ಲಿಯೇ ಒಂದು ಆಶ್ರಮವು ಕಾಣಿಸಿತು. ಆಗ ಆಶ್ರಮದಲ್ಲಿ ಪ್ರವೇಶಿಸಿ "ಅಮ್ಮಾ" ಎಂದು ಕೂಗಿ ತನ್ನ ಕಷ್ಟಗಳನ್ನು ಹೇಳಿಕೊಂಡನು. ಆಕಾಶ ರಾಜನಿಗೆ ಸಂತಾನವಿಲ್ಲದರಿಂದ ಮನೋವ್ಯಾಕುಲತೆಯಿಂದ ಶ್ರೀ ಹರಿಯನ್ನು ಧ್ಯಾನಿಸಿ ತನ್ನ ವ್ಯಾಕುಲತೆಯನ್ನು ಹೇಳಿಕೊಳ್ಳಲು ಪುತ್ರ ಕಾಮೇಷ್ಟಿ ಯಾಗವನ್ನು ಮಾಡಿದರೆ ತಪ್ಪದೇ ಸಂತಾನವಾಗುದೆಂದು ಶ್ರೀ ಹರಿ ಹೇಳಿದನು. ಶುಕಮಹರ್ಷಿ ಹೇಳಿದ ನಿಯಮಾನುಸಾರವಾಗಿ ಪುತ್ರಕಾಮೇಷ್ಟಿ ಯಾಗವನ್ನು ಮಾಡಲು ಯಾಗ ಫಲವು ಫಲಿಸಿ, ಭೂಮಿಯಿಂದ ಒಂದು ಮಗುವು ಇರುವ ಪೆಟ್ಟಿಗೆಯು ಆಕಾಶರಾಜನಿಗೆ ಸಿಕ್ಕಿತ್ತು.

ಮುಂದುವರಿಯುತ್ತದೆ.

ಸಂಗ್ರಹ : ಮಳ್ಳಂದಿರ ಲಲಿತಾ ಶೇಷಗಿರಿ

ಕಾಯಿಲೆಯಿಂದ ನರಳುತ್ತಿದ್ದವರು ತಾಳ್ಮೆ ಕಳೆದುಕೊಳ್ಳಬಾರದು

# ವನಿತಾಲೋಕ : ಗೃಹಸಂಗಾತಿ

## ನುಗ್ಗೆ ಕಾಯಿ ಆಹಾರ ಪದಾರ್ಥ (Curry)

**ಬೇಕಾಗುವ ಸಾಮಾನು :** 8 ನುಗ್ಗೆಕಾಯಿ, 30 ಗೋಡಂಬಿ (ಗೇರುಬೀಜ) ಹಸಿಯಾಗಿದ್ದರೆ ಉತ್ತಮ, 2 ಒಣ ಮೆಣಸಿನ ಕಾಯಿ, ½ ಟೀ ಚ ಅರಸಿನ ಪುಡಿ, 1 ಊ. ಚ. ಕೊತ್ತಂಬರಿ ಬೀಜ, 1 ಚಿವುಟು ಜೀರಿಗೆ, 1 ನಿಂಬೆಹಣ್ಣು 4 ಈರುಳ್ಳಿ (ಹೆಚ್ಚಿ), 1-2 ಹಸಿ ಮೆಣಸಿನ ಕಾಯಿ (ಉದ್ದಕ್ಕೆ ಸೀಳಿ), 1 ಅಂಗುಲದಷ್ಟು ತುಂಡು ಹಸಿ ಶುಂಠಿ (ಹೆಚ್ಚಿ), 4 ಹಳಕು ಬೆಳ್ಳುಳ್ಳಿ (ಹೆಚ್ಚಿ), 1 ತೆಂಗಿನ ಕಾಯಿ, 2 ಊ. ಚ. ಎಣ್ಣೆ, 1-2 ಗರಿ ಕರಿಬೇವಿನ ಎಲೆ, ¼ ಟೀ. ಚ. ಸಾಸಿವೆ, ರುಚಿಗೆ ಬೇಕಾಗುವಷ್ಟು ಉಪ್ಪು.

**ವಿಧಾನ :** ನುಗ್ಗೆ ಕಾಯಿಯ ಸಿಪ್ಪೆ ಸುಲಿದು 2 ಅಂಗುಲದ ತುಂಡುಗಳಾಗಿ ಕತ್ತರಿಸಿ ಗೇರುಬೀಜಗಳನ್ನು (ಗೋಡಂಬಿ) ಬಿಸಿ ನೀರಿನಲ್ಲಿ ನೆನೆಹಾಕಿ ತೆಂಗಿನ ಕಾಯಿಯನ್ನು ಹೆರೆದು ಅದರಿಂದ ಮುಕ್ಕಾಲು ವಾಸಿಯನ್ನು ಅರೆದು 2 ಬಾರಿ ತೆಂಗಿನ ಹಾಲನ್ನ ಹಿಂಡಿ ತೆಗೆಯಿರಿ. ನುಗ್ಗೆ ಕಾಯಿ ಮತ್ತು ಗೋಡಂಬಿ ಇವುಗಳನ್ನು ಎರಡನೇಯ (ತೆಳ್ಳನ) ತೆಂಗಿನ ಹಾಲಿನಲ್ಲಿ ಹಾಕಿ ಬೇಯಿಸಿ ಕುದಿಸಿರಿ, ಹಾಕಿ ಉಳಿದ ಕಾಲುವಾಸಿ ತೆಂಗಿನ ತುರಿಯನ್ನು ಒಣಮೆಣಸು ಕೊತ್ತಂಬರಿ ಬೀಜ ಅರಸಿನ ಮತ್ತು ಜೀರಿಗೆ ಇವುಗಳೊಂದಿಗೆ ಒಟ್ಟಿಗೆ ಸೇರಿಸಿ ನುಣ್ಣಗೆ ರುಬ್ಬಿ ಎಣ್ಣೆ ಕಾಯಿಸಿ ಅದಕ್ಕೆ ಸಾಸಿವೆ ಮತ್ತು ಕರಿಬೇವಿನ ಎಲೆ ಸೇರಿಸಿ ಕರಿಯಿರಿ. ಸಾಸಿವೆ ಸಿಡಿಯುವಾಗ ಅದಕ್ಕೆ ರುಬ್ಬುವ ಮಸಾಲೆಯ ಕಣಕ ಮತ್ತು ಹೆಚ್ಚಿಟ್ಟ ಮಸಾಲೆ (ಈರುಳ್ಳಿ ಹಸಿ ಮೆಣಸಿನ ಕಾಯಿ ಶುಂಠಿ ಬೆಳ್ಳುಳ್ಳಿ) ಸೇರಿಸಿ ಈರುಳ್ಳಿ ಮೆದುವಾಗುವ ತನಕ ಕರಿಯಿರಿ. ಈಗ ಬೇಯಿಸಿಟ್ಟ ತರಕಾರಿ ನಿಂಬೆರಸ ಹಾಗೂ ಉಪ್ಪು ಸೇರಿಸಿ 10 ನಿಮಿಷ ಕಾಲ ಬೇಯಿಸಿ ನಂತರ ತೆಂಗಿನ ಮೊದಲನೆಯ (ದಪ್ಪಗಿನ) ಹಾಲು ಸೇರಿಸಿ 5 ನಿಮಿಷ, ಕಾಲ ಮರಳಿಸಿ ಬೇಯಿಸಿ ಒಗ್ಗರಣೆ ಹಾಕಿ.

## ಕೆಸುವಿನ ಗ್ರೇವಿ (Colocasia Curry)

**ಬೇಕಾಗುವ ಸಾಮಾನು :** 1 ಗೊಂಚಲು ಬಿಳಿ ಜಾತಿಯ ಕೆಸುವು, 10 ಗ್ರಾಂ ನೆಲಗಡಲೆ, 10 ಗ್ರಾಂ ಕಡ್ಲೆ ಬೇಳೆ, 15 ಗ್ರಾಂ ಒಣಕೊಬ್ಬರಿ, 10 ಗ್ರಾಂ ಗೋಡಂಬಿ (ಗೇರುಬೀಜ), 15 ಗ್ರಾಂ ಹುಣಸೇಹಣ್ಣು, 10 ಗ್ರಾಂ ಬೆಲ್ಲ, 10 ಗ್ರಾಂ ಕೊತ್ತಂಬರಿ ಜೀರಿಗೆಯ ಚೂರ್ಣ, 5 ಗ್ರಾಂ ಒಣ ಮೆಣಸಿನ ಪುಡಿ, ರುಚಿಗೆ ಬೇಕಾಗುವಷ್ಟು ಉಪ್ಪು, 1 ಚಿವುಟು ಸಾಸಿವೆ, 1 ಚಿಟಿಕೆ ಹಿಂಗು, 1 ಚಿವುಟು ಅರಿಸಿನ ಪುಡಿ, 10 ಗ್ರಾಂ ಎಣ್ಣೆ, 5 ಗ್ರಾಂ ಕಡಲೆಹಿಟ್ಟು.

**ವಿಧಾನ :** ನೆಲಕಡಲೆ ಮತ್ತು ಕಡಲೆ ಬೇಳೆ ಇವುಗಳನ್ನು ಒಂದು ತಾಸು ಕಾಲ ನೀರಿನಲ್ಲಿ ನೆನೆಹಾಕಿ. ಒಣ ಕೊಬ್ಬರಿಯನ್ನು ಕತ್ತರಿಸಿ ಹೆಚ್ಚಿ, ಕೆಸುವಿನ ಎಲೆಯನ್ನು ತೊಳೆದು ಹೆಚ್ಚಿ ಅದರ ಕಾಂಡದ ಸಿಪ್ಪೆ ಸುಲಿದು ಸಣ್ಣಗೆ ಹೆಚ್ಚಿ ಎಣ್ಣೆ ಕಾಯಿಸಿ ಅದಕ್ಕೆ ಸಾಸಿವೆ, ಹಿಂಗು ಮತ್ತು ಅರಿಸಿನ ಇವುಗಳನ್ನು ಸೇರಿಸಿ ಹದವಾಗುವಂತೆ ಸ್ವಲ್ಪ ಕರಿಯಿರಿ. ಈಗ ಕೆಸುವಿನ ಎಲೆ ಮತ್ತು ಕಾಂಡ ಸೇರಿಸಿ 5 ನಿಮಿಷ ಕಾಲ ಬೇಯಿಸಿ ಆಮೇಲೆ ನೆಲಗಡಲೆ, ಕಡ್ಲೆಬೇಳೆ ಮತ್ತು ಒಣ ಕೊಬ್ಬರಿ ಇವುಗಳನ್ನು ಸೇರಿಸಿ ಅದಕ್ಕೆ ½ ಲೀ. ನೀರು ಹೊಯ್ದು ಕಡ್ಲೆಬೇಳೆ ಬೇಯುವ ತನಕ ಮರಳಿಸಿ ಬೇಯಿಸಿ. ಈಗ ಹುಣಸೇಹಣ್ಣಿನ ತಿರುಳು ಬೆಲ್ಲ, ಒಣ ಮೆಣಸಿನ ಪುಡಿ, ಕೊತ್ತಂಬರಿ, ಜೀರಿಗೆ ಚೂರ್ಣ ಉಪ್ಪು ಇವುಗಳನ್ನು ಸೇರಿಸಿ 10ನಿಮಿಷಗಳ ಕಾಲ ಬೇಯಿಸಿ ಕಡ್ಲೆ ಹಿಟ್ಟನ್ನು ಸ್ವಲ್ಪ ನೀರಿನಲ್ಲಿ ಕಲಸಿ ಮಿಶ್ರಮಾಡಿ ಗ್ರೇವಿಗೆ ಹಾಕಿ ಕಡ್ಲೆಹಿಟ್ಟು ಬೇಯುವ ತನಕ ಮರಳಿಸಿ ಬೇಯಿಸಿ ಕೆಳಗಿಳಿಸಿ ಬಿಸಿಯಿರುವಾಗ ಬಡಿಸಿ.

## ಕೆಸುವೆ ದಂಟಿನ ಬೋಳು ಹುಳಿ

**ಬೇಕಾಗುವ ಸಾಮಾನು:** 25 ಕೆಸುವಿನ ದಂಟು, ನಿಂಬೆ ಗಾತ್ರದ ಹುಣಸೆ, 4 ಉಂಡೆ ಬೆಲ್ಲ, 10 ಹಸಿ ಮೆಣಸಿನ ಕಾಯಿ, ಉಪ್ಪು,

**ವಿಧಾನ :** ದಂಟಿನ ನಾರು ತೆಗೆದು ಸಣ್ಣಗೆ ಹೆಚ್ಚಿಕೊಂಡು ಕಡಿಮೆ ನೀರಿನಲ್ಲಿ ಬೇಯಿಸಿ. ಬೆಂದ ಮೇಲೆ ಹುಣಸೇ ರಸ, ಬೆಲ್ಲ, ಉಪ್ಪು ಹಾಕಿ, ಮೆಣಸಿನ ಕಾಯಿ ಸೀಳಿ ಹಾಕಿ, ಚೆನ್ನಾಗಿ ಕುದಿಸಿದ ನಂತರ ಎಣ್ಣೆಯಲ್ಲಿ ಸಾಸಿವೆ, ಬೆಳ್ಳುಳ್ಳಿ ಒಗ್ಗರಣೆ ಕೊಡಿ.

## ಕೆಸುವಿನ ಹುಳಿ ಸೊಪ್ಪು

**ಬೇಕಾಗುವ ಸಾಮಾನು :** ಮೊಳ ಉದ್ದದ 5 ಕೆಸುವಿನ ದಂಟು ಮತ್ತು ಸೊಪ್ಪು, 4 ಅಮಟೆಕಾಯಿ, 10 ಹಸಿ ಮೆಣಸಿನ ಕಾಯಿ, 1 ಊ. ಚ. ಕಡಲೆಕಾಳು, 1 ಹೋಳು ತೆಂಗಿನ ತುರಿ, ಉಪ್ಪು, ಬೆಲ್ಲ.

**ವಿಧಾನ :** ಕಡಲೆಕಾಳನ್ನು ನೆನಸಿಡಿ. ಇದರ ಜೊತೆ ಹೆಚ್ಚಿದ ಕೆಸುವಿನ ಸೊಪ್ಪು ಮತ್ತು ದಂಟನ್ನು ಬೇಯಿಸಿ. ಇದಕ್ಕೆ ಹಸಿಮೆಣಸಿನ ಕಾಯಿ ಹೆಚ್ಚಿ ಹಾಕಿ. ಅಮಟೆಕಾಯಿಯನ್ನು ಓಟೆ ಸಹಿತ ಕೆತ್ತಿ ಹಾಕಿ. ತೆಂಗಿನ ತುರಿ ರುಬ್ಬಿಕೊಂಡು ಇದನ್ನು ಬೆಂದ ಸೊಪ್ಪಿಗೆ ಬೆರಸಿ, ಉಪ್ಪು, ಬೆಲ್ಲ ಸೇರಿಸಿ. ಸಾಸಿವೆ, ಉದ್ದಿನಬೇಳೆ ಒಗ್ಗರಣೆ ಕೊಡಿ.

## ಗಂಡಸರು ಬೇಗ ಸಾಯುತ್ತಾರೆ! ಏಕೆ?

ಗಂಡಸರು ಹೆಂಗಸರಿಗಿಂತ ಬೇಗ ಸಾಯುತ್ತಾರೆ ಎಂಬ ನಂಬಿಕೆ ಇದೆ, ಇದು ನಿಜ ಎನ್ನುತ್ತಾರೆ ವಿಜ್ಞಾನಿಗಳು.

ಹುಟ್ಟುವ ಮಗು ಗಂಡಾದರೆ ತಾಯಿಯ ಗರ್ಭದಿಂದ ಹೊರ ಬರಲು ತಡಮಾಡುತ್ತದೆ. ಮಾತು, ನಡಿಗೆಯನ್ನು ಕಲಿಯುವುದರಲ್ಲೂ ನಿಧಾನ. ಮೀಸೆ ಚಿಗುರಿ ಗಂಡು ವಯಸ್ಕನಾಗುವುದಕ್ಕೂ ಹೆಣ್ಣಿಗಿಂತ ಹೆಚ್ಚು ಸಮಯ ತೆಗೆದುಕೊಳ್ಳುತ್ತಾನೆ. ಹೀಗಿರುವಾಗ ಸಾಯುವುದಕ್ಕೆ ಮಾತ್ರ ಗಂಡಿಗೇಕೆ ಅವಸರ!

ಇದಕ್ಕೆ ಕಾರಣ ಗಂಡಸರು ದಿನೇ ದಿನೇ ಬೆಳೆಸಿಕೊಳ್ಳುವ ಚಟಗಳು. ಸಿಗರೇಟು, ಕುಡಿತ, ಇತರ ಹವ್ಯಾಸಗಳಿಗೆ ಗಂಡು ಬೇಗ ಮನಸೋಲುತ್ತಾನೆ. ಈ ದುರಭ್ಯಾಸಗಳು ದೇಹವನ್ನು ದಣಿಸುತ್ತವೆ ಹೃದ್ರೋಗ, ಮೂತ್ರಪಿಂಡದ ಕಾಯಿಲೆ, ಇತರ ರೋಗಗಳು ಅಂಟಿ ಜೀವವನ್ನು ದೇಹದಿಂದ ಬೇಗ ಬೇರ್ಪಡಿಸುತ್ತವೆ. ಹೆಂಗಸರೂ ಇಂತಹ ಚಟಗಳನ್ನು ಕಲಿತರೆ ಗಂಡಿಗೆ ಸಮಾನವಾಗಿ ಬೇಗ ಸಾಯಬಹುದೇನೋ!

ಕೊಟ್ಟ ಕೇರಿಯನ ಉಷಾ, ಬಲಮುರಿ




✦ ಕೌಂಡಿನ್ಯ : ಧಾರವಾಹಿ -34

ಮುಖಕ್ಕೊಂದು ಸಾಲಿಡ್ ಪಂಚ್ !

ರೂಮಿನ ಬಾಗಿಲನ್ನು ತೆರೆದ ಕೂಡಲೇ ಒಳಗೆ ನುಗ್ಗಿದ್ದ ವ್ಯಕ್ತಿ ಪ್ರಸನ್ನನ ಮುಖಕ್ಕೆ ಗುದ್ದಿದನು.

ಬಾಯಿಂದ ಹೊರಬಂದ ಚೀತ್ಕಾರ !

ಪ್ರಸನ್ನ ಹಿಂದಕ್ಕೆ ವಾಲಿಕೊಂಡನು.

ಆ ವ್ಯಕ್ತಿ ಈಗ ರೂಮಿನ ಬಾಗಿಲನ್ನು ಹಾಕಿಕೊಂಡು ಸರಿಯಾಗಿ ನಿಂತುಕೊಂಡು ಪ್ರಸನ್ನನ ಕಡೆ ನೋಡಿತು !

ಆ ವ್ಯಕ್ತಿ ಮುಸುಕು ಧರಿಸಿರಲಿಲ್ಲ !

ಪ್ರಸನ್ನ ಹೌಹಾರಿದನು.

ಇಲ್ಲ...... ನಂಬಿಕೆಯೇ ಬರುತ್ತಿಲ್ಲ.

ಪ್ರಸನ್ನನ ಬಾಯಿಂದ ಉದ್ಗಾರ "ಅರೆ...... ನೀನಾ?"

ಆ ವ್ಯಕ್ತಿ ನಗುತ್ತಿದೆ.

ಪ್ರಸನ್ನ ಇನ್ನು ಶಾಕ್‌ನಿಂದ ಚೇತರಿಸಿ ಕೊಂಡಿರಲಿಲ್ಲ. ಅವನ ಊಹೆ, ಲೆಕ್ಕಚಾರ ತಲೆಕೆಳಗಾಗುತ್ತಿದೆ !

ಯಾರನ್ನು ನಂಬಬೇಕು? ಯಾರನ್ನು ಬಿಡಬೇಕು?

ತಾನು ಹುಚ್ಚರು ಅಂತ ಅನುಮಾನಿಸಿದವರೆಲ್ಲಾ ಒಬ್ಬೊಬ್ಬರಾಗಿ ಸಾಯುತ್ತಿದ್ದಾರೆ. ಇನ್ನು ಉಳಿದಿರೋದು ಅಣ್ಣ ಮಾತ್ರ ! ಅವನಿಗೆ ಪ್ರಾಣಾಪಾಯ ಇದೆ ಅಂತ ರಕ್ಷಣೆಗಾಗಿ ಇಬ್ಬರು ಕೆಲಸಗಾರರನ್ನು ನೇಮಿಸಿದ್ದನು.

ಈಗ ಕಾಣುತ್ತಿರುವುದೇನು?

ಯಾರಿಗೆ ಪ್ರಾಣರಕ್ಷಣೆ ನೀಡಿದ್ದನೋ ಅಂತಹ ದೊಡ್ಡ ಅಣ್ಣ ವೀರಭದ್ರ ಯಮದೂತನಂತೆ ನಿಂತಿದ್ದಾನೆ !

ಹಾಗಾದರೆ ಅವನ ಹುಚ್ಚು !

ಅಯ್ಯೋ... ಅದೊಂದು ದೊಡ್ಡಕತೆ !

* * *

ಆಸ್ಪತ್ರೆಯಲ್ಲಿ......

ರೇವತಿಗೆ ಪ್ರಜ್ಞೆ ಬಂದಿತು. ಅವಳ ಕಣ್ಣಿಗೆ ಮೊದಲು ಕಂಡಿದ್ದು ಗೆಳತಿ ಮೀನಳ ಅಜ್ಜಿ, ಶ್ರೀಕಂಠ ಮತ್ತು ದೇವಸ್ಥಾನದ ಯುವಕ ಪೂಜಾರಿ.

ಮತ್ತೊಂದು ಕಡೆ ಪೋಲಿಸ್ ಅಧಿಕಾರಿ ಇವಳಿಂದ ಹೇಳಿಕೆಯನ್ನು ಪಡೆಯಲು ಸಿದ್ಧವಾಗಿ ನಿಂತಿದ್ದಾನೆ.

ರೇವತಿ ಸಂಜ್ಞೆ ಮಾಡಿದಳು.

ಪೋಲಿಸ್ ಅಧಿಕಾರಿ "ರೇವತಿ...... ಈಗ ಹೇಗಿದೆ ಅಮ್ಮಾ ?"

"ಪರವಾಗಿಲ್ಲ ಸಾರ್"

"ನಿಮ್ಮ ಮೇಲೆ ಹಲ್ಲೆ ಮಾಡಲು ಪ್ರಯತ್ನಿಸಿದ್ದು ಯಾರು ಅಂತ ಹೇಳುತ್ತೀರ?" ಎಂದನು.

"ಇಲ್ಲ ಗುರುತಿಸಲಾಗಲಿಲ್ಲ."

"ಏನಾದರೂ ಪ್ರೂ ಕೊಡಲು ಸಾಧ್ಯವೆ?"

"ಅವನು ಮುಖ ಮತ್ತು ದೇಹ ಮುಚ್ಚುವಂತೆ ಕಂಬಳಿಯನ್ನು ಸುತ್ತಿಕೊಂಡಿದ್ದರಿಂದ ಗುರುತಿಸಲಾಗಲಿಲ್ಲ"

"ಅವನು ಎಲ್ಲಿಂದ ಬಂದ?"

"ಕಾಂಪೌಂಡ್ ಹಾರಿ ಬಂದಿರಬೇಕು"

ಪೋಲಿಸ್ ಅಧಿಕಾರಿ "ಅಂದರೆ ನಿಮ್ಮನ್ನು ಸಾಯಿಸಲು ಪ್ರಯತ್ನಿಸಿದ್ದು ಎಡತೊರೆ ಮನೆಯವರಲ್ಲವೆ?"

"ಇರಬಹುದೇನೋ ಗೊತ್ತಿಲ್ಲ"

ಪೋಲಿಸ್ ಅಧಿಕಾರಿ "ರೇವತಿಯವರೆ ನಿಮಗೆ ಅಪಾಯ ಇದೆ ಅಂತ ಪೋಲಿಸ್ ಪ್ರೊಟೆಕ್ಷನ್ ನೀಡಿದ್ದೇನೆ"

"ಥ್ಯಾಂಕ್ ಯೂ ಸಾರ್"

"ನಿಮಗೆ ತಿಳಿದಿರೋದನ್ನು ಹೇಳುತ್ತೀರ?"

"ಖಂಡಿತ ಹೇಳುತ್ತೇನೆ."

"ರೇವತಿಯವರೆ.... ನಿಮ್ಮ ಗೆಳತಿ ಮೀನ ಸೇರಿದಂತೆ ಇದುವರೆಗೂ ನಾಲ್ಕು ಮಂದಿ ಒಂದೇ ರೀತಿಯಲ್ಲಿ ಸತ್ತಿದ್ದಾರೆ. ಇದರ ಬಗ್ಗೆ ನಿಮಗೆ ಗೊತ್ತಿದೆಯೆ?"

ರೇವತಿ "ಇದು ಪವಾಡ ಅಲ್ಲ ಅಥವಾ ನಮ್ಮ ದೇವಸ್ಥಾನದ ಅರ್ಚಕರು ಹೇಳುವಂತೆ ಇದು ನಾಗರ ಹಾವಿನ ನಂಟು ಅಲ್ಲ."

ಪೂಜಾರಿಯ ಮುಖ ಕೆಂಪೇರಿತು.

ಶ್ರೀಕಂಠ ಚಡಪಡಿಸುತ್ತಿದ್ದಾನೆ !

"ಹಾಗಾದರೆ ಇನ್ನೇನು? ಯಾಕೆ ಅಂದರೆ ಹುತ್ತದಲ್ಲಿರೋ ಹಾವುಗಳು ತಾವಾಗಿಯೇ ಬಂದು ಒಬ್ಬ ವ್ಯಕ್ತಿಯ ದೇಹಕ್ಕೆ ಸುತ್ತಿ ಕೊಂಡು ತುಂಬಾ ಹೊತ್ತು ಅಲ್ಲಿಯೇ ಹರಿದಾಡುವುದು ಎಂದರೆ ಅಸಹಜ ಅನಿಸುತ್ತೆ."

ರೇವತಿ ನಗುತ್ತಾ "ಅಸಹಜ ಅಂತ ಅನಿಸುತ್ತೆ ಆದರೆ ಖಂಡಿತಾ ಸೂಪರ್ ನ್ಯಾಚುರಲ್ ಪವರ್ ಅಲ್ಲ"

"ಹಾಗಾದರೆ ಇನ್ನೇನು?"

"ಮನುಷ್ಯನ ಬುದ್ಧಿವಂತಿಕೆಯ ಪ್ರತೀಕ"

ಇದನ್ನು ಕೇಳಿ ಶ್ರೀಕಂಠ ಮತ್ತು ಪೂಜಾರಿ ಭಯಾಶ್ಚರ್ಯದಿಂದ ರೇವತಿಯ ಮುಖ ನೋಡಿದರು.

"ನಿಮಗೆ ಪ್ರೂ ದೊರೆತಿದೆಯೆ?" ರೇವತಿ ತಲೆಯಾಡಿಸಿದಳು.

ಪೋಲಿಸ್ ಅಧಿಕಾರಿ "ಏನದು?"

ತಿಪ್ಪೆ "ಹೆಣವನ್ನು ನೋಡುತ್ತಿರುವಾಗ ನನ್ನ ಮೂಗಿಗೆ ಅದೇನೋ ವಿಚಿತ್ರ ವಾಸನೆ ಬಂದಿತು !"

ಎಲ್ಲರೂ ಬೆಚ್ಚಿಬಿದ್ದರು.

"ವಿಚಿತ್ರ ವಾಸನೆ...... ಎಲ್ಲಿಂದ ಬರುತ್ತಿತ್ತು?"

20ನೇ ಪುಟಕ್ಕೆ


ಇಲ್ಲಿಯವರೆಗೆ.........

ರೇವತಿಯ ಮೇಲೆ ಹಲ್ಲೆ ನಡೆಯುತ್ತದೆ. ಅವಳನ್ನು ಆಸ್ಪತ್ರೆಗೆ ಸೇರಿಸಲಾಗುತ್ತದೆ. ಅವಳಿಗೆ ಪ್ರಜ್ಞೆ ಬಂದಿರುವುದಿಲ್ಲ. ಅವಳ ಹೇಳಿಕೆ ಪಡೆಯಲು ಪೋಲಿಸರು ಕಾದಿರುತ್ತಾರೆ. ಪ್ರಸನ್ನನ ರೂಮಿಗೆ ನುಗ್ಗಿದ ವ್ಯಕ್ತಿ ಈಗ ಅವನ ಮೇಲೆ ಹಲ್ಲೆ ನಡೆಸುತ್ತಿದ್ದಾನೆ.

ಮುಂದೆ ಓದಿ.........

ದಯೆಯೇ ಧರ್ಮದ ಮೂಲ

# ಪತ್ರ ವಿಭಾಗ :



ಮಾನ್ಯರೆ,

ನಂಗಾರು ಅಪ್ಪಾಜಿಯು ಮಾಡುವ ನಮಸ್ಕಾರಗಳು.

ನೀವು ಸಂಗಾತಿಯ 11ರ ಸಂಚಿಕೆಯಲ್ಲಿ, ನಮ್ಮ ಜನಾಂಗದ ಸಂಸ್ಕೃತಿ ಮತ್ತು ಸಂಪ್ರದಾಯದ ಬಗ್ಗೆ ಬರೆದುದನ್ನು ಓದಿ ತುಂಬಾ ಸಂತೋಷವಾಯ್ತು.

ಭಾಗಮಂಡ್ಲ (ತಾವುನಾಡು) ನಾಡಿನ ಗ್ರಾಮಗಳಾದ ತಾವೂರು, ತಣ್ಣಿಮಾನಿ, ಚೇರಂಗಾಲ ಮತ್ತು ಕೋರಂಗಾಲ ಈ ನಾಲ್ಕು ಊರಿನವರು ಈಗಲೂ ಹುತ್ರಿಗೆ ಮುಂಚೆ ಮೂರು ಯಾ ಐದು ದಿನ ರಾತ್ರಿ ಆಯಾಯ ಊರಿನ ಮಂದ್‌ನಲ್ಲಿ ಕೋಲಾಟ ವಾಡುವರು. ('ಮಂದು' ಎಂದರೆ ಮೈಸೂರು ಕಡೆ ಊರಿಗೊಂದು ಆಲದ ಕಟ್ಟೆಯಿದ್ದು, ಅದರ ಕೆಳಗೆ ಊರಿನ ಜನರು ಸೇರಿ ಎಲ್ಲಾ ನ್ಯಾಯ ಪಂಚಾಯ್ತಿಗಳನ್ನು ತೀರಿಸುತ್ತಿದ್ದರು. ಅದೇ ರೀತಿ ಕೊಡಗಿನಲ್ಲಿ ಗ್ರಾಮಕ್ಕೊಂದು ವಿಸ್ತಾರದ ನೆರಳಿನ ಗೋಳಿಮರದ ಕಟ್ಟೆಯೊಂದಿದ್ದು, ಊರಿನ ನ್ಯಾಯ ಪಂಚಾಯ್ತಿಯನ್ನು ಅದರ ಕೆಳಗೆ ತೀರ್ಮಾನಿಸುತ್ತಿದ್ದರು.) ಹುತ್ರಿ ಮಾರನೆ ದಿನ ಈ ನಾಲ್ಕು ಗ್ರಾಮದ ಜನರು, ಪ್ರತೀ ಗ್ರಾಮದಿಂದ ಬೆರಳೆಣಿಕೆಯಷ್ಟಾದರೂ ಯೋಧರು ಕಡ್ಡಾಯವಾಗಿ ಹಿಂದಿನಂತೆ ಕುಪ್ಪಸ, ದಟ್ಟಿ, ರುಮಾಲು ಧರಿಸಿ ಜೋಡು ಬೆತ್ತದ ಕೋಲುಗಳನ್ನು ಹಿಡಿದು 'ಮೇದ' ಮತ್ತು 'ಬೈರ'ರ ವಾದ್ಯದೊಡನೆ (ಮೊದಲು ದುಡಿಪಾಟ್ ಬಾಳೋ ಪಾಟ್ ಕೂಡಾ ಹಾಡುತಿದ್ದರು) ಭಾಗಮಂಡಲದ ಮಂದ್‌ಗೆ ಬಂದು (ಭಾಗಮಂಡಲ ಆಸ್ಪತ್ರೆ ಸಮೀಪ) ಒಟ್ಟು ಗೂಡುತ್ತಿದ್ದರು. ವಿ. ಸೂ. : ಈ ನಾಲ್ಕು ಗ್ರಾಮಗಳಲ್ಲಿ ವಾದ್ಯದವರು ಕೊಂಬು ಊದಬಾರದಂತೆ. ಕಾರಣ ತಿಳಿಯದು. ಭಾಗಮಂಡಲದ 'ಮಂದ್'ನಲ್ಲಿ ನಾಲ್ಕೂ ಗ್ರಾಮದವರು ಒಂದುಗೂಡಿ ಕೋಲಾಟವಾಡಿ, ಮೆರವಣಿಗೆಯಲ್ಲಿ ಭಗಂಡೇಶ್ವರ ದೇವಾಲಯಕ್ಕೆ ಹೋಗಿ, ಪೂಜೆಯ ಪ್ರಸಾದವನ್ನು ಸ್ವೀಕರಿಸಿ, ದೇವರಿಗೆ ಕೋಲನ್ನು ಅರ್ಪಿಸುವರು. (ನಂತರ ಒಂದು ಕೋಲಿನಿಂದ ಇನ್ನೊಂದು ಕೋಲಿಗೆ ಹೊಡೆಯ ಬಾರದಂತೆ. ಏಕೆ ಗೊತ್ತಿಲ್ಲ) ಆಗ ನಾಡಿನ ತಕ್ಕ ಬಳ್ಳಡ್ಕ ಮನೆಯವರು ಮುಂದಿನ ವರ್ಷವೂ ಇದೇ ರೀತಿ ಒಟ್ಟು ಸೇರಿ ಕೋಲಾಟವಾಡಿ "ಕಾವೇರಿ ಮಾತೆಗೆ" ಕೋಲು ಒಪ್ಪಿಸಬೇಕೆಂದು ಆಜ್ಞಾಪಿಸುವರು.

ಕುಪ್ಪಸ ದಟ್ಟಿಯನ್ನು ಹಬ್ಬ, ಹರಿದಿನ, ಮದುವೆಗಳಲ್ಲಿ ವಿರೋಧಿಸಿದವರು ಆಗಿನ ಕಾಲದಲ್ಲಿ ಎರಡಕ್ಷರ ಕಲಿತು ಆಸ್ತಿ ಪಾಸ್ತಿಯಲ್ಲಿ ಬಲಾಢ್ಯರಾಗಿದ್ದ ಕೆಲವೆ ಕುಳದವರು. ಈ ವಿರೋಧಕ್ಕೆ ಬಲ್ಲ ಸಿಕ್ಕಿದೆಂದರೆ 1929ರಲ್ಲಿ ಕಲ್ಕತ್ತದ ಗವರ್ನರ್ ಲಾರ್ಡ್ ಇರ್ವಿನ್ ಮಡಿಕೇರಿಗೆ ಭೇಟಿ ಮಾಡಿದ ನಂತರ. ಇವರನ್ನು ಭೇಟಿ ಮಾಡುವ ಮುಖಂಡರ ತಂಡ ಕೊಡಗರೇ ಆಗಿದ್ದು, ಕುಪ್ಪಸ, ದಟ್ಟಿ, ರುಮಾಲು, ಪೀಚಕತ್ತಿ ಧರಿಸಿರಬೇಕೆಂದು ಕಟ್ಟಾಜ್ಞೆಯಾಯ್ತು. ಇದನ್ನು ವಿರೋಧಿಸಿ ಆಗ ಜಡ್ಜ್ ಆಗಿದ್ದ ದಿ. ನಿಡ್ಯಮಲೆ ಮುದ್ದಪ್ಪನವರು ನಮ್ಮ ಜನಾಂಗದ ಕೆಲವು ಮುಖಂಡರನ್ನು ಉದ್ದವಾದ ಕೋಟ್, ಕಚ್ಚೆಪಂಚೆ, ರುಮಾಲು, ಶಾಲು ಧರಿಸಿ ಬೇರೆ ಪಂಕ್ತಿಯಲ್ಲಿ ನಿಲ್ಲಿಸಿ, ನಮ್ಮ ಹಕ್ಕು ಬಾಧ್ಯತೆಗಳನ್ನು ವಿವರಿಸಿ ಗವರ್ನರ್‌ಗೆ ಪರಿಚಯ ಮಾಡಿಸಿ ಬಿನ್ನವತ್ತಳೆ ಕೊಟ್ಟರು.

ನಮಗೆ ಕುಪ್ಪಸ, ದಟ್ಟಿ, ಹೇಗೆ ಬಂತು? ನಿಜವಾಗಿ ಹೇಳುವುದಾದರೆ 'ಟಿಪ್ಪು ಸುಲ್ತಾನ್' ಎರಡನೆ ಬಾರಿಗೆ ಕೊಡಗನ್ನು ನುಗ್ಗಿ, ಭಾಗಮಂಡಲ ದೇವಾಲಯದ ಭಂಡಾರವನ್ನು ಕೊಳ್ಳೆ ಹೊಡೆದು, ಕೊಡಗಿನ ರಾಜ ಮತ್ತು ಯೋಧರನ್ನು ಕೈದಿಗಳಾಗಿ ಕೊಂಡೊಯ್ದು ಪೆರಿಯಾಪಟ್ಣ ಮತ್ತು ಶ್ರೀರಂಗ ಪಟ್ಟಣದಲ್ಲಿ ಜೈಲಿನಲ್ಲಿಟ್ಟರು ಮತ್ತು ಮತಾಂತರಿಸಿದರಂತೆ...........

ಹಲವಾರು ವರ್ಷಗಳ ನಂತರ ಪೆರಿಯಪಟ್ಟಣ ಜೈಲಿನಿಂದ ತಪ್ಪಿಸಿ ಕೊಂಡು ಬಂದ ರಾಜರು,ಕೊಡಗಿನಲ್ಲಿ ಪಾಳು ಬಿದ್ದಿದ ಭೂಮಿ, ತೋಟಗಳಲ್ಲಿ ಕೃಷಿ ಮಾಡಲು, ತನ್ನದೆ ರಾಜ್ಯದ ಸುಳ್ಯ ಕಡೆಯಿಂದ ನಮ್ಮ ಹಿರಿಯರನ್ನು ಪೂಜೆ, ಪುರಸ್ಕಾರವಿಲ್ಲದೆ ನಿಂತು ಹೋಗಿದ್ದ ತಲಕಾವೇರಿ, ಭಾಗಮಂಡಲ ಮತ್ತು ಎಲ್ಲಾ ಊರು ದೇವಸ್ಥಾನಗಳಿಗೆ ಬ್ರಾಹ್ಮಣರನ್ನೂ, ಮತ್ತು ಆಯಾಯ ವೃತ್ತಿಯ (ಬಡಗ, ಹಜಾಮ, ಮಡಿವಾಳ, ಜೋಗಿ, ಗೊಲ್ಲ ಮುಂತಾದ) ಪಂಗಡದವರನ್ನೂ ಕರೆತಂದು ನಿಲ್ಲಿಸಿ, ಅವರಿಗೆ ಜಮ್ಮ, ಜಹಗೀರುಗಳನ್ನು ಹದಿನೆಂಟನೇ ಶತಮಾನದ ಕೊನೆಯಲ್ಲಿ ನಿರೂಪಣೆ ಮಾಡಿಕೊಟ್ಟ ದಾಖಲೆಗಳಿವೆ. ಹೀಗೆ ನೆಲೆಯಾದ ಗೌಡ ಜನರನ್ನು ರಾಜರು ಒಂದು ದಿನ ಐಯ್ಯಂಗೇರಿ ಗ್ರಾಮದ "ದೇವಟ್ಟ ಪರಂಬು" ನಲ್ಲಿ ಒಟ್ಟು ಸೇರಿಸಿ ಮನೆಗೊಬ್ಬ ಹಿರಿಯನಿಗೆ ಕುಪ್ಪಸದಟ್ಟಿ, ರುಮಾಲು, ಒಡಿಕತ್ತಿ, 'ವಿ' ಎಂದು ಕೊಳದಲ್ಲಿ ಕೆತ್ತಲ್ಪಟ್ಟ ಕೇಪುವಿನ ಕೋವಿಯನ್ನು ಕೊಟ್ಟು, ಇನ್ನು ಮುಂದೆ ನಮ್ಮ ದೇಶದ ರಾಜ ಪದ್ಧತಿಯಂತೆ ಆಸ್ಥಾನಕ್ಕೆ ಬರುವಾಗ ಉಡುಪು ತೊಟ್ಟು, ಶೃಂಗರಿಸಿ ಅಂಗಿ ಧರಿಸುವಂತೆಯೂ ಕಷ್ಟ ಸುಖಕ್ಕೆ ಕರೆದಾಗ ನನ್ನ ಆಸ್ಥಾನಕ್ಕೆ ಬರಬೇಕೆಂದು ಹುಕುಂ ಮಾಡಿದರೆಂದು ಹಿರಿಯರು ಹೇಳಿದನ್ನು ನಾನು ಕೇಳಿರುವೆನು.

---

## ಅಭಿನಂದನೆ

ಕೊಡಗು ಸಂಗಾತಿಯ ಸಂಚಿಕೆ 4/13ರಲ್ಲಿ ಪ್ರಕಟಿಸಿದ ಮಹಿಳಾ ಒಕ್ಕೂಟದ ಕಲಾಪಗಳು ಹಾಗೂ ಸಾಂಸ್ಕೃತಿಕ ಚಟುವಟಿಕೆಯಲ್ಲಿ ನಮ್ಮ ಹಿರಿಯರು ಸಾಮೂಹಿಕವಾಗಿ ಭತ್ತ ಕುಟ್ಟುವ ಅರಿವನ್ನು ಅಂದು ಸಮಾಜದಲ್ಲಿ ಪ್ರದರ್ಶಿಸಿದ ನಮ್ಮ ಬಗ್ಗೆ ಫೋಟೋ ಸಹಿತ ಪ್ರಕಟಿಸಿದ್ದೀರಿ. ಬೇರೆಯವರಿಗೆ ಮಾದರಿಯಾಗುವ ಕಿರಿಯರಿಗೆ ಪ್ರೋತ್ಸಾಹಿಸುವ ನಿಮಗಳಿಗೆ ನನ್ನ ವೈಯುಕ್ತಿಕ ಮತ್ತು ನನ್ನ ತಂಡದವರ ಅಭಿನಂದನೆಗಳು

**ಕೋಳುಮುಡಿಯನ ಪ್ರೇಮಾ ಆನಂದ್, ಗಾಳಿಬೀಡು**

---

ನಾನಿಲ್ಲದೆ ದೇವರಿಲ್ಲ ಮಣ್ಣಿಲ್ಲದೆ ಮಡಿಕೆ ಇಲ್ಲ

- ಕನ್ನಡದ ನಾಣ್ಣುಡಿ

# ವಿದ್ಯಾವಂತ ನಿರುದ್ಯೋಗಿಗಳಿಗೆ ಮಾರ್ಗದರ್ಶಿ - 4

· ತಡಿಯಪ್ಪನ ಕುಮಾರ ಜಯ

ಹಿಂದಿನ ಸಂಚಿಕೆಯಿಂದ ಮುಂದುವರೆದಿದೆ.

| | | |
|---|---|---|
| 106 ಜನರಲ್ ಇಂಜಿನಿಯರ್ ವರ್ಕ್ಸ್ | ಟರ್ನರ್ | 1 |
| ಉಮಾ ಟಾಕೀಸ್ ರಸ್ತೆ ಹತ್ತಿರ, | | |
| ಗಾಂಧಿಚೌಕ, ಮೈಸೂರು -1 | | |
| 107 ಕರ್ನಾಟಕ ಆಟೋ ಇಂಜಿನಿಯರಿಂಗ್ ವರ್ಕ್ಸ್ | ಟರ್ನರ್ | 2 |
| ಸಯ್ಯಾಜಿರಾವ್ ರಸ್ತೆ, | | |
| ಮುಸ್ಲಿಂ ಅರ್‌ಫನೇಜ್ | | |
| ಬಿಲ್ಡಿಂಗ್, ಮೈಸೂರು -10 | | |
| 108 ಆರ್. ವಿ. ಚೇಮ್ ಫಾರ್ಮ್ ಪ್ರೈ, ಲಿ., | ಫಿಟ್ಟರ್ | 1 |
| ಎ.ಎಸ್. ವಿಶ್ವೇಶ್ವರನಗರ, ಮೈಸೂರು -8 | ಎಲೆಕ್ಟ್ರಿಷಿಯರ್ | 1 |
| | ಬಾಯ್ಲರ್ ಅಟೆಂಡೆಂಟ್ | 1 |
| 109 ಫಿದಾ ಆಟೋ ವರ್ಕ್ಸ್, ಸರ್ಕಾರದ | M.M.V. | 1 |
| ಐ.ಟಿ.ಐ. ಬಿಲ್ಡಿಂಗ್, ಎದುರು, | ವೆಲ್ಡರ್ | 1 |
| ಅಶೋಕ ರಸ್ತೆ, ಮೈಸೂರು -8 | ಆಟೋ ಎಲೆಕ್ಟ್ರಿಕ್ | 1 |
| 110 ಹೋಟೆಲ್ ದಾಸ್‌ಪ್ರಕಾಶ್ ಪ್ಯಾರಡೈಸ್ | ಅಡಿಗೆಯವರು | |
| ಯಾದವಗಿರಿ, ಮೈಸೂರು -7 | (ಸಸ್ಯಾಹಾರಿ) | 1 |
| | ಸ್ಟಿವರ್ಡ್ | 1 |
| 111 ಕುಸುಮ ಪ್ರಿಂಟಿಂಗ್ ಪ್ರೆಸ್, 2ನೇ ಕ್ರಾಸ್ | 1 ಬುಕ್ ಬೈಂಡರ್1 | |
| ಕೆ. ಎಂ. ಪುರ, ಮೈಸೂರು -4 | | |
| 112 ಹೋಟೆಲ್ ರಮಣಶ್ರೀ ಕಂಪಾರ್ಟ್ಸ್ | ಅಡಿಗೆಯವರು | |
| ನಂ. ಎಲ್. 43, | (ಜನರಲ್) | 1 |
| ಬೆಂಗಳೂರು ನೀಲಗಿರಿ ರಸ್ತೆ | ರಿಸಪ್ಷನಿಸ್ಟ್ | 1 |
| ಮೈಸೂರು -1 | | |
| 113 ಶ್ರೀ ಇಂಟರ್ ನ್ಯಾಷನಲ್, ನಂ. ಬಿ-63 | ಎಲೆಕ್ಟ್ರಾನಿಕ್ ಮೆಕಾನಿಕ್ | 3 |
| ಹೆಬ್ಬಾಳ್ ಐ.ಎ. ಮೈಸೂರು-10 | | |
| 114 ಸಿಟಿಜನ್ ಆಟೋ ಇಂಜಿನಿಯರ್ಸ್ ವರ್ಕ್ಸ್ | ಟರ್ನರ್ | 1 |
| ನಂ. 2887, ಸ್ವಾಡಿ ರಸ್ತೆ, ಮೈಸೂರು -21 | | |
| 115 ವೆಂಕಟೇಶ್ವರ ಇಂಜಿನಿಯರ್ ಮತ್ತು ಗ್ರಿಲ್‌ವರ್ಕ್ಸ್ | ವೆಲ್ಡರ್ | 1 |
| ನಂ. 2511, ಕಾಂತರಾಜ ಅರಸ್ ರಸ್ತೆ, | | |
| ಸರಸ್ವತಿ ಪುರಂ, ಮೈಸೂರು-8 | | |
| 116 ಕರ್ನಾಟಕ ಇಂಜಿನಿಯರ್ ವರ್ಕ್ಸ್, ಹೊಸ | ಟರ್ನರ್ | 1 |
| ಬಸ್‌ನಿಲ್ದಾಣ, ಅಕ್ಕಿಗಿರಣಿ ರಸ್ತೆ, ಹುಣಸೂರು | | |
| 117 ಕ್ವಾಲಿಟಿ ಇನ್ ಸದರನ್ ಸ್ಟಾರ್ ಹೋಟೆಲ್ | ಕುಕ್(ಜನ್) | 4 |
| ವಿನೋಬ ರಸ್ತೆ, ಮೈಸೂರು | ಸ್ಟೀವರ್ಡ್ | 5 |
| | ಮನೆಕೆಲಸದವರು | 3 |
| | ರಿಸಪ್ಷನಿಸ್ಟ್ | 4 |
| 118 ಮಾಣಿಕ್ಯ ಪ್ಲಾಸ್ಟಿಕ್‌ಚೆಮ್ (ಪಿ)ಲಿ., | ಫಿಟ್ಟರ್ | 1 |
| ಬೆಳವಾಡಿ ಐ.ಇ. ಮೈಸೂರು -86 | ಎಲೆಕ್ಟ್ರೀಷಿಯನ್ | 1 |
| 119 ಉಗ್ರ ಪ್ರೆಸಿಷಿಯನ್ ಇಂಜಿನ್, ವರ್ಕ್ಸ್, | ಟರ್ನರ್ | 1 |
| 2ನೇ ಹಂತ,ಯಾದವಗಿರಿ | | |
| ಐ.ಇ.ಮೈಸೂರು-20 | | |
| 120 ಅಲ್ಯೂಮಿನಿಯಂ ಟ್ರಾನ್ಸ್‌ಮಿಷನ್ | ಎಲೆಕ್ಟ್ರೀಷಿಯನ್ | 1 |
| ಪ್ರಾಡಕ್ಟ್ಸ್ ಲಿ., ನಂ.33 ಬೆಳವಾಡಿಐ.ಎ. | | |
| ಮೈಸೂರು -6 | | |
| 121 ಕೆ.ಎಂ. ಎಫ್. ಮೈಸೂರು ಡೈರಿ | MRAC | 1 |
| ಬಿ.ಎನ್., ಪುರ ರಸ್ತೆ, ಮೈಸೂರು -11 | ಬಾಯ್ಲರ್ ಅಂಟೆಂಡೆಂಟ್ | 2 |
| 122 ವೆನ್‌ಟ್ರಾನಿಕ್ಸ್, ನಂ. 60/1, 2ನೇ ಕ್ರಾಸ್, | ಎಲೆಕ್ಟ್ರಾನಿಕ್ ಮೆಕಾನಿಕ್ | 1 |
| ಕಾಳಿದಾಸ ರಸ್ತೆ, ಜಯಲಕ್ಷ್ಮಿಪುರಂ | | |
| ಮೈಸೂರು -12 | | |
| 123 ಸಿಟಿಜನ್ ಪ್ರೇವುಡ್ ಇಂಡಸ್ಟ್ರೀಸ್, | | |
| ನಂ. 33-ಎಫ್, 1ನೇ ಹಂತ, | ಬಾಯ್ಲರ್ ಅಟೆಂಡೆಂಟ್ | 1 |
| ವಿಶ್ವೇಶ್ವರ ನಗರ, ಮೈಸೂರು-8 | | |
| 124 ಎ-ಒನ್-ಆಟೋ ಗ್ಯಾರೆಜ್, ITC | ಎಂ. ಎಂ. ವಿ. | 2 |
| ಮಸೀದಿ ಹಿಂಭಾಗ, ಎನ್.ಆರ್‌ಮೊಹಲ್ಲಾ | | |
| ಮೈಸೂರು-7. | | |
| 125 ಗೌರಯ್ಯ ಇಂಡಸ್ಟ್ರೀಸ್, 2ನೇ ಹಂತ, | ಕಾರ್ಪೆಂಟರಿ | 2 |
| ಯಾದವಗಿರಿ, ಮೈಸೂರು-20 | | |
| 126ಶಾಲಿಮಾರ್ ಇಂಜಿನಿಯರಿಂಗ್ ವರ್ಕ್ಸ್ | ಟರ್ನರ್ | 1 |
| 2ನೇ ಹಂತ, ಯಾದವಗಿರಿ | | |
| ಐ.ಇ., ಮೈಸೂರು -20 | | |
| 127 ನಾರಾಯಮ ಇಂಜಿನಿಯರಿಂಗ್ ವರ್ಕ್ಸ್, | ಟರ್ನರ್ | 1 |
| ಸೀಡ್ ನಂ. ಎಂ. 18, ಐ.ಇ. ಯಾದವಗಿರಿ, | | |
| ಮೈಸೂರು -20 | | |
| 128 ಶ್ರೀ ಇಂಡಸ್ಟ್ರೀಸ್, 1ನೇ ಹಂತ, | ಬುಕಂ ಬೈಂಡರ್ | 2 |
| ಅಡ್ಜೆಂಟ್ ಟು St. ಥಾಮಸ್ ಸ್ಕೂಲ್ | | |
| ವಿಶ್ವೇಶ್ವರನಗರ, ಮೈಸೂರು -20 | | |
| 129 ಶಾಂತಮ್ಮತು ಕಂಪನಿ, 43,-ಡಿ, 3ನೇ ಹಂತ, | ವೆಲ್ಡರ್ | 1 |
| ಇಂಡಸ್ಟ್ರಿಯಲ್, ಸಬರ್ಬ್ ಮೈಸೂರು-8 | | |
| 130 ವಿಶ್ವೇಶ್ವರ ಇಂಜಿನಿಯರಿಂಗ್ ವರ್ಕ್ಸ್, | ಟರ್ನರ್ | 1 |
| ಎಪ್ -34, 2ನೇ ಹಂತ, ಐ.ಎಸ್. | | |
| ಮೈಸೂರು-8 | | |
| 131 ಸಿದ್ದಿವಿನಾಯಕ ಮೆಕಾನಿಕ್ ಮತ್ತು | ಎಸ್.ಎಂ. ವರ್ಕರ್ | 2 |
| ಎಕ್ವ್ಯೂಪ್‌ಮೆಂಟ್ಸ್ ನಂ. 10, 3ನೇ ಹಂತ | | |
| ಇಂಡಾಲ್ ಎಸ್ಟೇಟ್, ಮೈಸೂರು -8 | | |
| 132 ಜಾನ್ಸಿ ಮೋಟಾರ್ ವರ್ಕ್ಸ್, | ಮೆಕ್.(ಡಿಸಲ್) | 1 |
| ಎಲೆ ತೋಟ ಹತ್ತಿರ,ಜೆ.ಎಲ್. ಬಿ. ರಸ್ತೆ, | M.M.V | 1 |
| ಮೈಸೂರು -9 | | |
| 133 ಇಂಡಿಯನ್ ಪಿಸ್ಟನ್ ರೀಪ್ಸ್ ಕಂಪನಿ ಲಿ., | ಟರ್ನರ್ | 1 |
| ಪ್ಲಾಟ್ ನಂ. 10,ಬೆಳವಾಡಿ ಐ. ಎ., | | |
| ಮೈಸೂರು-86 | | |
| 134 ಅಮಲಗೇಷನ್ ರಿಕೇಪ್(ಪ್ರೈ.)ಲಿ., | ಫಿಟ್ಟರ್ | 1 |
| ಪಿ.ನಂ. 9, ಬೆಳವಾಡಿ ಐ.ಎ. | ಎಸ್.ಎಂ. ವರ್ಕರ್ | 1 |
| ಮೈಸೂರು -86 | | |
| 135ರಾನಿ ಮದ್ರಾಸ್ ಲಿ., ನಂ. 70/6ಎ. | ಫಿಟ್ಟರ್ | 1 |
| ಹೂಟಗಳ್ಳಿ ಐ.ಎ., ಬೆಳವಾಡಿ | ಟರ್ನರ್ | 2 |
| ಮೈಸೂರು -86 | ವೆಲ್ಡರ್ | 1 |
| 136 ಆಲ್‌ಫಾಸ್ಟ್‌ನಸ್‌ಸಿ. 102, 2ನೇ ಹಂತರ | ಫಿಟ್ಟರ್ | 1 |
| ಐ.ಇ. ಯಾದವಗಿರಿ, ಮೈಸೂರು-20 | ಟರ್ನರ್ | 1 |
| | ಮೆಕಾನಿಕ್ಸ್ | 1 |

**20ನೇ ಪುಟಕ್ಕೆ**

ನಿಜವಾದ ಪ್ರೇಮವೆ ಶಾಶ್ವತ ಸಂಬಂಧಗಳ ಅಡಿಗಲ್ಲು

17ನೇ ಪುಟದಿಂದ

| | | |
|---|---|---|
| 137 ಮಂಗಳೂರು ಮೋಟಾರ್ಸ್ ವರ್ಕ್ಸ್ | ಮೆಕ್ (ಡೀಸಲ್) | 1 |
| ದಿವಾನ್ಸ್ ರಸ್ತೆ, ಮೈಸೂರು-10 | ಎಂಎಂ.ವಿ. | 1 |
| | ಆಟೋ (ಎಲೆಕ್ಟ್ರಿ.) | 1 |
| 138 ಎಂ.ಜಿ.ಎಂ. ಇಂಡಸ್ಟ್ರೀಸ್, 80/81 | ಫಾರ್‌ಗೇಟ್ ಮತ್ತು | 2 |
| 5ನೇ ಮೈಲ್, ಕೆ.ಆರ್.ಎಸ್. ರಸ್ತೆ | ಹೀಟ್ ಟ್ರೀಟರ್ | |
| ಮೇಟಗಳ್ಳಿ, ಮೈಸೂರು -16 | | |
| 139 ಓರ್ಸ್ ಎಲೆಕ್ಟ್ರಾನ್ಸ್ ಲಿ., ನಂ. 45 | ಎಲೆಕ್ಟ್ರೀಷಿಯನ್ | 2 |
| ಕೆ.ಆರ್. ಎಸ್. ರಸ್ತೆ, ಮೈಸೂರು | | |
| 140 ಮೆಡೋನಾ ಇಂಜಿನಿಯರಿಂಗ್ ವರ್ಕ್ಸ್ | ವೆಲ್ಡರ್ | 1 |
| ಸಿ 70ಐ.ಇ., ಯಾದವಗಿರಿ, ಮೈಸೂರು-20 | | |
| 141 ಮೋಹನ್ ಉಲ್ಲನ್‌ಮಿಲ್ಸ್ ಲಿ., | ಬಾಯ್ಲರ್ ಅಟೆಂಡೆಂಟ್ | 2 |
| ಪಿ.ಬಿ. ನಂ. 9.ಬೆಳತೂರು ವಿಲೇಜ್, | ವಿಂಡರ್ (ಟೆಕ್ಸ್) | 1 |
| ಮೈಸೂರು-16 | | |
| 142 ಸ್ಟೀಲ್ ಟ್ರೇಡರ್ಸ್ ಮೈಸೂರು (ಪಿ)ಲಿ., | ಎಪ್ ಮತ್ತು | |
| ನಂ. 94, ಕೆ.ಆರ್.ಎಸ್. ರಸ್ತೆ, | ಹೆಚ್ ಟ್ರೀಟರ್ | 2 |
| ಮೇಟಗಳ್ಳಿ,, ಮೈಸೂರು-16 | | |
| 143 ಮುರುಗಪ್ಪ ಎಲೆಕ್ಟ್ರಾನಿಕ್ಸ್ ಲಿ., | ಫಿಟ್ಟರ್ | 3 |
| ನಂ. 305, ಹೆಬ್ಬಾಳ್ ಐ.ಎ. ಮೈಸೂರು | ಎಲೆಕ್ಟ್ರೀಷಿಯನ್ | 1 |
| | ಎಂ.ಎ.ಆರ್.ಸಿ | 1 |
| 144 ಶ್ರೀದೇವಿ ಟೆಕ್ಸ್‌ಟೈಲ್ಸ್(ಪಿ)ಲಿ., | ಡೂಫರ್ ಕಂ ಫಿಸರ್ | 1 |
| ಚಾಮರಾಜನಗರ | ಟೆಂಟರ್ (ಟೆಕ್ಸ್) | 2 |
| | ವಿಂಡರ್ " | 1 |
| 145 ಎಂ. ಜಿ. ಪೀರ್ ಮತ್ತು ಸನ್ಸ್, ಹಿಂದೂಸ್ಥಾನ್ | ಟರ್ನರ್ | 1 |
| ಇಂಜಿನಿಯರಿಂಗ್ ವರ್ಕ್ಸ್, | | |
| ಮಿಷನ್ ಆಸ್ಪತ್ರೆ ಸರ್ಕಲ್, ಮೈಸೂರು -21 | | |
| 146 ಲಕ್ಕಿ ಇಂಜಿನಿಯರಿಂಗ್ ವರ್ಕ್ಸ್ | ಟರ್ನರ್ | 1 |
| ನಂ. 331-35,ಕೆ.ಟಿ. ಸ್ಟ್ರೀಟ್, | ವೆಲ್ಡರ್ | 1 |
| ಮೈಸೂರು-24 | ವಿಂಡರ್ (ಆರ್ಮ್) | 1 |
| 147 ಶ್ರೀ ಮೀನಾಕ್ಷಿ ಸುಂದರಮ್ಮ ಟೆಕ್ಸ್‌ಟೈಲ್ ಲಿ., | ಫಿಟ್ಟರ್ | 3 |
| ಪಿ.ನಂ. 10 ಕೆ.ಆರ್. ನಗರ ರಸ್ತೆ | ಎಲೆಕ್ಟ್ರೀಷಿಯನ್ | 1 |
| ಹುಣಸೂರು | ಲೆಂಟರ್(ಟೆಕ್ಸ್) | 2 |
| 148 ಮೈಸೂರು ಪ್ಯಾನಲ್ ಮತ್ತು ಬೋರ್ಡ್ (ಪಿ)ಲಿ. | ಬಾಯ್ಲರ್ ಅಟೆಂಡೆಂಟ್ | 1 |
| ಬ್ರಾಂಚ್ 7 ಎ, ಐ.ಎ. ತಾಂಡವಪುರ | | |
| ನಂಜನಗೂಡು | | |
| 149 ರಾಯಲ್ ಮೋಟಾರ್ ಗ್ಯಾರೆಜ್, ITC ಮೆಸ್ಕೋ | ಮೆಕಾ. (ಡೀಸಲ್) | 1 |
| ಹಿಂಭಾಗ,ಎನ್. ಆರ್. ಮೊಹಲ್ಲ, | | |
| ಮೈಸೂರು-7 | | |
| 150 ಬಣ್ಣಾರಿ ಅಮ್ಮನ್ ಶುಗರ್ ಲಿ., | ಫಿಟರ್ 2ಎಲೆಕ್ಟ್ರಿಷಿಯನ್ | 1 |
| ತಗಡೂರು ರಸ್ತೆ, ನಂಜನಗೂಡು | ವೆಲ್ಡರ್ 1ಪಿ.ಟಿ ಅಂಟೆಂ. | 1 |
| | ಬಿ/ಅಟೆಂ. 2 S.T.ಅಪರೇ. | 1 |
| 151 ಕರ್ನಾಟಕ ಟೆಲಿಕೇಬಲ್ಸ್ ಲಿ., | ಫಿಟರ್ 7 | |
| 349 ಹೆಬ್ಬಾಳ್ | ಎಲೆಕ್ಟ್ರಾನಿಕ್ ಮೆಕಾ. | 2 |
| ಐ.ಎ., ಹೂಟಗಳ್ಳಿ, ಮೈಸೂರು -86 | ಎಲೆಕ್ಟ್ರಿಷಿಯನ್ | 4 |
| 152 ಮನ್‌ದೇವಿ ಮೋಟಾರ್ಸ್ | ಎಂ.ಎಂ.ವಿ | 1 |
| ವಿನೋಬ ರಸ್ತೆ, ಮೈಸೂರು-5 | | |
| 153 ಎ.ವಿ.ಆರ್. ಎಲೆಕ್ಟ್ರಾನಿಕ್(ಪಿ)ಲಿ., | ಎಲೆಕ್ಟ್ರಾನಿಕ್ ಮೆಕ್ಯಾನಿಕ್ | 2 |
| ಸರಸ್ವತಿಪುರಂ, 9ನೇ ಕ್ರಾಸ್, | | |
| ಕುವೆಂಪು ನಗರ, ಮೈಸೂರು-23 | | |

16ನೇ ಪುಟದಿಂದ

"ಹೆಣದಿಂದ !"

"ವಾಟ್...... !"

"ಹೌದು ನನಗೆ ಉಳಿದ ಹೆಣಗಳನ್ನು ಹಿಂದೆ ಕಂಡಿದ್ದಾಗ ಯಾವ ರೀತಿಯ ವಾಸನೆ ಬಂದಿರಲಿಲ್ಲ. ನನಗೆ ಅನಿಸುತ್ತೆ ಯಾವುದೋ ಗುಂಗಿನಲ್ಲಿ ನಾವ್ಯಾರು ಗಮನಿಸಲಿಲ್ಲ ಅಂತ."

"ಎಂತಹ ವಾಸನೆ ಅಂತ ಹೇಳುತ್ತೀರ?"

"ಗಂಧದ ವಾಸನೆಯೊಂದಿಗೆ ಅದೇನೋ ವಿಚಿತ್ರ ರೀತಿಯ ಕಂಪು, ಪರಿಮಳ ಬೆರೆತುಕೊಂಡಿತ್ತು."

ಪೋಲಿಸ್ ಅಧಿಕಾರಿ "ಅದು ಸರಿ...... ಈ ವಾಸನೆಗೂ ನಡೆದಿರುವ ಪ್ರಕರಣಕ್ಕೂ ಏನಾದರೂ ಸಂಬಂಧ ಇದೆಯೆ? ಅದರ ಬಗ್ಗೆ ಹೇಳುತ್ತೀರ?"

ಶ್ರೀಕಂತ, ಪೂಜಾರಿ ಭಯಮಿಶ್ರಿತ ಕುತೂಹಲದಿಂದ ಕೇಳುತ್ತಿದ್ದಾರೆ !

ರೇವತಿ "ನನಗೆ ಅನಿಸುತ್ತೆ ಈ ನಿಗೂಢತೆಯ ಬಹುಪಾಲು ಈ ವಿಚಿತ್ರ ವಾಸನೆಯಿಂದ ನಡೆಯುತ್ತಿದೆ ಅಂತ. ಈ ವಾಸನೆ ಹೆಣದಿಂದ ಬರುತ್ತಿತ್ತು. ವಾಸನೆ ಇರುವ ತನಕ ಸರ್ಪಗಳು ದೇಹಕ್ಕೆ ಸುತ್ತಿಕೊಂಡಿದ್ದವು ! ವಾಸನೆಯ ಸೊಡರು ಕಡಿಮೆಯಾದ ಕೂಡಲೇ ಹಾವುಗಳು ಹೊರಟು ಹೋದವು ! ಸರ್ಪಗಳನ್ನು ಬಹುಶಃ ಈ ವಾಸನೆಯೇ ಆಕರ್ಷಿಸಿರಬೇಕು." ಎಂದು ಪರಮ ರಹಸ್ಯವನ್ನೇ ತಿಳಿಸಿದ್ದಳು !

(ಮುಂದುವರೆಯುತ್ತದೆ)

| | | |
|---|---|---|
| 154 ಮಾಣಿಕ್‌ಸನ್ ಇಂಜಿನಿರ್ ವರ್ಕ್ಸ್, | ಫಿಟ್ಟರ್ | 1 |
| ನಂ. ಸಿ 69ಯಾದವಗಿರಿ ಐ.ಇ., | ಟರ್ನರ್ | 1 |
| ಮೈಸೂರು -20 | | |
| 155 ಎಂ.ಎಸ್. ಇಂಡಸ್ಟ್ರೀಸ್, ನಂ 198 | ವೆಲ್ಡರ್ | 1 |
| ಅಶೋಕ ರಸ್ತೆ, ಮೈಸೂರು-1 | | |
| 156 ಮಾರೀಸ್ ಸ್ಪಿನ್ನರ್ಸ್ ಪ್ರೈ.ಲಿ., | ಫಿಟ್ಟರ್ 3ಎಲೆಕ್ಟ್ರಿಷಿಯನ್ | 1 |
| ಕಟ್ಟೆ ಮುದುವ್‌ಡಿ, ಹುಣಸೂರು | M.W.M | 2 |
| | ವೆಲ್ಡರ್ ಟೆಕ್ಸ್‌ಟೈಲ್ | |
| | ವೆಲ್ಡರ್ 1ಡಪರ್‌ಕಂಪಿಸರ್ | 1 |
| 157 ವಿಲಾನ್ ಟೆಕ್ಸ್‌ಟೈಲ್ಸ್ (ಪಿ) ಲಿ., | ಡಫರ್ ಕಂ ಫಿಸರ್ | 1 |
| ಅಂಕಶೆಟ್ಟಿಪುರ, ಚಾಮರಾಜನಗರ | ವೆಲ್ಡರ್ (ಟೆಕ್ಸ್)2 | |
| | ವೈಂಡರ್ | 2 |
| 158 ಮಾಲತಿ ಎಂಟರ್‌ಪ್ರೈಸಸ್, ಡಿ-43, | ಶೀಟ್ ಮೆಟಲ್ ವರ್ಕರ್ | 1 |
| ಮೇಟಗಳ್ಳಿ ಐ.ಇ., ಮೈಸೂರು-16 | | |
| 159 ನ್ಯೂ ಮಾರ್ಡನ್ ಹೆಚ್ ಇಂಡಸ್ಟ್ರೀಸ್, | ಫಿಟ್ಟರ್ | 1 |
| ನಂ. 3363, ಎಂ. 25ಪುಲಿಕೇಶಿ ರಸ್ತೆ, | ವೆಲ್ಡರ್ | 1 |
| ಮೈಸೂರು-16 | | |
| 160 ಸರ್ರೇ ಇಂಡಸ್ಟ್ರೀಸ್, | ಎಲೆಕ್ಟ್ರೀಷಿಯನ್ | 1 |
| 1ನೇ ಹಂತ, ನಂ. 10, | | |
| ಪರಮಹಂಸ ರಸ್ತೆ, ಯಾದವಗಿರಿ, | | |
| ಮೈಸೂರು -20 | | |

ಮುಂದುವರಿಯುತ್ತದೆ.

ಧಾರಣೆಯಿಂದ ಧೋರಣೆ - ಕಳುಹಿಸಿದವರು : ಬೈತಡ್ಕ ದೇವಮ್ಮ

## ಕೃತಜ್ಞತೆ ಮತ್ತು ವಂದನೆ

ಶ್ರೀ ಕೋಳು ಮುಡಿಯನ ಟಿ. ರಾಮಯ್ಯ



ಜನನ : 1929
ಮರಣ : 27-6-2000

ನನ್ನ ಪತಿ ಕೋಳುಮುಡಿಯನ ರಾಮಯ್ಯನವರು ದಿನಾಂಕ 27-6-2000ದಂದು ವೈಕುಂಠವಾಸಿಯಾದ ಸಂದರ್ಭದ ಅಂತ್ಯ ಸಂಸ್ಕಾರದಲ್ಲಿ ಪಾಲ್ಗೊಂಡು ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಸಂತೈಸಿ ಸಹಕರಿಸಿದ ನನ್ನ ಬಂಧು ಬಳಗದವರಿಗೂ, ಗ್ರಾಮಸ್ಥರಿಗೂ ಹಾಗೂ ಹಿತೈಷಿಗಳೆಲ್ಲರಿಗೂ ನಮ್ಮ ಹೃತ್ಪೂರ್ವಕ ಕೃತಜ್ಞತೆಗಳು.

ಅಂತೆಯೇ ತಾ 12-7-2000 ದಂದು ಗಾಳಿಬೀಡು ಗ್ರಾಮದ ನಮ್ಮ ಸ್ವಗೃಹದಲ್ಲಿ ಮೃತರ ತಿಥಿ ಕರ್ಮಾಂತರವನ್ನು ಏರ್ಪಡಿಸಿದ ಸಂದರ್ಭದಲ್ಲಿ ಸರ್ವ ಬಂಧು ಮಿತ್ರರು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಿರುವುದಕ್ಕೆ ವಂದನೆಗಳು.

ದುಃಖತಪ್ತರಾದ : ಪತ್ನಿ : **ಪಾರ್ವತಿ,**
ಮಗ : **ಅನಂತ್‌ಕುಮಾರ್**, ಸೊಸೆ : **ಪ್ರೇಮ ಮತ್ತು**
**ಸಹೋದರ, ಸಹೋದರಿಯರು, ನಾದಿನಿ, ಬಾವಂದಿರು,**
**ಮಕ್ಕಳು, ಅಳಿಯಂದಿರು ಹಾಗೂ ಮೊಮ್ಮಕ್ಕಳು.**
ಶ್ರೀನಿವಾಸ ನಿಲಯ, ಗಾಳಿಬೀಡು, ಕೊಡಗು.

## ತಿದ್ದುಪಡಿ

ಸಂಪುಟ 4, ಸಂಚಿಕೆ 11ರ ಪುಟ 7ರಲ್ಲಿ ಪ್ರಕಟಗೊಂಡ ಪ್ರೊ|| ಪೂಜಾರಿ ಮೊಣ್ಣಪ್ಪನವರು ಬರೆದ ಬೆಂಗಳೂರಿನ ಗೌಡ ಸಮಾಜ ಸಾಧಿಸಿದ ರೂಪು ರೇಷೆಗಳು ಎಂಬ ಶೀರ್ಷಿಕೆಯ ಎಡ ಮಗ್ಗುಲಿನ ಕೊನೆಯ ನಾಲ್ಕನೆ ಸಾಲಿನಲ್ಲಿ " ಬಾಡಿಗೆಗೆ ಕೊಟ್ಟು, ತಿಂಗಳಿಗೆ 80ಸಾವಿರ ರೂಪಾಯಿ ಬಾಡಿಗೆ ಬರುತ್ತಿದ್ದು" ಎನ್ನುವುದನ್ನು 30 ಸಾವಿರವೆಂತ ಮಾನ್ಯ ಓದುಗರು ಓದುವಂತೆ ವಿನಂತಿ. ಮುದ್ರಣ ದೋಷಕ್ಕೆ ವಿಷಾದಿಸುತ್ತೇವೆ.

**— ಸಂಪಾದಕಿ.**

## ಸಂಸಾರದಲ್ಲಿ ಬಿರುಕು ಬಿತ್ತುತ್ತಿರುವ ಸಾಫ್ಟ್‌ವೇರ್

ಇಂಟರ್‌ನೆಟ್‌ನಲ್ಲಿ ತಮ್ಮ ಮಕ್ಕಳು ಯಾವ್ಯಾವ ವೆಬ್‌ಸೈಟ್‌ಗಳಿಗೆ ಭೇಟಿ ನೀಡುತ್ತಾರೆ ಎಂದು ತಿಳಿಯುವುದೇ ಪೋಷಕರಿಗೆ ದೊಡ್ಡ ಸಮಸ್ಯೆ. ಪೋಷಕರ ಈ ಸಮಸ್ಯೆ ಹೋಗಲಾಡಿಸಲೆಂದೇ 'ಸ್ಪೆಕ್ಟರ್' ಎಂಬ ಒಂದು ಸಾಫ್ಟ್‌ವೇರ್ ಮಾರುಕಟ್ಟೆಗೆ ಬಂತು. ಆದರೆ ಈಗ ಈ ಸಾಫ್ಟ್‌ವೇರ್‌ನ 'ದುರ್ಬಳಕೆ' ಹೆಚ್ಚಾಗುತ್ತಿದ್ದು ಭಾರೀ ವಿವಾದಕ್ಕೆ ಕಾರಣವಾಗಿದೆ.

ಮಕ್ಕಳ ಚಟುವಟಿಕೆ ಗಮನಿಸುವುದಕ್ಕಿಂತ ಹೆಚ್ಚಾಗಿ ಈ ಸಾಫ್ಟ್‌ವೇರ್ ಈಗ ಮಕ್ಕಳ ಅಪ್ಪ ಅಮ್ಮಂದಿರ ಚಲನವಲನದ ಮೇಲೆಯೇ ತನ್ನ ಸೂಜಿಗಣ್ಣು ನೆಟ್ಟಿದೆ. ತನ್ನ ಬಾಳಸಂಗಾತಿ ಇಂಟರ್‌ನೆಟ್‌ನಲ್ಲಿ ನಡೆಸುವ 'ವ್ಯವಹಾರ' ಗಳನ್ನು ತಿಳಿದುಕೊಳ್ಳಲು ಗಂಡ–ಹೆಂಡತಿಯರು 'ಸ್ಪೆಕ್ಟರ್'ನ ಮೊರೆ ಹೋಗಿದ್ದಾರಂತೆ. ಕಂಪೆನಿಗಳ ಮಾಲಿಕರು ಕೂಡಾ ತಮ್ಮ ನೌಕರರು ಕಚೇರಿಯಲ್ಲಿ ಕುಳಿತು ಇಂಟರ್‌ನೆಟ್‌ನಲ್ಲಿ ನಡೆಸುವ ಚಟುವಟಿಕೆಗಳನ್ನು ಗಮನಿಸಲು ಇದನ್ನು ಬಳಸುತ್ತಿದ್ದಾರಂತೆ.

ತನ್ನ ಗಂಡ ಅಶ್ಲೀಲ ಸೈಟ್ ಮತ್ತು ಹರಟೆ ಕೊಠಡಿ (ಚಾಟ್ ರೂಮ್)ಗಳಿಗೆ ಭೇಟಿ ನೀಡುವುದನ್ನು ತಿಳಿದ ಮಡದಿಯೊಬ್ಬಳು ಆತನಿಂದ ವಿಚ್ಛೇದನ ಪಡೆದಿರುವುದು ನ್ಯೂಯಾರ್ಕ್‌ನಿಂದ ವರದಿಯಾಗಿದೆ. ಇನ್ನೊಂದು ಪ್ರಕರಣದಲ್ಲಿ ಮಡದಿ ತನ್ನ ಬಾಯ್‌ಫ್ರೆಂಡ್‌ಗಳಿಗೆ ಕಳುಹಿಸುತ್ತಿದ್ದ ಇ–ಮೇಲ್‌ಗಳನ್ನು ಸಂಗ್ರಹಿಸಿ ಗಂಡ ಓದಿರುವುದು ಗೊತ್ತಾಗಿದೆ.

ಕಂಪ್ಯೂಟರ್‌ಗಳಿಂದ ಕಳುಹಿಸುವ ಇ ಮೇಲ್, ಬಳಕೆದಾರರು ಭೇಟಿ ನೀಡುವ ವೆಬ್‌ಸೈಟ್, ತಕ್ಷಣ ಬರುವ ಸಂದೇಶ, ಪಾಸ್‌ವರ್ಡ್ ಹೀಗೆ ಪ್ರತಿಯೊಂದನ್ನು ಕೂಡಾ ಈ 'ಸ್ಪೆಕ್ಟರ್' ಸಂಗ್ರಹಿಸಿಡುತ್ತದೆ. ಕಂಪ್ಯೂಟರ್ ಬಳಸುವವರಿಗೆ ಇದು ಗೊತ್ತೇ ಆಗುವುದಿಲ್ಲ. ಹಾಗೆ ಸಂಗ್ರಹಿಸಿದ ಮಾಹಿತಿಯನ್ನು ಅನಂತರ ಆರಾಮವಾಗಿ ಕುಳಿತು ನೋಡಬಹುದು. ಕೇವಲ 50 ಡಾಲರ್ (ಸುಮಾರು 2,200 ರೂಪಾಯಿ) ಗೆ ದೊರೆಯುವ ಕಾರಣ ಅಂಥಾ ದುಬಾರಿಯೂ ಅಲ್ಲ.

ಆದರೆ ಈ ಸಾಫ್ಟ್‌ವೇರ್ ಈಗ ನೈತಿಕ ಪ್ರಶ್ನೆಯನ್ನು ಎಬ್ಬಿಸಿದೆ. ಮಾನವನ ಸಂಬಂಧಗಳಿಗೇ ಕುತ್ತು ತರುವಂಥ ಈ ಸಾಫ್ಟ್‌ವೇರ್‌ನ ಬಳಕೆ ಅಮೇರಿಕದಲ್ಲಿಯೇ ಭಾರೀ ವಿವಾದಕ್ಕೆ ಕಾರಣವಾಗಿದೆ. ಅಲ್ಲೇ ಅಷ್ಟೊಂದು ಗದ್ದಲ ಆಗಬೇಕಾದರೆ ಭಾರತದಂಥ ದೇಶಗಳಲ್ಲಿ ಇದು ಇನ್ನೆಷ್ಟು ಅನಾಹುತ ಮಾಡಬಹುದು?

KA/SK/MYS-88 10-01-96 TCI Kar. 09592

# "ಹಸೆಮಣೆ" ಸಾರ್ಥಕ ಪ್ರಯತ್ನ

## ವಿಮರ್ಶೆ




ಕೊಡಗು ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನೆಲೆಗೊಂಡಿರುವ ಹತ್ತು ಕುಟುಂಬ ಹದಿನೆಂಟು ಗೋತ್ರದ ಗೌಡ ಜನಾಂಗದವರ ಸೋಬಾನೆಗಳ ಸಂಗ್ರಹವೇ 'ಹಸೆಮಣೆ'. ಶ್ರೀಮತಿ ಬೈತಡ್ಕ ಜಾನಕಿ ಬೆಳ್ಯಪ್ಪನವರು ಸಂಗ್ರಹಿಸಿ ಸಂಕಲಿಸಿದ 108 ಪುಟಗಳ ಈ ಪುಸ್ತಕ ನಿಜಕ್ಕೂ ಜನಾಂಗಕ್ಕೊಂದು ಅಮೂಲ್ಯ ಕೊಡುಗೆ. ಶ್ರೀಗಂಧದ ಕಲಾತ್ಮಕವೂ ಅಪರೂಪವೂ ಆದ ಹಸೆಮಣೆಯ ಸುಂದರ ಚಿತ್ರವನ್ನೊಳಗೊಂಡ ಇದರ ಮುಖಪುಟ ಒಂದು ವಿಶೇಷ ಆಕರ್ಷಣೆಯಾಗಿದೆ. ಒಳ ಪುಟಗಳಲ್ಲಿನ ಜನಾಂಗದ ಕುಲದೈವ ಶ್ರೀ ವೆಂಕಟರಮಣ ಸ್ವಾಮಿಯ ಚಿತ್ರ, ಶಂಗೇರಿ ಶಾರದಾಂಬೆಯ ಮತ್ತು ಈಗಿನ ಶೃಂಗೇರಿ ಸ್ವಾಮಿಗಳ ಚಿತ್ರ ಪುಸ್ತಕದ ಶೋಭೆಯನ್ನು ಹೆಚ್ಚಿಸಿದೆ. 'ಶಕ್ತಿ'ಪ್ರಿಂಟರ್ಸ್ ಮಡಿಕೇರಿ ಇವರ ಸುಂದರ ಮುದ್ರಣ ಮತ್ತು ಹಾಲು ಬಿಳುಪಿನ ಪುಟಗಳು ಓದುಗರನ್ನು ಆಕರ್ಷಿಸದಿರದು.

ನಾವಿಂದು ಹಸೆಮಣೆಯಾಗಿ ಸಾಮಾನ್ಯ ಮಣೆಗಳನ್ನೇ ಉಪಯೋಗಿಸುತ್ತಿದ್ದರೂ, ಈ ಪುಸ್ತಕದ ಹಸೆ ಬರೆಯುವ ಹಾಡು (ಪುಟ16-17) ಆಲದ ಮಣೆಗ್ಹೇಳಿ ಆರೇಳು ದಿನವಾದೊ, ಹಲಸಿನ ಮಣೆಗ್ಹೇಳಿ ಹತ್ತೆಂಟು ದಿನವಾದೊ, ಗಂಧದ ಮಣೆಗ್ಹೇಳಿ ತಿಂಗಳು ದಿನವಾದೊ-ಎಂಬ ಸಾಲುಗಳನ್ನೊಳಗೊಂಡಿರುವುದರಿಂದ ಹಿಂದೆ ಆಲ, ಹಲಸು ಮತ್ತು ಗಂಧದ ಹಸೆಮಣೆಗಳನ್ನು ಉಪಯೋಗಿಸುತ್ತಿದ್ದರೆಂಬ ವಿಷಯ ನಮಗೆ ಮನವರಿಕೆಯಾಗುತ್ತದೆ.

'ಹಸೆಮಣೆ"ಹೆಸರೇ ಸೂಚಿಸುವಂತೆ ವಧೂ-ವರರು ಹಸೆಮಣೆಯನ್ನೇರುವ ಬಾಳಿನ ಪ್ರಥಮ ಪ್ರಮುಖ ಘಟ್ಟವಾದ ವಿವಾಹ ಕಾಲದಲ್ಲಿ ಸುಮಂಗಲೆಯರು ಹಾಡುವ ಸೋಬಾನೆ ಹಾಡುಗಳ ಸಂಗ್ರಹವಾಗಿದೆ. ಅಣಿಮುತ್ತುಗಳನ್ನಾಯಲು ಆಳ ಸಮುದ್ರದಲ್ಲಿ ಮುಳುಗಬೇಕಾಗುತ್ತದೆ. ಆಯ್ದ ಮುತ್ತುಗಳನ್ನು ಪೋಣಿಸಿ ಮುತ್ತಿನ ಹಾರ ಕಟ್ಟಬೇಕಾಗುತ್ತದೆ. ಹೀಗೆ ಹಲವೆಡೆ ಚದುರಿಹೋಗಿದ್ದ ಬಿಡಿ ಮುತ್ತುಗಳನ್ನಾಯ್ದು ಈ ಸುಂದರವಾದ ಮುತ್ತಿನ ಹಾರವನ್ನು ಪೋಣಿಸಿದ್ದಾರೆ ಶ್ರೀಮತಿ ಬೈತಡ್ಕ ಜಾನಕಿ ಬೆಳ್ಯಪ್ಪನವರು. ಅವರ ಶ್ರಮ, ಶ್ರದ್ಧೆ ಶ್ಲಾಘನೀಯ.

ಈ ಪುಸ್ತಕದ ಹಲವು ಹಾಡುಗಳನ್ನು ಹಿಂದಿನ ಗೌಡ ಸಂಸ್ಕೃತಿ ಪುಸ್ತಕಗಳಿಂದಲೂ, ಆಸಕ್ತರಿಂದಲೂ ಸಂಗ್ರಹಿಸಿ, ತಿದ್ದಿ, ಪ್ರಕಟಿಸುವುದರ ಮೂಲಕ ಸಂಗ್ರಾಹಕರು ಸ್ತುತ್ಯಾರ್ಹ ಕಾರ್ಯವೆಸಗಿದ್ದಾರೆ. ಏಕೆಂದರೆ ಲಯವಾಗುತ್ತಿದ್ದ ಈ ಜನಪದ ಸಾಹಿತ್ಯ ಪ್ರಕಾರವನ್ನು ಸಂಗ್ರಹಿಸಿ ಮುಂದಿನ ಪೀಳಿಗೆಗೆ ರಕ್ಷಿಸಿಡುವ ಘನವಾದ ಕಾರ್ಯ ಇದಾಗಿದೆ. ಇಲ್ಲಿನ ಹಾಡುಗಳ ಭಾವದ ಸೊಗಸು, ಧ್ವನಿ, ದೇಸಿಯ ಸರಳತೆ ಮತ್ತು ಶೈಲಿ ಬೆರಗುಗೊಳಿಸುವಂತಹುದು. ಎಣ್ಣೆ ಶಾಸ್ತ್ರದ ಸೋಬಾನೆ ಹಾಡೂ (ಪುಟ 1)

ಶಿವಶಿವಾ ಜಯ ಜಯಾ | ಶ್ರೀ ಗೌರಿ ಮನೋಹರಾ

ಕಾರುಣ್ಯ ಸಾಗರ | ಕರುಣೇವ ಪತಿಯೆ ಎಂಬಲ್ಲಿಯ ಪ್ರಾಸಾನುಪ್ರಾಸ ಸಾಮಾನ್ಯವಾಗಿ ಇತರ ಹಾಡುಗಳಲ್ಲೂ ಕಂಡು ಬರುತ್ತದೆ.

ಈ ಸಂಕಲನದಲ್ಲಿ ಕೇವಲ ಸೋಬಾನೆ ಪದಗಳಲ್ಲದೆ, ಜೋಗುಳದ ಹಾಡು (ಪುಟ 83) ಹರಿಸೇವೆ ಹಾಡುಗಳು, ಸತ್ಯನಾರಾಯಣ ಪೂಜೆಯ ಹಾಡು (ಪುಟ 92), ಹೊನ್ನಮ್ಮನ ಕೆರೆ ಹಾಡು ಮತ್ತು ಸುವ್ವಿ ಹಾಡುಗಳೂ ಇವೆ.

ಈ ಪುಸ್ತಕದಲ್ಲಿ ದೋಷಗಳಿಲ್ಲವೆಂದಲ್ಲ. ಕೆಲವೊಂದು ಅಚ್ಚಿನ ದೋಷಗಳಿವೆ. ಪಾಠಾಂತರಗಳ ಬಗ್ಗೆ ವಿವರಿಸುವ ಅಡಿ ಟಿಪ್ಪಣಿ ಇಲ್ಲದಿರುವ ಕೊರತೆ ಇದೆ.

ಕುಲ್ಲಚನ ಕಾರ್ಯಪ್ಪ, ಕುಂಬಳದಾಳು ಗ್ರಾಮ

## ಮಿಲಿಟರಿ ಪಿಂಚಣಿದಾರರ ಮಕ್ಕಳಿಗೆ ಶಿಷ್ಯವೇತನ

ಸೈನಿಕ ಕಲ್ಯಾಣ ಮತ್ತು ಪುನರ್‌ವಸತಿ ಇಲಾಖೆ, ಕರ್ನಾಟಕ ಮೂಲನಿವಾಸಿ ಮಿಲಿಟರಿ ಪಿಂಚಣಿದಾರರ ಮಕ್ಕಳಿಗೆ 2000-2001ನೇ ಸಾಲಿಗಾಗಿ ಶಿಷ್ಯವೇತನ ನೀಡಲು ಅರ್ಹರಿಂದ ಅರ್ಜಿ ಆಹ್ವಾನಿಸಿದೆ. ಒಂದನೇ ತರಗತಿಯಿಂದ ಅಂತಿಮ ವರ್ಷದ ಪದವಿ ಮತ್ತು ಡಿಪ್ಲೊಮಾವರೆಗೆ ವ್ಯಾಸಂಗ ಮಾಡುತ್ತಿರುವ ರಾಜ್ಯ ಮಿಲಿಟರಿ ಪಿಂಚಣಿದಾರರ ಮಕ್ಕಳಿಗೆ ಶಿಷ್ಯವೇತನ ನೀಡಲಾಗುವುದು.

ಐಟಿಐ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ಇದಕ್ಕೆ ಅರ್ಹರಲ್ಲ. ಜುಲೈ 1ರಿಂದ ಅರ್ಜಿ ನಮೂನೆಗಳನ್ನು ಉಚಿತವಾಗಿ ಆಯಾ ಜಿಲ್ಲೆಗಳಲ್ಲಿರುವ ಸೈನಿಕ ಕಲ್ಯಾಣ ಮತ್ತು ಪುನರ್‌ವಸತಿ ಇಲಾಖೆಯ ಉಪ ನಿರ್ದೇಶಕರ ಕಚೇರಿಯಿಂದ ಪಡೆಯಬಹುದು. ವಿದ್ಯಾರ್ಥಿಗಳು ಭರ್ತಿ ಮಾಡಿದ ಅರ್ಜಿಗಳನ್ನು ವ್ಯಾಸಂಗ ಮಾಡುತ್ತಿರುವ ವಿದ್ಯಾಸಂಸ್ಥೆಗಳಿಂದ ದೃಢೀಕರಿಸಿರಬೇಕು. ಭರ್ತಿ ಮಾಡಿದ ಅರ್ಜಿಗಳನ್ನು ಆಯಾ ಜಿಲ್ಲೆಗಳ ಉಪ ನಿರ್ದೇಶಕರುಗಳ ಕಛೇರಿಗೆ ಸೆಪ್ಟಂಬರ್ 30ರೊಳಗೆ ಸಲ್ಲಿಸಲು ಪ್ರಕಟಣೆ ಕೋರಿದೆ.

**Kodagu Sangathi** Kannada Fortnightly Edited, Published, Printed & Owned by Pattada P. Sheelamani, No. 35, Savitha Nilaya, I Cross, 4th Block, **Jayalaxmipuram, Mysore - 12.** And **SANGATHI** Office ✆ : **0821/516771.** And Printed at Sri Guru Raghavendra Printers, 489, Devamba Agrahara, K. R. Mohalla, Mysore - 24. ✆ : 0821/431792.